ಕೈಗಾರಿಕ ಮತ್ತು ವಿದ್ಯುಚ್ಛಕ್ತಿ ಸಚಿವರಿಂದ ಉತ್ತರ

† ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—ಸನ್ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಹಿರಿಯ ಸದಸ್ಯರಾದ ಶ್ರೀಮಾನ್ ಏಕಾಂತಯ್ಯನವರು ಚರ್ಚೆ ಪ್ರಾರಂಭ ಮಾಡಿದರು. ಈಗ ತಾನೆ ಇನ್ನೊಬ್ಬ ಹಿರಿಯ ಸದಸ್ಯರಾದ ಶ್ರೀಮಾನ್ ಅನಂತ ಕೃಷ್ಣರವರು ಚರ್ಚೆಯನ್ನು ಮುಕ್ತಾಯ ಮಾಡಿದ್ದಾರೆ. ಈಗ ಸುಮಾರು ೨೦ ಜನ ನನ್ನ ಶಾಸಕ ಮಿತ್ರರು ಉತ್ತಮ ರೀತಿಯಲ್ಲಿ ಮಾತನಾಡಿ ಒಳ್ಳೆಯ ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಹ ವಾರು ಜನ ಮಾನ್ಯ ಸದಸ್ಯರು ಟೀಕೆಗಳನ್ನು ಸಹ ಮಾಡಿದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಬೈರೇಗೌಡರು ವಾರ್ನಿಂಗ್ ಸಹ ಕೊಟ್ಟಿದ್ದಾರೆ. ಇದನ್ನೆಲ್ಲಾ ಮಾನ್ಯ ಸದಸ್ಯರೆಲ್ಲರೂ ಕರ್ನಾಟಕದ ಹಿತ ಚಿಂತನೆ ಕರ್ನಾಟಕದ ಅಭಿವೃದ್ಧಿಯ ದಿಸೆಯಲ್ಲಿ ಮಾಡಿದ್ದಾರೆ. ಅದಕ್ಕೆ ಸರ್ಕಾರದವರು ನಮ್ಮ ಇಲಾಖೆಯವರು ಬಹಳ ಸೂಕ್ಷ್ಮವಾಗಿ ಯೋಚನೆ ಮಾಡಿ ಯಾವ ಯಾವ ಕಾರ್ಯಗಳನ್ನು ಮಾಡಿದರೆ ಈ ಕರ್ನಾಟಕದ ಅಭಿವೃದ್ಧಿಯಾಗುತ್ತದೆ ಎಂಬ ಬಗ್ಗೆ ಯೋಚನೆ ಮಾಡಿ ಹೇಳಿದ್ದಾರೆ. ಯಾವ ಕಾಲದಲ್ಲಿ ನಾವು ಇದ್ದೇವೆ ಎಂದರೆ ಅದು ಕರ್ನಾಟಕ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂತಹ ಕಾಲದಲ್ಲಿ ನಾವು ಇದ್ದೇವೆ. ಇದುವರೆವಿಗೆ ಯಾವ ಕರ್ನಾಟಕವು ಟಿಪ್ಪು ಸುಲ್ತಾನನ ಗಂಡು ಭೂಮಿ ಆಗಿತ್ತೋ, ಮತ್ತು ಡಾಕ್ಟರ್ ವಿಶ್ವೇಶ್ವರಯ್ಯನವರ ಕೈಗಾರಿಕಾ ಕ್ರಾಂತಿ ಮಾಡಬೇಕೆನ್ನುವ ದಿಸೆಯಲ್ಲಿ ಇಡೀ ದೇಶದಲ್ಲಿ ಸಾಧನೆ ಮಾಡಿ ತೋರಿಸಿದರೋ, ಆ ಕರ್ನಾಟಕ ರಾಜ್ಯ ಯಾವ ರೀತಿ ಮುಂದೆ ಹೋಗಬೇಕಾಗಿತ್ತೋ ಆ ರೀತಿ ಮುಂದೆ ಹೋಗದೆ ತೀರಾ ಹಿಂದೆ ನಾವು ಬಿದ್ದಿದ್ದೇವೆ. ಇಡೀ ದೇಶದಲ್ಲಿ ಅಂದರೆ ಎಲ್ಲ ರಾಜ್ಯಗಳಲ್ಲಿ ೭.೭ ಗ್ರೋತ್ ರೇಟ್ ಇದ್ದರೆ ಅದೇ ನಮ್ಮ ಕರ್ನಾಟಕ ರಾಜ್ಯದ ಗ್ರೋತ್ ರೇಟ್ ೪.೫ ಇದೆ. ಇದೇ ರೀತಿಯಲ್ಲಿ ಕೃಷಿ ರಂಗದಲ್ಲಿ, ಔದ್ಯೋಗಿಕ ರಂಗದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಇದು ಯಾವುದನ್ನೂ ಹಿಂದಿನ ಸರ್ಕಾರದ ಬಗ್ಗೆ ಟೀಕೆ ಮಾಡಬೇಕೆಂದು ನಾನು ಹೇಳುತ್ತಿಲ್ಲ.

೬–೦೫ ಪಿ.ಎಂ.

ಅದು ಯಾವುದೇ ಕಾರಣ ಇರಲಿ, ಬರಗಾಲ ಬಂದಿರಲಿ, ಅಥವಾ ಎನ್‌ವಿರಾನ್‌ಮೆಂಟ್ ಪ್ರಾಬ್ಲಮ್ಸ್ ಇರಲಿ, ಆಗಿನ ಕೇಂದ್ರ ಸರ್ಕಾರದವರು ಆಗ ಹೆಚ್ಚು ಸಹಾಯ ಮಾಡದೇ ಇದ್ದಿರಬಹುದು. ಆದರೆ, ನಾವು ಕರ್ನಾಟಕದ ೪ ಕೋಟಿ ಕನ್ನಡಿಗರ ಅಭಿವೃದ್ಧಿ ದಿಸೆಯಿಂದ ನಾವೆಲ್ಲರೂ ಅಂದರೆ ನಾವೂ ನೀವೂ ಈ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಇಷ್ಟು ವರ್ಷದವರೆಗೆ ನಾವು ಸುಮ್ಮನೆ ಇದ್ದು ಎಲ್ಲಾ ಯೋಜನಾ ಕಾರ್ಯಗಳಲ್ಲೂ ತೀರಾ ಹಿಂದೆ ಬಿದ್ದಿದ್ದೇವೆ. ಅದರಲ್ಲೂ ೫–೬ ವರ್ಷಗಳಿಂದ ಖಂಡಿತ ನಾವು ಹಿಂದೆ ಬಿದ್ದಿದ್ದೇವೆ. ಮಾನ್ಯ ಚಂದ್ರೇಗೌಡರಿಗಾಗಲೀ ಅಥವಾ ಆಗಿನ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ವಾಸ್ತವಿಕ ಪರಿಸ್ಥಿತಿ ಏನಾಗಿದೆ ? ಇವತ್ತು ಕೈಗಾರಿಕಾ ದೃಷ್ಟಿಯಿಂದ ನೋಡುವುದಾದರೆ ನಮ್ಮ ಕರ್ನಾಟಕ ರಾಜ್ಯ ೯ನೇ ಸ್ಥಾನಕ್ಕೆ ಹೋಗಿದೆ. ಇದರಿಂದ ನಾವು ದುಃಖವನ್ನು ಅನುಭವಿಸಬೇಕಾಗಿದೆ ಹಾಗೂ ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡುವ ಪರಿಸ್ಥಿತಿಯಲ್ಲಿ ಈಗ ಇದ್ದೇವೆ. ಅದಕ್ಕಾಗಿ ಇಂಥಾ ಸಂದರ್ಭದಲ್ಲಿ ನಾವು ತೀರಾ ಚಿಂತಕರಾಗಿ ಕರ್ನಾಟಕದ ಭವಿಷ್ಯದ ಬಗ್ಗೆ ಇನ್ನೂ ಮುಂದೆ ಮುಂದೆ ಹೋಗಬೇಕಾಗುತ್ತದೆ. ಆ ಸಾಧನೆಯನ್ನು ಮಾಡಲಿಕ್ಕೆ ನಾನು ಸಂಪೂರ್ಣವಾಗಿ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಏಕೆಂದರೆ ಒಂದು ರೀತಿಯಲ್ಲಿ ೪ ಕೋಟಿ ಕನ್ನಡಿಗರು ಯಾವ ರೀತಿ ಹೆಮ್ಮೆಯಿಂದ ನಮ್ಮ ರಾಜ್ಯ ಮೋಸ್ಟ್ ಪ್ರೋಗ್ರೆಸೀವ್ ಸ್ಟೇಟ್ ಎಂದು ಹೇಳುತ್ತಿದ್ದರೋ, ಹೆಮ್ಮೆಯಿಂದ ತಲೆ ಎತ್ತಿಕೊಂಡು ಇಡೀ ಭಾರತದಲ್ಲಿ ಹೋಗುತ್ತಿದ್ದ ಪರಿಸ್ಥಿತಿ ಇತ್ತೋ ಅದು ಇವತ್ತು ಇಲ್ಲ. ಚಿಕ್ಕ ಚಿಕ್ಕ ರಾಜ್ಯಗಳಿಗಿಂತಲೂ ಕೆಳಮಟ್ಟಕ್ಕೆ ಬಂದಿದ್ದೇವೆ. ಅಭಿವೃದ್ಧಿ ದೃಷ್ಟಿಯಿಂದ ನಾವು ಬಹಳ ಕೆಳಮಟ್ಟದಲ್ಲಿದ್ದೇವೆ. ಇದನ್ನು ಟೀಕೆ ಮಾಡಿ ನೀವು ನಿಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದು, ನಾವು ನಿಮ್ಮನ್ನು ಟೀಕೆ ಮಾಡಿ ನಾವು ಡಿಫೆಂಡ್ ಮಾಡಿಕೊಳ್ಳುವುದು ಸರಿಯಲ್ಲ. ಇದರಿಂದ ನಮ್ಮ ಕರ್ನಾಟಕದ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಮೊದಲನೆಯದಾಗಿ ಪವರ್ ಜನರೇಷನ್ ಬಗ್ಗೆ ಹೇಳುತ್ತೇನೆ. ಪವರ್ ಜನರೇಷನ್‌ನಲ್ಲಿ ಏಕೆ ಹಿಂದೆ ಬಿದ್ದಿದ್ದೇವೆ ? ಮಾನ್ಯ ಚಂದ್ರೇಗೌಡರು ಹೇಳಿದರು, ಕರ್ನಾಟಕದಲ್ಲಿ ಬರಗಾಲ ಬಂದು ಪರಿಸರದಿಂದ ತೊಂದರೆಯಾಗಿರಬಹುದು, ಅಥವಾ ಆನ್ ಗೋಯಿಂಗ್ ಸ್ಕೀಮ್‌ಗಳನ್ನು ಸರಿಯಾಗಿ ಮಾಡದೆ ಆಗಿರಬಹುದು. ಆದರೆ ಇದರಲ್ಲಿ ಫ್ಯಾಕ್ಟ್ಸ್ ಏನಿದೆ ? ವಾಸ್ತವಿಕ ಅಂಶ ಏನಿದೆ ? ಸತ್ಯಾಂಶ ಏನಿದೆ ? ೧೯೮೫ ೮೬ರಲ್ಲಿ ನಮ್ಮ ರಾಜ್ಯದ ಇನ್‌ಸ್ಟಾಲ್ ಕೆಪಾಸಿಟಿ ೨೫೫೦, ಅದೇ ಕಾಲದಲ್ಲಿ ಮಹಾರಾಷ್ಟ್ರದವರ ಇನ್‌ಸ್ಟಾಲ್ ಕೆಪಾಸಿಟಿ ೬೫೫೨, ತಮಿಳುನಾಡಿನವರದು ೨೪೮೯,

ಆಂಧ್ರಪ್ರದೇಶದವರದು ೩೪೧೬, ೧೯೮೬-೮೭ರಲ್ಲಿ ನಮ್ಮದು ಅಷ್ಟೇ ಇದೆ. ಮಹಾರಾಷ್ಟ್ರದವರು ಹೆಚ್ಚು ಮಾಡಿಕೊಂಡರು. ಆ ವರ್ಷ ಅವರದು ೬೭೨೨ ಮಾಡಿದರು. ತಮಿಳುನಾಡಿನವರು ೨೬೯೪ ಮಾಡಿದರು, ಆಂಧ್ರಪ್ರದೇಶದವರು ೩೬೪೫, ಮಾಡಿದರು, ಆದರೆ ನಾವು ಇದ್ದಲ್ಲೇ ಇದ್ದೇವೆ. ೩ನೇ ವರ್ಷ ಅಂದರೆ ೧೯೮೭-೮೮ರಲ್ಲಿ ನಾವು ಮತ್ತೆ ಇದ್ದಲ್ಲೇ ಇದ್ದೇವೆ, ಅದೇ ೨೫೩೦, ಮಹಾರಾಷ್ಟ್ರದವರು ೭೨೬೨ ಮಾಡಿದರು, ತಮಿಳುನಾಡಿನವರು ೩೯೯೬ ಮಾಡಿದರು, ಆಂಧ್ರಪ್ರದೇಶದವರು ೩೬೬೩ ಮಾಡಿದರು. ಇನ್ನೊಂದು ವರ್ಷಕ್ಕೆ ಬರುವ, ನನಗೆ ಗೊತ್ತಿದೆ ಈ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಬಹಳ ಸಮಯ ಹಿಡಿಯುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಹೈಡ್ರೋ ಪ್ರಾಜೆಕ್ಟ್‌ಗಳನ್ನು ಎಲ್ಲಾ ರಾಜ್ಯಗಳವರೂ ಮಾಡಿದ್ದಾರೆ. ಆದರೆ ನಾವು ತಟಸ್ಥರಾಗಿದ್ದೇವೆ. ೧೯೮೮-೮೯ರಲ್ಲಿ ಮಹಾರಾಷ್ಟ್ರದವರು ೭೪೮೨ ಮಾಡಿದರು, ತಮಿಳುನಾಡಿನವರು ೩೬೯೩ ಮಾಡಿದರು, ಆಂಧ್ರಪ್ರದೇಶದವರು ೩೬೯೬ ಮಾಡಿದರು, ನಾವು ಅದೇ ದೊಡ್ಡ ಸಂಖ್ಯೆ ೨೫೩೦ರಲ್ಲೇ ಇದ್ದೇವೆ,

ಅಲ್ಲಿಗೆ ಫುಲ್ ಸ್ಟಾಫ್, ಸ್ಟಾಗ್ನೇಷನ್, ಎಲ್ಲ ಪ್ರಗತಿ ನಿಂತು ಹೋಯಿತು. ಇದನ್ನು ಟೀಕೆಗಾಗಿ ಹೇಳುತ್ತಿಲ್ಲ ವಾಸ್ತವಿಕ ಅಂಶವನ್ನು ಜನರೆದುರಿಗೆ ಇಟ್ಟು ಚಿಂತನೆ ಮಾಡಿ ನಾವು ಕರ್ನಾಟಕವನ್ನು ಹಿಂದೆ ಬೀಳಿಸುವುದಿಲ್ಲ ಎಂದು ಆತ್ಮಸಾಕ್ಷಿಯಾಗಿ ಹೇಳುತ್ತೇನೆ, ಇದರ ಬಗ್ಗೆ ಚಿಂತನೆ ಬಹಳಷ್ಟು ಮಾಡಿದ್ದೇನೆ. ಇದೇ ವೇಗದಲ್ಲೇನಾದರೂ ಕರ್ನಾಟಕ ಹೋದರೆ ಬಹಳ ತೊಂದರೆ ಕಾದಿದೆ. ಇವತ್ತು ಒಂದೇ ತೊಂದರೆ ಎಂದರೆ ಪವರ್ ಜನರೇಷನ್. ಆದರೆ ಡಿಮ್ಯಾಂಡ್ ಮಾತ್ರ ಹೆಚ್ಚುತ್ತಾ ಇದೆ. ಪ್ರತಿ ವರ್ಷ ಮೂರು ಲಕ್ಷದಷ್ಟು ಹೊಸ ಕನೆಕ್ಷನ್ ಕೊಡಬೇಕಾಗಿತ್ತು. ಭಾಗ್ಯಜೋತಿ ಯೋಜನೆಗೆ ವಿದ್ಯುತ್ ಕೊಡಬೇಕಾಗಿತ್ತು, ಪಂಪ್‌ಸೆಟ್‌ಗಳಿಗೆ ಕೊಡಬೇಕಾಗಿತ್ತು. ಆದರೆ ಇನ್‌ಸ್ಟಾಲ್ಡ್ ಕೆಪಾಸಿಟಿ ಇಷ್ಟಕ್ಕೇ ನಿಂತಿತು. ನಮ್ಮ ರಿಸ್ಟ್ರಿಕ್ಟೆಡ್ ಡಿಮ್ಯಾಂಡ್ ೧೮ ಸಾವಿರ ಮಿಲಿಯನ್ ಯೂನಿಟ್; ಆದರೆ ನಮ್ಮ ಉತ್ಪತ್ತಿ ಬರೀ ೧೦ ಸಾವಿರ ಮಿಲಿಯನ್ ಯೂನಿಟ್ ಇನ್ನು ಕೇಂದ್ರದ್ದು ಮತ್ತು ಮಹಾರಾಷ್ಟ್ರದಿಂದ ಪಡೆದಿದ್ದು ಎಲ್ಲ ಸೇರಿಸಿದರೆ ಒಟ್ಟು ೪ ಸಾವಿರ ಮಿಲಿಯನ್ ಯೂನಿಟ್ ನಮ್ಮ ಡಿಮ್ಯಾಂಡ್ ೧೮ ಸಾವಿರಕ್ಕೂ ಇದಕ್ಕೂ ಮಧ್ಯೆ ಗ್ಯಾಪ್ ಇದೆ. ಇದರಿಂದ ವಿದ್ಯುತ್ ಸಪ್ಲೈ ಎಷ್ಟು ಮಾಡಬೇಕಾಗಿತ್ತೋ ಅಷ್ಟು ಮಾಡಲಾಗುತ್ತಿಲ್ಲ, ಇದರಿಂದ ವಿದ್ಯುತ್ ಶಟ್‌ಡೌನ್ ಮಾಡಬೇಕಾಗಿದೆ. This gap between demand and supply is increasing every day and our capacity has remained the same... ವಾರಾಹಿ ಯೋಜನೆ ವಿಚಾರ ಬಂತು. ಅದನ್ನು ನಾನು ಫೈನಾನ್ಸ್ ಮಿನಿಸ್ಟರಾಗಿದ್ದಾಗ ಇದನ್ನು ಪ್ರಾರಂಭಿಸಿದ್ದು ೮೪-೮೫ರಲ್ಲೇ ಪ್ರಾರಂಭ ಆಗಬೇಕಾಗಿತ್ತು. ಆದರೆ ಆಗಲಿಲ್ಲ. ಅನಂತರ ರಾಯಚೂರು ಯೋಜನೆಯನ್ನು ೭೮ರಲ್ಲಿ ನಾನು ಫೈನಾನ್ಸ್ ಮಿನಿಸ್ಟರಾಗಿದ್ದಾಗ ಮಾಡಿದ್ದು. ಆಗ ಆಗಿದ್ದ ಎರಡು ಘಟಕಗಳೇ ಹೊರತು ಮತ್ತೆ ಹೊಸದಾಗಿ ಒಂದೂ ಆಗಲಿಲ್ಲ. ಅದನ್ನು ಮಾಡುವುದಕ್ಕೆ ಪರ್ಮಿಷನ್ ವಗೈರೆ ಬೇಕಾಗಿರಲಿಲ್ಲ. ಅದಕ್ಕೆ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಪ್ರೈಯಾರಿಟಿ ಕೊಟ್ಟು ಹಣ ಇಡಬೇಕಾಗಿತ್ತೋ ಅಷ್ಟು ಇಡಲಿಲ್ಲ. ಕಳೆದ ವರ್ಷ ೧೭೩ ಕೋಟಿ ಬಜೆಟ್‌ನಲ್ಲಿಟ್ಟರು. ನಂತರ ಬರೀ ೬೦ ಕೋಟಿ ಖರ್ಚು ಮಾಡಿದರು. ಆಮೇಲೆ ಕೆಪಿಸಿಯವರು ಸ್ವಲ್ಪ ಸಾಲ ಮಾಡಿ ೩೦ ಕೋಟಿ ಖರ್ಚು ಮಾಡಿದರು. ಇದೇ ರೀತಿ ಮಾಡಿದರೆ

ಖಂಡಿತವಾಗಿ ವಿದ್ಯುತ್ ಉತ್ಪಾದನೆ ಸಾಧ್ಯವಿಲ್ಲ. ನಮ್ಮ ಕಷ್ಟಗಳನ್ನು ದೂರ ಮಾಡಲಿಕ್ಕೆ ಸಾಧ್ಯವಿಲ್ಲ. ಶ್ರೀ ಚಂದ್ರೇಗೌಡರು ಹೇಳಿದಂತೆ ಕೆಪಿಸಿಯವರಿಗೆ ೨೦೦ ಕೋಟಿ ಆದರೂ ಕೊಡಬೇಕು. ಕೆಇಬಿಯವರಿಗೆ ಪ್ಲಾನ್ ಔಟ್‌ಲೇ ಪ್ರಕಾರ ೧೫೦ ಕೋಟಿಯನ್ನಾದರೂ ಕೊಟ್ಟರೆ ಚೆನ್ನಾಗಿ ಪ್ರಗತಿ ಆಗಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ವರ್ಷ ಬಹಳಷ್ಟು ತೊಂದರೆ ಇದ್ದರೂ ಪ್ಲಾನ್-ಔಟ್‌ಲೇನಲ್ಲಿ ಕೆಪಿಸಿಗೆ ೧೭೦ ಕೋಟಿ ಕೆಇಬಿಗೆ ೧೦೩ ಕೋಟಿ ಇಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಕೊಡಬೇಕೆಂದು ನನ್ನ ಆಸೆ, ಆದರೆ ಫೈನಾನ್ಶಿಯಲ್ ಕನ್‌ಸ್ಟ್ರೇಂಟ್ಸ್ ಇದೆ. ನಾನು ಇಲ್ಲಿ ಯಾರನ್ನೂ ದೂಷಣೆ ಮಾಡುತ್ತಿಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ರಾಜಕೀಯ ಮಾಡುವುದು ತಪ್ಪು. ಈಗ ಇರುವ ಪರಿಸ್ಥಿತಿಯಲ್ಲಿ ನಾನು ಮಾತಾಡಿದಾಗ ಯಾರೂ ಸೆನ್ಸಿಟಿವ್ ಆಗುವುದು ಬೇಡ. ಪರಿಸ್ಥಿತಿಯನ್ನು ಉತ್ತಮಗೊಳಿಸುವುದು ಹೇಗೆ ಎಂದು ನೋಡೋಣ. ಪ್ರಧಾನಿ ವಿ. ಪಿ. ಸಿಂಗ್ ಅವರು ಬಂದು ವಾರಾಹಿ ಘಟಕವನ್ನು ಉದ್ಘಾಟಿಸಿ ಇನ್ನೂ ೧೧೫ ಮೆಗಾವಾಟ್ಸ್ ವಿದ್ಯುತ್ ನಮಗೆ ಲಭಿಸುವಂತೆ ಮಾಡಿ ಹೋಗಿದ್ದಾರೆ, ಆಗ ಕರ್ನಾಟಕದ ಜನರಿಗೆ ಹೆಮ್ಮೆಯಾಗುವಂತಹ ಒಂದು ಮಾತು ಹೇಳಿದರು. This project planned, designed and executed by the Engineers and the people of Karnataka ಎಂದು ಹೇಳಿದರು. ನಮ್ಮ ತಜ್ಞರು, ಇಂಜಿನಿಯರ್‌ಗಳ ಬಹಳಷ್ಟು ಮುಂದಿದ್ದಾರೆ, ಅವರಿಗೆ ಬೇಕಾದಷ್ಟು ಹಣ ಒದಗಿಸಿದ ಪಕ್ಷದಲ್ಲಿ ಇನ್ನೂ ಅಭಿವೃದ್ಧಿ ಸಾಧಿಸಬಹುದು ಈಗ ಯಾವ ಗ್ಯಾಪ್

ಇದೆ ಅವನ್ನು ಭರ್ತಿ ಮಾಡಬಹುದು. ವಾರಾಹಿಯ ಸೆಕೆಂಡ್ ಯೂನಿಟ್ ಆಗಬೇಕಾಗಿದೆ. ಅದ್ದು ಅಲೈನ್‌ಮೆಂಟ್‌ನಲ್ಲಿ ತೊಂದರೆಯಾಗಿದೆ. ಇನ್ನೊಂದು ತಿಂಗಳಿನಲ್ಲಿ ಆಗಬಹುದು. ಅದರಿಂದ ೧೫೫ ಮೆಗಾವ್ಯಾಟ್ಸ್ ಜಾಸ್ತಿ ವಿದ್ಯುತ್ ಸಿಗುತ್ತದೆ. ಆಮೇಲೆ ಶರಾವತಿಯನ್ನು ರಿಪೇರ್ಸ್ ಮಾಡಿ, ಚೆನ್ನಾಗಿ ರೀವೈಂಡಿಂಗ್ ಮಾಡಿ ಅಪ್‌ಗ್ರೇಡ್ ಮಾಡುತ್ತಿದ್ದೇವೆ. ಈ ಕೆಲಸ ಎತ್ತಿಕೊಂಡು ಮೂರ್ನಾಲ್ಕು ವಾರವಾಗಿದೆ. ಇನ್ನೊಂದು ವಾರದಲ್ಲಿ ಆ ಟನಲ್ ರಿಪೇರಿ ಕೆಲಸ ಮುಗಿಯುತ್ತದೆ. ಆಮೇಲೆ ವೈರಿಂಗ್ ಕೆಲಸ ಶುರುವಾಗುತ್ತದೆ. ಅದಕ್ಕಾಗಿ ವಿಶ್ವ ಬ್ಯಾಂಕಿನಿಂದ ೩೫ ಕೋಟಿ ಸಿಕ್ಕಿದೆ, ಇಷ್ಟು ಕೆಲಸ ಆದರೆ ಒಂದು ದೊಡ್ಡ ಪ್ರಾಜೆಕ್ಟ್‌ನಿಂದ ಸಿಗುವಷ್ಟು ವಿದ್ಯುತ್ ದೊರಕುತ್ತದೆ. ಇದು ಪ್ರಾರಂಭವಾಗಿ ೧೮ ವರ್ಷವಾಗಿರುತ್ತದೆ. ಈಗ ಅಪ್‌ಗ್ರೇಡ್ ಮಾಡಿದರೆ ೯[illegible]೧ ಮೆಗಾವ್ಯಾಟ್ಸ್ ಸಿಗುತ್ತದೆ, ಪುನ: ೧೫೫ ಮೆಗಾವ್ಯಾಟ್ಸ್ ಈ ಘಟಕ ಆದರೆ ಒಂದೇ ವರ್ಷದಲ್ಲಿ ಜಾಸ್ತಿಯಾಗುತ್ತದೆ.

ಶ್ರೀ ಎಲ್, ಆರ್. ಶಿವರಾಮೇಗೌಡ.—ಹಿಂದಿನ ಸರ್ಕಾರ ಯಾವುದು ಕೇಳಿದರೂ ಬರಗಾಲ ಇತ್ತು ಅನ್ನುತ್ತಾರೆ. ಆದರೆ ದೇವರಾಜ ಅರಸರ ಕಾಲದ ಬರಗಾಲಕ್ಕಿಂತ ದೊಡ್ಡದು ಯಾವುದೂ ಇರಲಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಇವೆರಡೂ ಘಟಕದ ಉತ್ಪನ್ನ ಸೇರಿಸಿದರೆ ಹೆಚ್ಚು ವಿದ್ಯುತ್ ಉತ್ಪಾದನೆ ಆಗುತ್ತದೆ. ಇದು ಎರಡು ಮಿನಿ ಹೈಡ್ರೋ ಘಟಕಗಳನ್ನು ಸೇರಿಸಿದರೆ ೧೬೫ ಮೆಗಾವ್ಯಾಟ್ ನಷ್ಟು ಈ ವರ್ಷ ಆಗುತ್ತದೆ. ೯೧ನೇ ಇಸವಿಯಲ್ಲಿ ಘಟಪ್ರಭಾ ಯೋಜನೆ ಕೂಡ ಮುಗಿಯುತ್ತದೆ. ಅದರಿಂದ ೩೨ ಮೆಗಾವ್ಯಾಟ್ಸ್ ವಿದ್ಯುತ್ ನಮಗೆ ದೊರೆಯುತ್ತದೆ. ಇದರ ನಂತರ ರಾಯಚೂರು ೩ನೇ ಯೂನಿಟ್ ಅನ್ನು ಕೂಡ ಆದಷ್ಟು ಬೇಗ ಮುಗಿಸುತ್ತೇವೆ. ಇದು ಬರುವ ವರ್ಷ ಮುಗಿಯುತ್ತದೆ. ಇದರಿಂದ ನಮಗೆ ೨೧೦ ಮೆಗಾವ್ಯಾಟ್ಸ್ ವಿದ್ಯುತ್ ದೊರೆಯುತ್ತದೆ. ಇದಾದ ಮೇಲೆ ಮಾಡ್ಯಾಂ, ಇದು ಚಿಕ್ಕದು, ಇದರಿಂದ ೧೨ ಮೆಗಾವ್ಯಾಟ್ಸ್ ವಿದ್ಯುತ್ ದೊರೆಯುತ್ತದೆ, ಇವೆಲ್ಲಾ ಸೇರಿ ನಮಗೆ ೧೬೦ ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿ ದೊರೆಯುತ್ತದೆ. ಈಗಿನ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಮೂರು ವರ್ಷಗಳು ಉಳಿಯುತ್ತವೆ. ೯೪–೯೫ರವರೆಗೆ ನಾವು ಸಾಕಷ್ಟು ಹಣ ಒದಗಿಸಿದರೆ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಬಹುದು, ಗೇರುಸೊಪ್ಪೆ ಟೈಲ್‌ರೈಸ್‌ಗೆ ಕೇಂದ್ರದಿಂದ ಪರ್ಮಿಷನ್ ಬರಬೇಕಾಗಿದೆ ಇದು ಕೇಂದ್ರದಲ್ಲಿ ಯಾವಾಗಲೂ ಇದ್ದದ್ದೇ. ಇವರಿಗೆ ದೂಷಣೆ ಮಾಡುವುದು, ಅವರಿಗೆ ದೂಷಣೆ ಮಾಡುವುದು ಇವೆಲ್ಲಾ ನಡೆಯುತ್ತಲೇ ಇರುತ್ತದೆ. ಇನ್ನು ಕವರಹೊಸಹಳ್ಳಿಯಿಂದ ೧೨೦ ಮೆಗಾವ್ಯಾಟ್ಸ್ ಬರುತ್ತದೆ. ಇದನ್ನು ಸೇರಿಸಿದರೆ, ೨೭೦ ಮೆಗಾವ್ಯಾಟ್ಸ್, ಮತ್ತೆ ಸರಪಾಡಿ ಸೌತ್ ಕೆನರಾದಲ್ಲಿದೆ. ಇದನ್ನು ಸ್ವಲ್ಪ ಚೇಂಜಸ್ ಮಾಡಿ, ೯೦ ಮೆಗಾವ್ಯಾಟ್ಸ್‌ನ ಒಂದು ಪ್ರಾಜೆಕ್ಟ್ ಮಾಡುತ್ತಿದ್ದೇವೆ. ಇದಕ್ಕೆ ಸುಮಾರು ೨೦೦ ಕೋಟಿ ರೂಪಾಯಿ ಹಣ ಖರ್ಚಾಗುತ್ತದೆ. ಅದೇ ರೀತಿ ಯಲಹಂಕ ಪ್ರಾಜೆಕ್ಟ್ ಇದು ಡೀಸೆಲ್ ಪ್ರಾಜೆಕ್ಟ್ ಇಡೀ ದೇಶದಲ್ಲಿಯೇ ಇಷ್ಟು ದೊಡ್ಡ ಪ್ರಾಜೆಕ್ಟ್ ಯಾವುದೂ ಇಲ್ಲ, ಇದರಿಂದ ೧೨೦ ಮೆಗಾವ್ಯಾಟ್ಸ್ ವಿದ್ಯುತ್ ದೊರೆಯುತ್ತದೆ. ಇದು [illegible] ೧೫ ಕೋಟಿ ರೂಪಾಯಿ ಪ್ರಾಜೆಕ್ಟ್. ಇದಕ್ಕೆ ಕೇಂದ್ರ ಸರ್ಕಾರದವರು ೧೦–೧೫ ದಿವಸಗಳ ಹಿಂದೆ ಪರ್ಮಿಷನ್ ಕೊಟ್ಟಿದ್ದಾರೆ. ಈಗ ನಮಗೆ ಸಂತೋಷವಾಗುತ್ತದೆ, ನಾವು ಬಹಳ ಚುರುಕಿನಿಂದ ಕೆಲಸ ಮಾಡುತ್ತಿದ್ದೇವೆ. ಫ್ರೆಂಚ್ ಇಂಜಿನಿಯರ್ಸ್ ಬೆಂಗಳೂರಿನಲ್ಲಿ ಇದ್ದಾರೆ, ಕೆಲಸ ಪ್ರಾರಂಭವಾಗಿದೆ. ಕರ್ನಾಟಕ ಸರ್ಕಾರ ಏನು ೧೦ ಪರ್ಸೆಂಟ್ ಅಡ್ವಾನ್ಸ್ ಕೊಡಬೇಕಾಗಿತ್ತು. ಅದನ್ನು ಕೂಡ ಕೊಟ್ಟುಬಿಟ್ಟಿದ್ದೇವೆ. ಬಹಳಷ್ಟು ಚುರುಕಾಗಿ ಕೆಲಸ ಮಾಡುತ್ತಿದ್ದೇವೆ. ಏಕೆಂದರೆ. ಇದು ಕರ್ನಾಟಕದ ಭವಿಷ್ಯದ ಪ್ರಶ್ನೆ. ಈಗ ಪವರ್ ಜನರೇಷನ್‌ನಲ್ಲಿ ಹಿಂದೆ ಬಿದ್ದಿದ್ದೇವೆ. ಇದು ಕರ್ನಾಟಕದ ೪ ಕೋಟಿ ಕನ್ನಡಿಗರ ಭವಿಷ್ಯದ ಪ್ರಶ್ನೆ ಆಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇಂಡಸ್ಟ್ರಿಯಲಿಸ್ಟ್ ಕಾಂಟ್ರಿಬ್ಯೂಷನ್ ಏನಿದೆ ?

ಶ್ರೀ ಎಸ್. ಎಂ. ಯಾಹ್ಯಾ.— ಅವರದ್ದು ೩೦ ಕೋಟಿ ಇದೆ, ೯೦ ಕೋಟಿ ಫ್ರೆಂಚ್ ಅಸಿಸ್ಟೆನ್ಸ್ ಬಾಕಿ ಹಣವನ್ನು ನಮ್ಮ ಪ್ಲಾನಿಂದ ಕೊಟ್ಟಿದ್ದೇವೆ. ಇನ್ನು ೪–೫ ವರ್ಷಗಳಲ್ಲಿ ನಿಮ್ಮೆಲ್ಲರ ಸಹಕಾರ ಆಶೀರ್ವಾದದಿಂದ ಇದನ್ನು ಮಾಡುತ್ತೇವೆನ್ನುವ ಭರವಸೆ ಇದೆ.

ಶ್ರೀ ವಾಟಾಳ್ ನಾಗರಾಜ್.—೪–೫ ವರ್ಷ ಖಾಯಂ ಆಗಿ ಇದ್ದರೆ ಆಶೀರ್ವಾದ ಮಾಡೋಣ.

ಶ್ರೀ ಎಸ್. ಎಂ. ಯಾಹ್ಯಾ.—ನಾವು ಎಲ್ಲಿದ್ದರೂ ಕರ್ನಾಟಕಕ್ಕೆ ಒಳ್ಳೆಯದು ಮಾಡಿ ಹೋಗುವವರು ನಾವು.

ಶ್ರೀ ವಾಟಾಳ್ ನಾಗರಾಜ್.—೫ ವರ್ಷ ವೀರೇಂದ್ರ ಪಾಟೀಲರನ್ನು ಪಟ್ಟಾಗಿ ಉಳಿಸಿಕೊಳ್ಳಿ, ಆಶೀರ್ವಾದ ಮಾಡುತ್ತೇವೆ,

ಶ್ರೀ ಎಸ್. ಎಂ. ಯಾಹ್ಯಾ.—ಯಾರೂ ಅನುಮಾನ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್.—ನನಗೆ ನಿಮ್ಮ ಮುಖ್ಯಮಂತ್ರಿಗಳು ಇರುವೇಕು... ಭವಿಷ್ಯ ಇದೆ. ಆದರೆ, ಅನುಮಾನಗಳು ಬರುತ್ತವೆ.

ಶ್ರೀ ಎಸ್. ಎಂ. ಯಾಹ್ಯಾ.—ಆ ರೀತಿ ಅನುಮಾನ ಮಾಡುವುದು ಬೇಡ. ಆ ರೀತಿ ವಿಚಾರ ಮಾಡುವುದು ಬೇಡ ಹೋಟೆಲ್ ನಾಗರಾಜ್‌ರವರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾವು ನೀವು ಹಳೇ ಸ್ನೇಹಿತರು. ನನ್ನ ಹೆಸರು ವಾಟಾಳ್ ನಾಗರಾಜ್. ಹೋಟೆಲ್ ನಾಗರಾಜ್ ಅಂದರೆ ಹೇಗೆ ?

ಶ್ರೀ ಎಸ್. ಎಂ. ಯಾಹ್ಯಾ.—ಹೋಟೆಲ್ ಕಾರ್ಮಿಕರ ಸಪೋರ್ಟ್ ಬೆಂಬಲ ತಮಗೆ ಇದ್ದುದ್ದನ್ನು ನೋಡಿದ್ದೇನೆ. ಹೋಟೆಲ್, ವಾಟಾಳ್ ಎಲ್ಲಾ ಒಂದೇ. ಹೋಟೆಲ್‌ನವರೆಲ್ಲಾ ನಿಮಗೇ ಬೆಂಬಲ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಮತ್ತೊಂದು ಬಿರುದು ಕೊಟ್ಟಿದ್ದೀರಿ. ತಮಗೆ ಅಭಿನಂದನೆಗಳು, ನೀವು ಅಷ್ಟು ಸಸ್ಪಿಷನ್ ಮಾಡದವರು ಎಂದು ನಾನು ಅಂದುಕೊಂಡಿದ್ದೇನೆ. ನೀವು ಅದನ್ನು ಮಾಡಬೇಡಿ; ನಮ್ಮ ಬೈರೇಗೌಡರು ಪ್ರತಿಯೊಂದಕ್ಕೂ ಸಸ್ಪಿಷನ್ ಮಾಡಿಕೊಳ್ಳುತ್ತಾರೆ ಆದರೆ ನೀವು ಮಾಡಿಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್.– ನಿಮ್ಮ ಸರ್ಕಾರ ಉಳಿಯಲಿ ನಿಮ್ಮ ನಾಯಕರು ಉಳಿಯಲಿ ಎಂದು ಅಷ್ಟೆ.

ಶ್ರೀ ಎಸ್.ಎಂ.ಯಾಹ್ಯ.—ಆದಕ್ಕಾಗಿ ಮಂದನೆ ಈ ರೀತಿ ೪-೫ ವರ್ಷಗಳಲ್ಲಿ ಪ್ರತಿ ವರ್ಷವು ೧-೨ ಘಟಕಗಳನ್ನು ನಾವು ಪೂರ್ಣಮಾಡಿಕೊಂಡು ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕು ಎಂದು ಇದ್ದೇವೆ. ಬರುವ ೫ ವರ್ಷಗಳಲ್ಲಿ ೧೧೦೦ ಮೆಗಾವಾಟ್ ಮಾಡಿಬಿಟ್ಟರೆ ಗ್ಯಾಪ್ ಅಷ್ಟು ಉಳಿಯುತ್ತದೆ. ಅಂತು ಏನಾದರೂ ನಾವು ಸಾಧನೆ ಮಾಡಿದ್ದೇವೆ ಎಂದು ಸ್ವಲ್ಪ ತಲೆ ಎತ್ತಿಕೊಂಡು ತಿರುಗಾಡಲಿಕ್ಕೆ ಆಗುತ್ತದೆ, ಈಗ ಇಡೀ ಭಾರತದಲ್ಲಿ ನಾವು ಬಹಳಷ್ಟು ಕೆಳಗೆ ಬಂದು ಬಿಟ್ಟಿದ್ದೇವೆ. ಕನ್ನಡಿಗರು ಇನ್ನೂ ಕೆಳಗೆ ಹೋಗುವುದು ಬೇಡ. ಭಾರತದಲ್ಲಿ ಮುಂದೆ ಬರಬೇಕು ಎನ್ನುವ ಆಸೆಯಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಅದಕ್ಕಾಗಿ ಈ ಎಲ್ಲ ಪ್ರಾಜೆಕ್ಟ್‌ಗಳನ್ನು ಮಾಡಿ ನಾವು ಮುಂದೆ ಹೋಗಬೇಕಾಗಿದೆ. ನಮಗೆ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಮತ್ತು ಬೇರೆ ಯಾವುಯಾವುದೋ ಬರುತ್ತದೆ. ೧೫ ದಿವಸಗಳ ಹಿಂದೆ ಯುಗೊಸ್ಲೇವಿಯದವರು ಬಂದಿದ್ದರು. ಕುವೈತ್‌ನವರು ಬಂದಿದ್ದರು. ಮೊನ್ನೆ ತಾನೆ ಯುಗೊಸ್ಲೇವಿಯರವರದು ಲೆಟರ್ ಸಹ ನನಗೆ ಬಂದಿದೆ. ೧೯-೬-೧೯೯೦ರಲ್ಲಿ ಬಂದಿದೆ ಅದರಲ್ಲಿ ಅವರು ಈ ರೀತಿ ಹೇಳುತ್ತಾರೆ.

> "As a result of the discussion we had in KPC & with you, we feel very confident that we will be able to present our Ministers promptly with an attractive proposal both in terms of technical and financial aspects for minihydel projects, Bhadra and Brindavan Projects. We are also considering making an offer for Mahadai project but since it involves substantial finance, we will need some time to identify proper partners and sources and assemble attractive package. We are also keen to participate in the execution of Sarpadi barrage 3x40= 120 mega watts with pulp units with which we have considerable experience."

ಆ ರೀತಿ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಆಗುತ್ತದೆ ಅಂದರೆ ಇದರ ಬಗ್ಗೆ ನಾವು ಇನಿಷಿಯಲ್ ಸ್ಟೇಜ್‌ನಲ್ಲಿ ನೆಗೊಸಿಯೇಟ್ ಮಾಡುತ್ತಾ ಇದ್ದೇವೆ ಅಂತೂ ಎಲ್ಲ ಪ್ರಾಜೆಕ್ಟ್ ಪ್ರಯತ್ನಗಳನ್ನು ಮಾಡಿ ಎಲ್ಲ ಪ್ರಾಬ್ಲಂ ಸಾಲ್ವ್ ಆಗಬೇಕಾದರೆ ಪವರ್ ಜನರೇಷನ್ ಹೆಚ್ಚು ಆಗಬೇಕು. ಆ ಒಂದು ದಿಶೆಯಲ್ಲಿ ನಾನು ಮಾತನಾಡುತ್ತಾ ಇದ್ದೇನೆ ಅದರಲ್ಲಿ ಮಿನಿಹೈಡ್ರಲ್ ಪ್ರಾಜೆಕ್ಟ್ ಇದೆ, ನಮ್ಮಲ್ಲಿ ೨೨೦ ಮಿನಿ ಹೈಡ್ರಲ್ ಪ್ರಾಜೆಕ್ಟ್‌ಗಳನ್ನು ಐಡೆಂಟಿಫೈ ಮಾಡಿದ್ದೇವೆ, ಅದರಲ್ಲಿ ೧೨೫ ರಿಂದ ೧೫೦ರ ವರೆಗೆ ವಯಬಲ್ ಇದೆ. ಅದರಲ್ಲಿ ೫೦ ಪ್ರಾಜೆಕ್ಟ್‌ಗಳನ್ನು ನಾವು ಈಗಾಗಲೇ ತೆಗೆದುಕೊಳ್ಳಬೇಕು ಎಂದು ಇದ್ದೇವೆ,

ಶ್ರೀ ಕೆ. ಹೆಚ್. ಹನುಮೇಗೌಡ.—ಮೇಕೆದಾಟು ಪ್ರಾಜೆಕ್ಟ್ ಏನಾಯಿತು.

ಶ್ರೀ ಎಸ್. ಎಂ. ಯಾಹ್ಯ.—ಮೇಕೆದಾಟು ಇದೆ ೪೩೦ ಮಿನಿಹೈಡ್ರಲ್ ಡೀಟೆಲ್ ಪ್ರಾಜೆಕ್ಟ್ ಮಾಡಿದ್ದೇವೆ In the case of Shivanasamudram project(270 mega wetts) the Tamil Nadu Government is making an illogical argument that Cauvery water dispute is there and all that.

SRI D.B. CHANDRE GOWDA.—Hogenakal, you are referring to

ಶ್ರೀ ಎಸ್. ಎಂ. ಯಾಹ್ಯ.—ಸೂಪ ನನ್ನ ಜಿಲ್ಲೆಯದು. ಮಾನ್ಯ ಚಂದ್ರೇಗೌಡರು ಮಾನ್ಯ ರಾವ್ ರವರು ಹೇಳಿದಹಾಗೆ, ಒಂದು ಲಕ್ಷ ಎಕರೆ ಭೂಮಿಯನ್ನು ಎರಡು ಜಿಲ್ಲೆಯ ಜನರು, ರೈತರು ತ್ಯಾಗ ಮಾಡಿಕೊಟ್ಟಿದ್ದಾರೆ. ನಾವು೫೦ ಸಾವಿರ ಎಕರೆ ಜಾಗ ಮಾಡಿಕೊಟ್ಟಿದ್ದೇವೆ. ಸೂಪ ಡ್ಯಾಂ ನಾರ್ತ್ ಕೆನರಾದಲ್ಲಿ ಬರುತ್ತದೆ. ಡ್ಯಾಂ ಆಗಿದೆ. ದಾಂಡೇಲಿ ಪ್ರಾಜೆಕ್ಟ್ ಯಾವುದಿದೆ ಅದು ಬಹಳ ಒಳ್ಳೆಯ ಪ್ರಾಜೆಕ್ಟ್ ಅದನ್ನೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಬೇಡ್ತಿ ಇದೆ ಬೇಡ್ತಿ ವಿಚಾರದಲ್ಲಿ ಬಹಳಷ್ಟು ಜನ ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ಟಿ. ಸಿ. ಸಿದ್ದಲಿಂಗೌಡರ್.—ಜಿಪುರ, ಸ್ವಾಮಿಗಳು [illegible] ಬೇಡ ಎಂದು ಹೇಳಿರಬೇಕು. ಕಾರವಾರ—ಶಿವಮೊಗ್ಗ ಎಂದು ಅಲ್ಲ ಇಡೀ ರಾಜ್ಯದಲ್ಲಿ [illegible] ತೆಗೆದುಕೊಳ್ಳಿ ನಾವು ಯಾರು ಬೇಡ ಎಂದು ಹೇಳುವುದಿಲ್ಲ. ನಮ್ಮ ಸಹಕಾರ ಎಲ್ಲರಿಗೂ ಇದೆ.

ಶ್ರೀ ಎಸ್. ಎಂ. ಯಾಹ್ಯ.—[illegible] ತ್ಯಾಗ ಮಾಡಿದ್ದಾರೆ. ಅವರ ಮಾನಸ್ಸು ನಿಮಗೆ ಅರ್ಥವಾಗುವುದಿಲ್ಲ. ಮಾನ್ಯ ಚಂದ್ರೇಗೌಡರು [illegible] ಬಗ್ಗೆ ಬಹಳಷ್ಟು ಹೇಳಿದರು. ರಿಹ್ಯಾಬಿಲಿಟೇಷನ್ ಆಗುತ್ತಾ ಇಲ್ಲ, [illegible] ಎಂದು [illegible]. ಮಾನ್ಯ [illegible] ತರು [illegible]. [illegible] ದೇಶಕ್ಕಾಗಿ, ಕರ್ನಾಟಕಕ್ಕಾಗಿ ಬಹಳಷ್ಟು ತ್ಯಾಗ ಮಾಡಿದ್ದಾರೆ. [illegible] ಇಲ್ಲ ಅವರಿಗೆ ನಾವು ಸರಿಯಾಗಿ [illegible] ಇಲ್ಲ. [illegible] ನಾವು [illegible] ಬೇಕು [illegible] ನಮ್ಮ [illegible] ವಿದ್ಯುಚ್ಛಕ್ತಿ ಉತ್ಪಾದನೆ [illegible] ಬೇಕು, ಸ್ಪೆಷಲ್ [illegible] ವಿದ್ಯುಚ್ಛಕ್ತಿ ಯಾವುದು [illegible] ಇಲ್ಲ, ಅವರಿಗೆ [illegible] ಬೇಕಾಗುತ್ತದೆ ಅದರ ಬಗ್ಗೆ ನಾವು [illegible] ಗಳನ್ನು ತೆಗೆದುಕೊಳ್ಳಬೇಕು. [illegible] ಯಾರು ಏನು ಹೇಳಿದರೂ ತೆಗೆದು [illegible]. [illegible] ಮೆಗಾವಾಟ್ಸ್ ಅಷ್ಟು ವಿದ್ಯುಚ್ಛಕ್ತಿ ಉತ್ಪಾದನೆ [illegible] ಇದ್ದಾರೆ, [illegible] ಪ್ರೈವೇಟ್‌ನವರು [illegible] ಬ್ಯಾಂಕ್ [illegible] ಬಂದಿದ್ದರು, ಅವರು ಸಹ ಬಹಳ ಆಸಕ್ತಿಯನ್ನು [illegible] ಪ್ರಾಜೆಕ್ಟ್‌ಗಾಗಿ [illegible] ದಾರೆ. [illegible] ಉಪಯೋಗಿಸಿಕೊಂಡು ನಾವು [illegible] ಒಂದು ಕಮಿಟಿ [illegible] ಆಗಬೇಕು ಎಂದು ಕೆಲಸಮಾಡಲಿಕ್ಕೆ ನಾವು ಹೊರಟಿದ್ದೇವೆ. [illegible] ಪ್ರಾಜೆಕ್ಟ್ ಪ್ರಾರಂಭವಾಗಿದೆ ಅದು ಬಹಳ ದೊಡ್ಡದು ೨೨೨ ಯೂನಿಟ್ಸ್ ೪೭೦ ಮೆಗಾವಾಟ್ಸ್‌ನದ್ದು ಅವರ ಪ್ರಕಾರ ೧೯೯೪ರಲ್ಲಿ ಆಗಬಹುದು ಅದರಲ್ಲಿ ೨೫ರಿಂದ ೩೦ ಪರ್ಸೆಂಟ್ ನಮಗೆ ಕೊಡುತ್ತಾರೆ. ಅದೇ ರೀತಿಯಲ್ಲಿ ಮಂಗಳೂರು ಸೂಪರ್ ಥರ್ಮಲ್ ವಿಚಾರವನ್ನು ನೀವು ಹೇಳಿದ್ದೀರಿ ಆ ಪ್ಲಾಂಟ್‌ನಲ್ಲಿ ೧೧೦.೮ ಅದರ ಪ್ರಕಾರ ೭೮೦ ಮೆಗಾವಾಟ್ಸ್ ಅಷ್ಟು ಅಲ್ಲಿ ವಿದ್ಯುಚ್ಛಕ್ತಿ ಉತ್ಪತ್ತಿ ಆಗಲಿಕ್ಕೆ ಕಾರಣವಾಗುತ್ತದೆ ಅದು ಬಹಳ ಇನಿಷಿಯಲ್ ಸ್ಟೇಜ್‌ನಲ್ಲಿದೆ, ಲ್ಯಾಂಡ್ ಅಕ್ವೈರ್ ಮಾಡುತ್ತಾ ಇದ್ದೇವೆ ಫಸ್ಟ್ ೪ ಇಯರ್ಸ್‌ನಲ್ಲಿ ೨೧೦ರ ಎರಡು ಘಟಕಗಳನ್ನು ಮಾಡಿ ಕೂರಿಸಬಹುದು ಎಂದು ಅವರು ಹೇಳುತ್ತಾರೆ ಅದರಿಂದ ೪೨೦ ಮೆಗಾವಾಟ್ಸ್ ಅಷ್ಟು ವಿದ್ಯುಚ್ಛಕ್ತಿ ಸಿಗಲಿಕ್ಕೆ ಸಾಧ್ಯ ಆಗುತ್ತದೆ ಅಷ್ಟು ಸಮಯ ಆಗಬಹುದು, ಒಂದು ವರ್ಷ ಈ ಕಡೆ, ಆ ಕಡೆ ಆಗಬಹುದು ಅವರು ೧೯೯೪ರಲ್ಲಿ ಎರಡು ಯೂನಿಟ್ಟನ್ನು ಮಾಡಿಕೊಡುತ್ತೇವೆ ಎಂದು ಹೇಳಿದರು. ಆ ಒಂದು ಆಶಾದಾಯಕವಾದ ಚಿನ್ಹೆಯನ್ನು ನಾವೆಲ್ಲರೂ ತೆಗೆದುಕೊಂಡು ಇವತ್ತು ಮನೆಗೆ ಹೋಗಬೇಕು ಹಿಂದೆ ಯಾವುದು ಆಯಿತು, ಅದನ್ನೆಲ್ಲಾ ಮರೆತು ಇನ್ನು ಮುಂದೆ ಹೋಗುವಂಥ ಕಾರ್ಯಗಳನ್ನು ನಾವು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನೀವು ಒಣಮರವನ್ನು ಚಿಗುರಿಸುತ್ತಾ ಇಲ್ಲವಲ್ಲ,

ಶ್ರೀ ಎಸ್ ಎಂ, ಯಾಹ್ಯ.—ಈಗ ಎಲ್ಲ ಕಡೆ ಹಸಿರು ಇದೆ. ನಾವು ಬಂದಾಗ ಎಲ್ಲಾದರೂ ಒಣ ಮರಗಳು ಇರುತ್ತದೆಯೇ ನೀವು ನೋಡುತ್ತಾ ಇಲ್ಲವೇ ಎಲ್ಲ ಹಸಿರು ಇದೆ ನಮ್ಮ ಮುಖ ನೋಡಿದರೆ ತಿಳಿಯುವುದಿಲ್ಲವೆ ? ಎಲ್ಲ ಕಡೆ ಹಸಿರು ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಸಂಸಾರ–ಮಕ್ಕಳು ಎಲ್ಲ ಸಂತೋಷವಾಗಿರಬೇಕಲ್ಲ.

ಶ್ರೀ ಎಸ್.ಎಂ. ಯಾಹ್ಯ.—ಸಂಸಾರ ಇಲ್ಲದೆ ಇದ್ದರೆ ಎಲ್ಲಿ ಸಂತೋಷ ಬರುತ್ತದೆ ಸ್ವಾಮಿ. ಸಂಸಾರ ಇರಬೇಕು ಸಂಸಾರ ಇದ್ದರೆ ಎಷ್ಟು ಕಷ್ಟ ಆಗಬಹುದು, ಹೆಂಡತಿ ಇದ್ದರೂ ಕಷ್ಟ ಮಕ್ಕಳು ಇದ್ದರೂ ಕಷ್ಟ ಆದರೆ ಆ ಸುಖ ಯಾವುದು ಇದೆ. ಆ ಸುಖವನ್ನು ನಾನು ಈಗ ಹೇಳುತ್ತಿದ್ದೇನೆ. ಈಗಲೂ ಸಹ ಕೆಲವು ಪ್ರಾಜೆಕ್ಟ್ ಕೇಂದ್ರದಲ್ಲಿವೆ ಅವು ಬಹಳ ಒಳ್ಳೆಯ ಪ್ರಾಜೆಕ್ಟ್ ನಾವು ಆಗಾಗ ಹೋಗಿ ಆ ಪ್ರಾಜೆಕ್ಟ್‌ಗಳನ್ನು ನೋಡಿಕೊಂಡು ಬರುತ್ತಿದ್ದೇವೆ. ಶಿವನಸಮುದ್ರದ ಪ್ರಾಜೆಕ್ಟ್ ೨೭೦ ಮೆಗಾವಾಟ್ಸಿನದು, ಅದು ಬಹಳ ಒಳ್ಳೆಯ ಪ್ರಾಜೆಕ್ಟ್ ಅದಕ್ಕೆ ತಮಿಳುನಾಡಿನವರು ಕಾವೇರಿ ವಾಟರ್ ಎಂದು ಇಲ್ಲೀಗಲ್ ಆರ್ಗ್ಯುಮೆಂಟ್ ಮಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಅದು ಹೊಗೆನೆಕಲ್‌ದು.

ಶ್ರೀ ಎಸ್.ಎಂ. ಯಾಹ್ಯ.—ಅದಕ್ಕೆ ಟನಲ್ ಹಾಕಿ ಮಾಡಬೇಕು ನಾನು ಹೋಗಿ ಸ್ಥಳ ಎಲ್ಲ ನೋಡಿ ಬಂದೆ ಅದರಲ್ಲಿ ಬಹಳಷ್ಟು ಜಾಗ ಹೋಗುವುದಿಲ್ಲ, ೬೦ ಹೆಕ್ಟೇರ್ ಜಮೀನು ಮಾತ್ರ ಹೋಗುತ್ತದೆ ಆದರೆ ಅದು ಬಹಳ ಒಳ್ಳೆಯ ಪ್ರಾಜೆಕ್ಟ್ ತಮಿಳು ನಾಡಿನವರಿಗೆ ಇದು ಗೊತ್ತಿಲ್ಲ, ನಾವು ಕಾವೇರಿ ನದಿ ನೀರನ್ನು ವಾಪಸ್ ಕಳಿಸುತ್ತಾ ಇದ್ದೇವೆ ನಾವು ಯೂಸ್ ಮಾಡುತ್ತಾ ಇಲ್ಲ ಎಂದು. ತಮಿಳುನಾಡಿನವರು ಸಹ ದೊಡ್ಡ ಮನಸ್ಸು ಮಾಡಿ ವಾಪಸ್ ತೆಗೆದುಕೊಂಡು ಕೇಂದ್ರದಿಂದ ಪರ್ಮಿಷನ್ ದೊರಕಿಸಿಕೊಡಲಿಕ್ಕೆ ಎಂದು ಅವರ ಹತ್ತಿರ ಅಪೀಲ್ ಮಾಡುತ್ತೇವೆ ಇದು ಒಳ್ಳೆಯ ಪ್ರಾಜೆಕ್ಟ್, ನೀರು ಏನೂ ಹೋಗುತ್ತಿಲ್ಲ. ಅದಕ್ಕಾಗಿ ಅವರು ಹಾಗೆ ಪರ್ಮಿಷನ್ ಕೊಟ್ಟರೆ ಅದಷ್ಟು ಬೇಗ ಈ ಪ್ರಾಜೆಕ್ಟನ್ನು ಸಹ ಮಾಡಬೇಕು ಎಂದು ಇದ್ದೇವೆ. ಅನಂತರ ಮಹದಾಯಿ ಯೋಜನೆ ಕೇಂದ್ರದಲ್ಲಿ ಪರ್ಮಿಷನ್‌ಗಾಗಿ ಇದೆ.

೬–೩೫ ಪಿ. ಎಂ.

ಮತ್ತೆ ಬಹಳ ಒಳ್ಳೆಯ ಪ್ರಾಜೆಕ್ಟ್ ಅಂದರೆ ತಮ್ಮೇಕಲ್ ಇದು ಗುಲ್ಬರ್ಗದಲ್ಲಿ ಇದೆ ಅಲ್ಲಿ ಕಾಡೇನೂ ಇಲ್ಲ. ಅದರಿಂದ ೬೭೦ ಮೆಗಾವಾಟ್ಸನ್ನು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಸಾಧ್ಯವಿದೆ. ಅದಕ್ಕೆ ೭೦೦ ಕೋಟಿ ಖರ್ಚು ಬರಬಹುದು ಅದು ಒಳ್ಳೆಯ ಪ್ರಾಜೆಕ್ಟ್ ಇವನ್ನೆಲ್ಲಾ ನಾವು ಆದಷ್ಟು ಬೇಗ ಕೇಂದ್ರ ಸರ್ಕಾರದವರ ಹತ್ತಿರ ಹೋಗಿ ಅವರ ಅನುಮತಿಯನ್ನು ಪಡೆದು ಎಲ್ಲಿಂದಲಾದರೂ ಹಣವನ್ನು ತಂದು ಇದನ್ನೆಲ್ಲಾ ಪ್ರಾರಂಭ ಮಾಡಲು ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆಂದು ಹೇಳ ಬಯಸುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಡಿಮ್ಯಾಂಡ್ ಮತ್ತು ಸಪ್ಲೈನಲ್ಲಿ ದೊಡ್ಡ ಗ್ಯಾಪ್ ಇರುವುದರಿಂದ ನಮ್ಮ ಕೆ. ಇ. ಬಿ. ಅವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಇದು ಒಂದು ದೊಡ್ಡ ಸಂಸ್ಥೆಯಾಗಿದ್ದು, ಇದರಲ್ಲಿ ೪೭ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ಮೊದಲು ೫೦ ಸಾವಿರ ಜನರಿದ್ದರು. ಈಗ ಕೆಲವರು ರಿಟೈರ್ ಆಗಿ ೪೭ ಸಾವಿರಕ್ಕೆ ಬಂದಿದೆ. ನಮ್ಮಲ್ಲಿ ೫೩ ಲಕ್ಷ ಸಂಪರ್ಕಗಳಿವೆ ೫೩ ಲಕ್ಷ ಬಳಕೆದಾರರು ಇರುವಾಗ ಕಂಪ್ಲೇಂಟ್‌ಗಳು ಬರುವುದು ಸ್ವಾಭಾವಿಕ. ಕೆಲವು ಸರಿಯಾದ ಕಂಪ್ಲೇಂಟ್‌ಗಳು ಇರುತ್ತವೆ. ಎರಡು ಗಿರಾಕಿಗಳು ಬಂದರೆ. ಬೇಕಾದಷ್ಟು ಕಂಪ್ಲೇಂಟ್ ಬರುತ್ತದೆ ಅಂತಹ ಸಂದರ್ಭದಲ್ಲಿ ೫೩ ಲಕ್ಷ ಕನೆಕ್ಷನ್ಸ್ ಇರುವಾಗ ಕೆಲವು ದೂರುಗಳು ಬರುವುದು ಸ್ವಾಭಾವಿಕ ಲಕ್ಷಾಂತರ ವೈರ್‌ಗಳು ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹೋಗಿದೆ. ಈ ರೀತಿ ಕೆಲವು ತೊಂದರೆಗಳು ಸ್ವಾಭಾವಿಕವಾಗಿದೆ. ಕೆಲವು ತೊಂದರೆಗಳು ಬೋರ್ಡ್‌ನಿಂದ ಆಗಿದೆ. ಹ್ಯೂಮನ್ ಡಿಫಿಷಿಯೆನ್ಸಿ ಏನು ಆಗಿದೆ, ಅದನ್ನು ದೂರ ಮಾಡಲು ಎಲ್ಲಾ ಪ್ರಯತ್ನವನ್ನು ಮಾಡಲು ಕ್ರಮ ಕೈಗೊಳ್ಳುತ್ತೇವೆ. ಎಲ್ಲಾ ವಿಲೇಜ್‌ಗಳಿಗೆ ಕನೆಕ್ಷನ್ ಕೊಟ್ಟಿದ್ದೇವೆಂದು ಕಳೆದ ವರ್ಷದಿಂದ ಹೇಳುತ್ತಿದ್ದೇವೆ, ಆದರೆ ನಮ್ಮ ಮಲೆನಾಡಿನವರು ಯಾರಿಗೂ ಇದರಿಂದ ಸಂತೋಷವಾಗುವುದಿಲ್ಲ ನಮ್ಮಲ್ಲಿ ಮನೆಗಳು ದೂರ ದೂರ ಇರುತ್ತದೆ. ಆದ್ದರಿಂದ ಅಂತಹ ಕಡೆಗಳಲ್ಲಿ ಈಗ ೪೦ ಸಾವಿರದ ಮಿತಿ ಏನು ಇದೆ. ಅದನ್ನು ನಮ್ಮ ಮಲೆನಾಡು ಭಾಗಕ್ಕೆ ಬದಲಾವಣೆ ಮಾಡಬೇಕೆಂದು ನಿರ್ಧರಿಸಿದ್ದೇವೆ. ಈಗಿನ ಮಿತಿ ಪ್ರಕಾರ ನಮ್ಮ ಮಲೆನಾಡಿನಲ್ಲಿ ಯಾವ ಹ್ಯಾಮ್ಲೆಟಿಗೂ ಕನೆಕ್ಷನ್ ಸಿಗಲು ಸಾಧ್ಯವಿಲ್ಲ. ವಿಲೇಜ್‌ನಿಂದ ಹ್ಯಾಮ್ಲೆಟ್ ಹೋಗಬೇಕಾದರೆ ೪೦ ಸಾವಿರದ ಮಿತಿ ಇಟ್ಟಿದ್ದಾರೆ ಈ ೪೦ ಸಾವಿರದ ಮಿತಿಯನ್ನು ಮಲೆನಾಡು ತಾಲ್ಲೂಕು ಮತ್ತು ಗುಲ್ಬರ್ಗದಲ್ಲಿ ಬಹಳ ದೂರ ದೂರ ಇರುವುದರಿಂದ ಅದನ್ನು ೭೫ ಸಾವಿರಕ್ಕೆ ಏರಿಸಬೇಕೆಂದು ಯೋಚನೆ ಮಾಡಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—೭೫ ಸಾವಿರಕ್ಕೆ ಎಷ್ಟಾಗುತ್ತದೆ ಅಷ್ಟು ಮಾಡುತ್ತೇವೆ ಮುಂದೆ ಮಾಡುತ್ತೇವೆ ಎಂದರೆ ಹೇಗಾಗುತ್ತದೆ ? ಇನ್ನು ೨೫ ಸಾವಿರ ಜಾಸ್ತಿ ಮಾಡಿ ೧ ಲಕ್ಷ ಎಂದು ಹೇಳಿ.

ಶ್ರೀ ಎಸ್. ಎಂ. ಯಾಹ್ಯಾ.—ಆ ರೀತಿ ಮಾಡಲು ಈ ಕೆ. ಇ. ಬಿ. ಗೆ ಹಣಕಾಸಿನ ಬಗ್ಗೆ ಸರ್ಕಾರದಿಂದ ಬೆಂಬಲವನ್ನು ಕೂಡ ಕೊಡಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮ ಪ್ರೊಡಕ್ಷನ್ ಬರುವ ವರ್ಷಗಳಲ್ಲಿ ಜಾಸ್ತಿ ಆಗುತ್ತದೆಂದು ತಾವು ಏನು ಆಸೆಯನ್ನು ಇಟ್ಟು ಕೊಂಡಿದ್ದೀರಿ, ಆದ್ದರಿಂದ ಈಗಲೇ ಇದನ್ನು ಹೆಚ್ಚು ಮಾಡಬೇಕು. ಇನ್ನು ೧೦ ವರ್ಷದ ಮೇಲೆ ಮಾಡುತ್ತೇವೆಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಎಂ, ಯಾಹ್ಯಾ.—ಗ್ಯಾಪ್ ಇದ್ದೆ ಇರುತ್ತದೆ. ಹೊಸ ಸಂಪರ್ಕಗಳು ಬರುತ್ತಿರುತ್ತದೆ.

SRI KAGODU THIMMAPPA.—There are 64 hamlets identfied, line estimate made and not even one hamlet come within one lakh.

ಶ್ರೀ ಎಸ್. ಎಂ. ಯಾಹ್ಯಾ.—ಅದನ್ನು ವಯಬಲ್ ಆಗುವಂತೆ ಮಾಡೋಣ, ಈಗ ನಾವು ೬ ಲಕ್ಷ ೬೩ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ಬೇಡಿಕೆ ಬಹಳಷ್ಟು ಇದೆ. ಬಹಳಷ್ಟು ಅಪ್ಲಿಕೇಷನ್ ಹಾಗೆಯೇ ಬಾಕಿ ಉಳಿದಿದೆ ಎಂದು ಶ್ರೀ ಸಿಂಧ್ಯಾರವರು ಹೇಳಿದರು. ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಕೊಡದೆ ಇರುವುದರಿಂದ ಬಹಳಷ್ಟು ಜನ ಸಾಲ ಮಾಡಿ ಯಾವ ಪ್ರಯೋಜನವೂ ಇಲ್ಲದೆ ಕಷ್ಟಪಡುತ್ತಿದ್ದಾರೆಂದು ಅವರು ಹೇಳಿದರು. ಈ ಬಗ್ಗೆ ವಾಟಾಳ್ ನಾಗರಾಜ್ ರವರು. ಸಹ ಮಾತನಾಡಿದರು. ಅದಕ್ಕಾಗಿ ನಾವು ಏನು ಯೋಜನೆಯನ್ನು ಮಾಡುತ್ತಿದ್ದೇವೆಂದರೆ, ಈಗಿನ ಪ್ರೊಸೀಜರನ್ನು ನಾವು ಸಿಂಪ್ಲಿಫೈ ಮಾಡಲೇ ಬೇಕಾಗುತ್ತದೆ ಅದಕ್ಕಾಗಿ ಬೇಗನೆ ಈ ಪ್ರೊಸೀಜರನ್ನು ನಾವು ಸಿಂಪ್ಲಿಫೈ ಮಾಡುವ ಎಲ್ಲಾ ಕಾರ್ಯಗಳನ್ನು ಮಾಡುತ್ತೇವೆ ಎಂದು ಹೇಳುತ್ತೇನೆ. ಆ ನಂತರ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೆ ಆರು ತಿಂಗಳ ನಂತರ ಲ್ಯಾಪ್ಸ್ ಆಗುತ್ತದೆ ಎಂದು ಹೇಳಿದ್ದಾರೆ, ಅವರಿಗೆ ಲ್ಯಾಪ್ಸ್ ಆಗದ ಹಾಗೆ ಸಹಾ ನಾವು ಕಾರ್ಯ ಮಾಡಬೇಕೆಂದಿದ್ದೇವೆ. ಇದರಿಂದ ಅವರಿಗೆ ಸಹಾಯವಾಗುತ್ತದೆ. ಈ ಪಂಪ್‌ಸೆಟ್‌ಗೆ ರೋಸ್ಟರ್ ಸಿಸ್ಟಂ ಇದೆ. ಈಗ ಅವನ್ನು ಸರಳಗೊಳಿಸಿದ್ದೇವೆ. ಈಗ ಕನ್‌ಸಂಪ್ಷನ್ ಪಂಪ್‌ಸೆಟ್‌ನಿಂದ ೩೦.೧೬ ಪರ್‌ಸೆಂಟ್ ಆಗುತ್ತದೆ. ಆದರಿಂದ ನಮಗೆ ೪,೨೪ ರೆವಿನ್ಯೂ ಬರುವುದು. ಮಾನ್ಯ ಚಂದ್ರೇಗೌಡರು ಹೇಳಿದರು, ೨೦೦ ಕೋಟಿ ರೂಪಾಯಿ ಆಗುತ್ತದೆ ಎಂದು ಅದನ್ನು ನಾವು ರೈತರ ಹಿತಕ್ಕಾಗಿ ರೈತರು ಯಾರು ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಅದು ಎಷ್ಟೆಂದರೆ ೧೮೫ ಕೋಟಿ ರೂಪಾಯಿ ಈ ಕನ್‌ಸಂಪ್ಷನ್ ನಿಂದ ಕೆ. ಇ. ಬಿ. ಗೆ ಆಗುತ್ತದೆ. ಇದನ್ನು ನೀವು ಹೇಳಿದಂತೆ ಬೇರೆ ಕಡೆಯಿಂದ ನಾವು ಇಂಡಸ್ಟ್ರಿಯಸ್ಟ್‌ಗಳಿಂದ ಏನೋ ಮಾಡಿ ಮೇಕಪ್ ಮಾಡುತ್ತಿದ್ದೇವೆ. ಇದರಲ್ಲಿ ಈ ಕನೆಕ್ಟ್ ಮಾಡುವ ಛಾರ್ಜಸ್ ಗಳು ಇಲ್ಲ. ಅದು ಒಂದು ಈಗಾಗಲೇ ಹತ್ತು ಸಾವಿರ ಇದೆ. ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟನ್ನು ಇದರಲ್ಲಿ ತೆಗೆದುಕೊಂಡಿಲ್ಲ. ಅಂತೂ ಈ ರೀತಿ ನಾವು ನಲವತ್ತು ಸಹ ಸಾಲವನ್ನು ಕೊಡಬೇಕಾಗಿದೆ, ಬಹಳಷ್ಟು ಡಿಮ್ಯಾಂಡ್ ಇದೆ. ಕೆಲವರಿಗೆ ತೊಂದರೆಯಾಗಬಹುದು. ಮಾನ್ಯ ಸಿಂಧ್ಯಾರವರು ಒಂದು-ಎರಡು ಪೋಲ್ ಇದ್ದವರಿಗೆ ಕೊಡಿ ಎಂದು ಹೇಳಿದರು. ಅದು ಸಹಾ ಯೋಚನೆ ಮಾಡುವಂಥ ಕಾರ್ಯ ಆದರೆ ಏನಾಗುತ್ತದೆ ಎಂದರೆ ೧-೨ ಜನರಿಗೆ ಕೊಡುತ್ತಾ ಹೋದರೆ ಬಹಳ ದೂರ ಇದ್ದಂಥವರು ಏನು ಹೇಳುತ್ತಾರೆ ಎಂದರೆ ಹತ್ತಿರ ಇದ್ದವರಿಗೆ ಸಿಗುತ್ತಿದೆ, ನಮಗೆ ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಇದರಿಂದ ನನಗೆ ತೊಂದರೆಯಾಗುತ್ತದೆ, ಏನೋ ಇಲ್ಲಿ ಡಿಸ್ಕ್ರಿಮಿನೇಷನ್ ಮಾಡಿದ ಹಾಗೆ ಆಗುತ್ತದೆ ಎಂದು ಒಂದು-ಎರಡು ಜನರಿಗೆ ಕೊಟ್ಟು ಸಹಾ ನಲವತ್ತು ಸಾವಿರ ಟಾರ್ಗೆಟ್ ಆದರೂ ಪಂಪ್‌ಸೆಟ್‌ಗಳನ್ನು ತೆಗೆದುಕೊಂಡರೂ ಈ ದೂರ ಇದ್ದವರಿಗೆ ತೊಂದರೆ ಆಗುತ್ತದೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಅದಕ್ಕಾಗಿ ನಾನು ಉತ್ತರವನ್ನು ಕೊಡುತ್ತಿಲ್ಲ. ಈ ಬಗ್ಗೆ ನಾವು ಇನ್ನು ಯೋಚನೆ ಮಾಡುವಂಥ ಪರಿಸ್ಥಿತಿಯಲ್ಲಿದ್ದೇವೆ ಇನ್ನು ಭಾಗ್ಯ ಜ್ಯೋತಿ ವಿಷಯ. ಅದು ನನಗೆ ಬಹಳ ಪ್ರಿಯವಾದುದು. ಇದು ತಮಗೆ ಗೊತ್ತಿದೆ. ಭಾಗ್ಯ ಜ್ಯೋತಿ ಎಂದು ಹೆಸರನ್ನು ಹಾಕಿದವರು ನಾನು ೧೯೭೮ನೇ ಇಸವಿಯಲ್ಲಿ ಬಜೆಟ್‌ನಲ್ಲಿ ನಾವು ಇದನ್ನು ಇಟ್ಟುಕೊಂಡು ಫಸ್ಟ್ ಟೈಮ್ ಇಡೀ ಭಾರತದಲ್ಲಿಯೇ ಯಾರು ಸಹ ಯೋಚನೆ ಮಾಡದೇ ಇದ್ದಂಥ ಭಾಗ್ಯಜ್ಯೋತಿ ಸ್ಕೀಮನ್ನು ಜಾರಿಗೆ ತಂದು ಅದನ್ನು ಹೊನ್ನಾವರದ ಹತ್ತಿರ ಇಡೀ ಕರ್ನಾಟಕದಲ್ಲಿ ಫಸ್ಟ್ ಟೈಮ್ ಇನಾಗ್ಯುರೇಟ್ ಮಾಡಿದ್ದು ಹರಿಜನ ಕಾಲೋನಿಗೆ ಈ ಭಾಗ್ಯ ಜ್ಯೋತಿಯನ್ನು ಹೊನ್ನಾವರದ ಒಂದು ವಿಲೇಜ್‌ನಲ್ಲಿ ಕೊಟ್ಟಿದ್ದೇವೆ. ನನಗೆ ಯೋಚನೆ ಆಗುತ್ತಿತ್ತು, ನಾವು ಎಲ್ಲಾ ಸ್ವಲ್ಪ ಓಳ್ಳೆಯವರು ನಾವೆಲ್ಲ ಓದು

ತ್ತೇವೆ. ತೀರಾ ಬಡವರು ಹರಿಜನ ಗಿರಿಜನದವರು ಯಾರು ಇದ್ದಾರೆ, ಅವರಿಗೂ ಒಂದು ಬಲ್ಬನ್ನು ಕೊಡುವುದಕ್ಕೂ ನನಗೆ ಸಾಧ್ಯವಿಲ್ಲವೋ, ಈ ಒಂದು ಕಾರಣದಿಂದ ಭಾಗ್ಯ ಜ್ಯೋತಿ ಸ್ಕೀಮನ್ನು ನಾವು ಜಾರಿಗೆ ತಂದಿದ್ದೇವೆ. ಈ ಭಾಗ್ಯಜ್ಯೋತಿ ಸ್ಕೀಮ್ ಈವರೆಗೂ ಬಹಳ ವೇಗದಲ್ಲಿ ಹೋಗಿ ಈವರೆಗೆ ನಾವು ಕೊಟ್ಟಿರುವ ಸಂಖ್ಯೆ ಸಹಾ ಮೂರು ಲಕ್ಷದ ೫೨ ಸಾವಿರದವರೆಗೆ ಇದೆ. ಈ ವರ್ಷ ಸಹಾ ಇನ್ನೂ ಇಪ್ಪತ್ತು ಸಾವಿರ ಭಾಗ್ಯ ಜ್ಯೋತಿ ಸ್ಕೀಮನ್ನು ಜಾರಿಗೆ ಕೊಡಬೇಕೆಂದಿದ್ದೇವೆ. ಹರಿಜನ ಗಿರಿಜನರಿಗೆ ಸಹಾಯ ಮಾಡಬೇಕು ಎಂದು ಮಾನ್ಯ ಸಿದ್ಧ್ಯಾರವರು ಹೇಳಿದರು. ಅದಕ್ಕಾಗಿ ಕುಟೀರ ಜ್ಯೋತಿ ಎಂದು ಸೆಂಟ್ರಲದ್ದು ಬಂದಿದೆ. ಕುಟೀರ ಜ್ಯೋತಿಗೂ ಭಾಗ್ಯಜ್ಯೋತಿಗೂ ಸ್ವಲ್ಪ ವ್ಯತ್ಯಾಸ ಇದೆ. ಇಲ್ಲಿ ನಾಲ್ಕು ನೂರು ರೂಪಾಯಿ ಖರ್ಚಾದರೂ ಭಾಗ್ಯಜ್ಯೋತಿಯಲ್ಲಿ ೨೦೦ ರೂಪಾಯಿ ನಾವು ಕೊಡುತ್ತೇವೆ. ೨೦೦ ರೂಪಾಯಿಗಳನ್ನು ಅವರು ಕೊಡಬೇಕು, ಅವರು ೨.೫೦ ಪೈಸೆ ಮತ್ತು ಕರೆಂಟ್ ಛಾರ್ಜ್ ೨.೫೦ ಹೀಗೆ ಒಟ್ಟು ೫ ರೂಪಾಯಿ ಕೊಡಬೇಕು. ಕುಟೀರ ಜ್ಯೋತಿಯಲ್ಲಿ ಎಲ್ಲಾ ಹಣ ಕೇಂದ್ರದಲ್ಲಿ ಕೊಡುತ್ತಿದ್ದಾರೆ. ಅದಕ್ಕಾಗಿ ಅವರು ೨.೫೦ ಪೈಸೆಯನ್ನೂ ಕೊಡಬೇಕಾಗಿಲ್ಲ. ಅದಕ್ಕಾಗಿ ಕುಟೀರ ಜ್ಯೋತಿ ಎಂದು ಇಟ್ಟಿದೆ, ಅದೆಲ್ಲಾವನ್ನು ಹರಿಜನ ಗಿರಿಜನರಿಗೆ ಕೊಟ್ಟು ಬಿಡಬೇಕು ಎಂದಿದ್ದೇವೆ. ಬಾಕಿಯವರಿಗೆ ಇನ್ನು ೨.೫೦ ಪೈಸೆ ಹೆಚ್ಚು ಬೀಳುತ್ತದೆ. ಈ ರೀತಿ ನಾವು ಮಾಡಬೇಕು ಎಂದು ಇದ್ದೇವೆ. ಈಗ ಇಲ್ಲಿ ಮತ್ತೆ ದೊಡ್ಡ ಸಮಸ್ಯೆ ಎಂದು ಹೇಳಿದರೆ ಒಂದು ವಿಲೇಜ್‌ನಲ್ಲಿ ೧೫ ಕನೆಕ್ಷನ್ ಕೊಟ್ಟರೆ ಆ ಸ್ಕೀಮ್ ಹಳ್ಳಿಗೆ ಮುಕ್ತಾಯವಾಗುತ್ತದೆ.

ಅದನ್ನು ಪುನಃ ಇವೊತ್ತು ರಿಲಾಕ್ಸ್ ಮಾಡುತ್ತಿದ್ದೇವೆ. ಪ್ರತಿಯೊಂದು ಹ್ಯಾಮಲೆಟ್‌ಗೂ ಕನಿಷ್ಠ ಪಕ್ಷ ೧೫ ಕೊಡಬೇಕು. ಪ್ರತಿಯೊಂದು ಹರಿಜನ ಬಸದಿಗೂ ೧೫ ಕೊಡಬೇಕು; ಒಂದು ವಿಲೇಜ್ ೧೫ ಕೊಟ್ಟರೆ, ಹರಿಜನರಿಗೆ ಸಿಕ್ಕುವುದಿಲ್ಲ. ತಾಂಡ ಇರಲಿ, ಹರಿಜನ ಬಸದಿ ಇರಲಿ, ಅವರಿಗೆ ಇದನ್ನು ರಿಲಾಕ್ಸ್ ಮಾಡಿಕೊಂಡು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಇದು ಆಗಲಿಕ್ಕೆ ಸಾಧ್ಯ ಇದೆ. ಭಾಗ್ಯಜ್ಯೋತಿ ಯೋಜನೆಯ ಅನುಕೂಲ ಒಂದು ವಿಲೇಜ್‌ಗೆ ೧೫ ಇಟ್ಟರೆ ಸಾಧ್ಯವಿಲ್ಲ; ಅದನ್ನು ರಿಲ್ಯಾಕ್ಸ್ ಮಾಡಿ ಪ್ರತಿಯೊಂದು ಹರಿಜನ ಕೇರಿಗೂ ಸಹ ೧೫ ಕೊಡಬೇಕೆಂದು ಈಗತಾನೆ ನಿರ್ಧಾರ ಮಾಡುತ್ತಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಈಗ ಭಾಗ್ಯಜ್ಯೋತಿ ಅರಿಯರ್ಸ್ ಇದೆ ಎಂದು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಭಾಗ್ಯಜ್ಯೋತಿಯಲ್ಲಿ ಹೆಚ್ಚಿಗೆ ಯಾರು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ ಅದನ್ನು ಸ್ಪೆಸಿಫಿಕ್ ಆಗಿ ಕೇಸ್ ತಂದುಕೊಟ್ಟರೆ ನೋಡಬಹುದು. ಇದರಲ್ಲಿ ೩೦ ಪರ್ಸೆಂಟ್ ಸಹ ಆದಾಯ ಬರುತ್ತಿಲ್ಲ. ನಾವು ಸಹ ಅದು ಹೆಚ್ಚಾಗಿ ಕಠಿಣವಾಗಿ ತೆಗೆದುಕೊಳ್ಳಬೇಕೆಂದು ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ — ತಾವು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಈ ವಿಷಯದ ಬಗ್ಗೆ ಮೊದಲಿನಿಂದಲೂ ಕೇಳದೆ ಬಿಟ್ಟುಬಿಟ್ಟರು. ಈಗ ಒಂದೇ ಸಾರಿ ೨೦೦–೩೦೦ ರೂಪಾಯಿ ಬಾಕಿ ಕಟ್ಟಬೇಕೆಂದು ಕೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—೨೦೦–೩೦೦ ರೂಪಾಯಿಯೇ ಅಲ್ಲ. ೮೦೦ ರೂಪಾಯಿವರೆಗೆ ಇದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಹಿಂದಿನದು ಎಲ್ಲಾ ಸೂಟ್ ಮಾಡಿಬಿಡಿ, ಮುಂದಿನದು ವಸೂಲು ಮಾಡಿ.

ಶ್ರೀ ಎಸ್. ಎಂ. ಯಾಹ್ಯಾ.—ಅದರಲ್ಲಿ ಏನಾದರೂ ತೊಂದರೆ ಆದರೆ, ಪರಿಹಾರ ನಾನೇ ಮಾಡಿ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಈಗ ಅಭಿವೃದ್ಧಿ ಬಗ್ಗೆ ಯೋಚನೆ ಇಲ್ಲ. ಹಿಂದಿನ ಸರ್ಕಾರ ಬಯ್ಯುವುದು. ನಾನು ಅದನ್ನು ಕೇಳುತ್ತಿಲ್ಲ, ನಾನು ಕೇಳುತ್ತಿರುವಂತಾದ್ದು ಹಿಂದಿನ ಬಾಕಿ ಏನಿದೆ, ಅದನ್ನು ಏನು ಮಾಡುತ್ತೀರಾ? ಬಾಕಿ ಅಂದರೆ ೩೦೦–೫೦೦ ರೂಪಾಯಿ ಬಾಕಿ ಇದೆ. ತಿಂಗಳು, ತಿಂಗಳು ವಸೂಲು ಮಾಡಿ; ಎರಡೂವರೆ ರೂಪಾಯಿ ಕೊಟ್ಟುಬಿಡುತ್ತಾರೆ, ಅದನ್ನು ಮಾತ್ರ ತಾವು ಮಾಡುವುದಿಲ್ಲ, ಒಂದೇ ಸಾರಿ ಐನೂರು; ಸಾವಿರ ರೂಪಾಯಿ ಕಟ್ಟುಬಿಡಿ ಅಂದರೆ ಆ ಬಡವ ಎಲ್ಲಿಂದ ತಂದು ಕಟ್ಟುತ್ತಾನೆ.

ಶ್ರೀ ಎಸ್. ಎಂ. ಯಾಹ್ಯಾ.— ಈಗ ಎಲ್ಲಾ ಹೇಳುತ್ತಿದ್ದೇನೆ. ಬೇಕಾದಷ್ಟು ಸಂಖ್ಯೆ ಇದೆ. ತಾವು ರಾತ್ರಿ ೧೨ ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದರೆ ಎಲ್ಲಾ ಹೇಳುತ್ತೇನೆ. ಇದರ

ಕಂಪ್ಯೂಟರ್ ಇದ್ದ ಹಾಗೆ. ಈಗ ಬಹಳಷ್ಟು ಸದಸ್ಯರು ಒಂದು ಮಾತನ್ನು ಹೇಳಿದರು. ಈ ಟ್ರಾನ್ಸ್‌ಮಿಷನ್ ಲಾಸ್ ಬಗ್ಗೆ. ಇದು ಆಗಲಿಕ್ಕೆ ಪ್ರಮುಖವಾದಂಥ ಕಾರಣ ನಮ್ಮಲ್ಲಿ ೩೩ ಕೆ.ವಿ. ಲೈನ್ಸ್ ಮತ್ತು ೬೬ ಕೆ.ವಿ. ಲೈನ್ಸ್. ಕರ್ನಾಟಕದಲ್ಲಿ ಸುತ್ತಾಡಿಕೊಂಡು ೩ ಲಕ್ಷದ ೫೨ ಸಾವಿರ ಕಿಲೊ ಮೀಟರ್ಸ್ ಅಷ್ಟು ಇದೆ. ಅದಕ್ಕಾಗಿ ಟ್ರಾನ್ಸ್‌ಮಿಷನ್ ಲಾಸ್ ಆಗುವಾಗ ಆ ಸ್ಟೇಷನ್‌ಗೆ ಬಂದರೆ, ಸ್ಟೆಪ್ ಇನ್ ಮತ್ತು ಸ್ಟೆಪ್ ಆಫ್ ಔಟ್ ಮಾಡುವಾಗ ಹೆಚ್ಚು ಲಾಸ್ ಆಗುತ್ತದೆ. ಆ ಟ್ರಾನ್ಸ್‌ಮಿಷನ್ ಲಾಸ್ ೨೧ ಬರುತ್ತದೆ ಈಗ ಹೆಚ್ಚು ಹೆಚ್ಚು ಹೊಸ ಲೈನ್‌ಗಳನ್ನು ೧೧೦-೨೨೦ ಕೆ. ವಿ. ಲೈನ್ಸ್ ಹಾಕಿಬಿಟ್ಟರೆ, ಟ್ರಾನ್ಸ್‌ಮಿಷನ್ ಲಾಸ್ ಬಹಳಷ್ಟು ಕಡಿಮೆಯಾಗುತ್ತದೆ. ಅದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. ಅಮೇರಿಕದಲ್ಲಿ ಈಗ ೪೦೦ರಿಂದ ೮೦೦ ಕೆ.ವಿ. ಲೈನ್ಸ್‌ನವರೆಗೆ ಹೋಗಿದ್ದಾರೆ. ನಾವು ೧೧೦ ಮಾಡಿದರೆ ಸಾಕು ಅದಕ್ಕಾಗಿ ವೆಸ್ಟರ್ನ್ ಕಂಟ್ರೀಸ್‌ನಲ್ಲಿ ಅಮೇರಿಕಾದಲ್ಲಿ ೫ರಿಂದ ೯ ಪರ್ಸೆಂಟ್ ವರೆಗೆ ಮಾತ್ರ ಟ್ರಾನ್ಸ್‌ಮಿಷನ್ ಲಾಸ್ ಆಗುತ್ತದೆ. ಅದರ ಪ್ರಕಾರ ಇಂಡಿಯನ್ ಕಂಪನಿ ಪ್ರಕಾರ ೧೬.೫ಕ್ಕೆ ತಂದರೆ ಅದು ಸಮ್‌ಥಿಂಗ್ ರಿಮಾರ್ಕಬಲ್ ಇದು ಎಲ್ಲಾ ರಾಜ್ಯದಲ್ಲೂ ಇದೆ. ನಾವು ಮೆಚ್ಚಬೇಕಾಗಿದೆ ಒಂದೇ ಒಂದು ರಾಜ್ಯ ಯಾವುದೆಂದರೆ ಮಹಾರಾಷ್ಟ್ರದಲ್ಲಿ ೧೪.೫ ಇದೆ. ಅಂದರೆ ನ್ಯಾಷನಲ್ ಆವರೇಜ್‌ಗಿಂತ ಕಡಿಮೆ ಇದೆ. ಮಹಾರಾಷ್ಟ್ರ ಎಲೆಕ್ಟ್ರಿಸಿಟಿ ಉತ್ಪಾದನೆಗೆ ಟ್ರಾನ್ಸ್‌ಮಿಷನ್ ಲಾಸ್ ಅನ್ನು ಕಡಿಮೆ ಮಾಡುವುದಕ್ಕೆ ತೊಂದರೆಯಾಗಿದೆ. ಗುಜರಾತಿನಲ್ಲಿ ಸಹ ಟ್ರಾನ್ಸ್‌ಮಿಷನ್ ಲಾಸ್ ೨೨ ಪರ್ಸೆಂಟ್ ಇದೆ. ಉತ್ತರ ಪ್ರದೇಶದಲ್ಲಿ ೨೪ ಪರ್ಸೆಂಟ್ ಇದೆ.

ಶ್ರೀ ಎಚ್. ಏಕಾಂತಯ್ಯ.—ಅಲ್ಲಿ ವಿದ್ಯುತ್ ಕಳ್ಳರು ಇಲ್ಲಿಗಿಂತ ಜಾಸ್ತಿ ಇರಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಅದಕ್ಕೇ ಬರುತ್ತೇನೆ ಯಾವುದನ್ನೂ ಮುಚ್ಚಿಡಬೇಕಾಗಿಲ್ಲ. ಸುಮ್ಮನೆ ಅದೂ ಇದೂ ಹೇಳಿ ಅಭಿವೃದ್ಧಿಯಾಗಲಿಕ್ಕೆ ನಾವು ತೊಂದರೆ ಮಾಡಬಾರದು. ಕಳವಿಗಿಂತ ಟ್ರಾನ್ಸ್‌ಮಿಷನ್ ಲಾಸ್ ದೊಡ್ಡ ದೊಡ್ಡ ಪ್ರದೇಶದಲ್ಲಿ ಆಗುತ್ತಿದೆ. ಸುಮಾರು ೫ ರಿಂದ ೯ ಪರ್ಸೆಂಟ್ ಆಗುತ್ತಿದೆ. ಅಲ್ಲಲ್ಲಿಯೂ ಪ್ರಕಾರ ಇಂಡಿಯನ್ ಕಂಡಿಷನ್ ಪ್ರಕಾರ ೧೬.೫ ಪರ್ಸೆಂಟ್ ಆಗುತ್ತದೆ. ಇದು ಬರೀ ಕಳವಿನಿಂದ ಆಗುತ್ತಿಲ್ಲ. ಅದು ಒಂದು ರೀತಿಯ ಭ್ರಮೆ ಕೆಲಸದಲ್ಲಿ ಕಳವು ಮಾಡುವವರು ಬೇರೆ ಎಲ್ಲಾದರಲ್ಲಿ ಕಳವು ಮಾಡುತ್ತಾರೆ. ವೆಸ್ಟ್ ಬೆಂಗಾಲ್‌ನಲ್ಲಿ ೨೦ ಪರ್ಸೆಂಟ್ ಇದೆ. ಸುಮಾರು ೧೦ ಕೋಟಿ ರೂಪಾಯಿಯ ಹೊಸ ಲೈನ್ ಅನು ಇದಕ್ಕಾಗಿ ಈ ವರ್ಷವೇ ಹಾಕಬೇಕೆಂದು ಇದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕೆ.ಇ.ಬಿ. ಅನ್ನು ನೀವು ಹೀಗೆ ಡಿಫೆಂಡ್ ಮಾಡಿಕೊಳ್ಳುತ್ತಾ ಹೋದರೆ ಅಲ್ಲಿರತಕ್ಕಂತಹ ಅಧಿಕಾರಿಗಳು ೨೨ ಪರ್ಸೆಂಟ್ ಇರುವುದನ್ನು ೩೪ ಪರ್ಸೆಂಟ್‌ಗೆ ಏರಿಸಿ ಮುಂದೆ ನೀವು ಉತ್ತರ ಕೊಡುವ ಹಾಗೆ ಮಾಡುತ್ತಾರೆ. ಮಾನ್ಯ ಪಟೇಲ್‌ರವರು ಮಂತ್ರಿಗಳಾಗಿದ್ದಾಗ ಕೂಡ ಇದೇ ಸ್ಟ್ಯಾಟಿಸ್ಟಿಕ್ಸ್ ಅನ್ನು ಕೊಟ್ಟರು. ಪ್ಲಾನಿಂಗ್ ಕಮಿಷನ್‌ರವರು ಅದಕ್ಕೆ ದುಡ್ಡು ಕೊಡಲಿಲ್ಲ ಇದಕ್ಕೆ ದುಡ್ಡು ಕೊಡಲಿಲ್ಲಿ ಎಂಬ ಉತ್ತರ ಅನೇಕ ಶಬ್ದಗಳ ಧಾಟಿ ಬಿಟ್ಟರೆ ಕೆ.ಇ.ಬಿ. ಅಧಿಕಾರಿಗಳು ಕೊಟ್ಟಿರ ತಕ್ಕಂಥಾದ್ದು ಬೇರೇನೂ ಇಲ್ಲ. ನಾವು ನಿಮ್ಮಿಂದ ಇಂತಹ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸಿಂಧ್ಯಾರವರು ಏನೋ ಆಗಿದೆ ಎಂಬಂತೆ ಹೇಳುತ್ತಿದ್ದಾರೆ. ಹೊಸ ಕಲ್ಚರ್ ಆಫ್ ವರ್ಕ್ ಅನ್ನು ತರುತ್ತಿದ್ದೇವೆ. ಮೊದಲು ೨೧ ಪರ್ಸೆಂಟ್ ಇತ್ತು; ಅದು ಈಗ ೨೦ ಪರ್ಸೆಂಟ್‌ಗೆ ಬಂದಿದೆ. ನಮ್ಮ ಎಲ್ಲಾ ಪ್ರಯತ್ನ ಇದನ್ನು ಇನ್ನೂ ಅರ್ಧ ಪರ್ಸೆಂಟ್‌ಗೆ ಇಳಿಸಬೇಕೆಂದಿದೆ ಸುಮಾರು ಹತ್ತು ಕೋಟಿ ರೂಪಾಯಿಯ ಹೊಸ ಲೈನ್ ಅನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅರ್ಧ ಪರ್ಸೆಂಟ್ ಮಾಡಬೇಕೆಂದು ನನ್ನ ಟಾರ್ಗೆಟ್ ಇದೆ. ೧೯.೫ಕ್ಕಿಂತ ಮೇಲೆ ಹೋಗಬಾರದೆಂದು ಇದೆ. ಇದನ್ನು ಇದಕ್ಕಿಂತ ಮೊದಲು ಯಾವ ಮಂತ್ರಿ ಕೂಡ ಹೇಳಲಿಲ್ಲ. ನೀವು ಗಾಬರಿಯಾಗಬೇಡಿ. ಇನ್ನೂ ಹೇಳುವ ವಿಚಾರಗಳು ಬೇಕಾದಷ್ಟು ಇದೆ. ೧೯.೫ಕ್ಕೆ ತರಬೇಕೆಂಬ ಪ್ರಯತ್ನ ನಡೆಯುತ್ತಿದೆ. ಈ ವಿಚಾರದ ಬಗ್ಗೆ ಮತ್ತು ಇದಕ್ಕಾಗಿ ಬರುವ ವರ್ಷ ಹೆಚ್ಚು ಪ್ಲಾನ್ ಔಟ್‌ಲೇ ಮಾಡಿದರೆ ಹೆಚ್ಚು ವಿದ್ಯುತ್ ಅನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ೧೧೦-೨೨೦ ಕೆ. ವಿ ಲೈನ್ಸ್‌ಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಕಳವು ಇಲ್ಲವೇ ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇಂಡಿಯನ್ ಪೀನಲ್ ಕೋಡಿನಲ್ಲಿ ನೆಪೋಲಿಯನವರು ೧೮೬೧ರಲ್ಲಿ ಕಳ್ಳತನವನ್ನು ಡಿಫೈನ್ ಮಾಡಿದರು. ಅದಕ್ಕಿಂತ ಮುಂಚೆ ಸಹ......

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಉತ್ತರ ಮುಗಿಯುವ ಹೊತ್ತಿಗೆ ಬೆಳಕು ಹರಿಯುತ್ತದೆಂದು ಕಾಣುತ್ತದೆ. ಬೆಳಿಗ್ಗೆ ೫ ಗಂಟೆಯಾಗಬಹುದು, ಈಗ ಕರೆಂಟಿಗೆ ಬಂದಿದ್ದೀರಿ. ಕರೆಂಟ್ ದಾಟಿ ಕೈಗಾರಿಕೆಗೆ ಬಂದು ರೇಷ್ಮೆಗೆ ಬಂದು ಉತ್ತರವನ್ನು ಸಂಪೂರ್ಣವಾಗಿ ಮುಗಿಸುವ ಹೊತ್ತಿಗೆ ಬೆಳಿಗ್ಗೆ ಎಷ್ಟು ಹೊತ್ತಾಗಬಹುದೆಂದು.

ಉಪಾಧ್ಯಕ್ಷರು.—ಅವರು ಆದಷ್ಟು ಬೇಗ ಮುಗಿಸುತ್ತಾರ. ನೀವು ಮಧ್ಯೆ ತೊಂದರೆ ಕೊಡಬೇಡಿ.

ಶ್ರೀ ಎಸ್. ಎಂ. ಯಾಹ್ಯಾ.—ಥೆಫ್ಟ್ ವಿಚಾರದಲ್ಲಿ ನಾವು ಏನು ಯೋಚನೆ ಮಾಡಿದ್ದೇವೆಂದರೆ...

ಶ್ರೀ ವಾಟಾಳ್ ನಾಗರಾಜ್.—ನೀವು ಏನೇ ಹೇಳಿದರೂ ನಿಮ್ಮ ವಿದ್ಯುಚ್ಛಕ್ತಿ ಮಂಡಲಿ ಒಂದು ಸತ್ತ ಕುದುರೆ, ನೀವು ಏನೇ ಮೆರವಣಿಗೆ ಮಾಡಿದರೂ ಅದು ಶವದ ಮೆರವಣಿಗೆಯಾಗುತ್ತದೆ. ಅದರಲ್ಲಿ ಏನೂ ಅನುಮಾನಬೇಡ.

ಶ್ರೀ ಎಸ್. ಎಂ. ಯಾಹ್ಯಾ.—ಎನರ್ಜಿ ಆಡಿಟ್ ಮಾಡಬೇಕೆಂದು ಹೇಳಿದರು. ಎನರ್ಜಿಯನ್ನು ಆಡಿಟ್ ಮಾಡಿದರೆ ಗೊತ್ತಾಗುತ್ತದೆ. ನಾನು ಕೆಲವು ಕಾಂಕ್ರೀಟ್ ಸ್ಟೆಪ್ಸ್ ಹೇಳುತ್ತಿದ್ದೇನೆ. ಮಾನ್ಯ ಬೈರೇಗೌಡರು ಟ್ಯಾಂಪರ್ ಆಗುತ್ತಿರುವ ವಿಚಾರವನ್ನು ಹೇಳಿದರು. ಅದನ್ನು ತಪ್ಪಿಸಲು

1) Tamper-proof boxes for all H.T. Installations,

2) Circuit Breakers for the installation and plastic seal on the meter.

3) Providing potential links inside the body of the meter.

ಇದನ್ನೆಲ್ಲಾ ನಾವು ಮಾಡಲಿಕ್ಕೆ ಹೊರಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನೀವು ಬಂದು ಒಂದು ವಾರದಲ್ಲಿ ಇಷ್ಟೊಂದು ಅಂಕಿಅಂಶಗಳನ್ನು ತಿಳಿದುಕೊಂಡಿದ್ದೀರಿ ನಿಮಗೆ ಅವರು ಎಷ್ಟರಮಟ್ಟಿಗೆ ಫೀಡ್ ಮಾಡಿದ್ದಾರೆ, ಎಷ್ಟರಮಟ್ಟಿಗೆ ಕಂಠಪಾಠ ಮಾಡಿಸಿದ್ದಾರೆ. ನಿಜಕ್ಕೂ ಇದು ಬಹಳ ಸಂತೋಷಪಡತಕ್ಕ ವಿಚಾರ...

ಶ್ರೀ ಎಸ್. ಎಂ. ಯಾಹ್ಯಾ.—ಕೆಲವು ವಿಚಾರದಲ್ಲಿ ನಿಮ್ಮಷ್ಟು ನಾನು ಇಲ್ಲದಿರಬಹುದು, ಇನ್ನು ಕೆಲವು ವಿಚಾರದಲ್ಲಿ ನಿಮಗಿಂತ ಹೆಚ್ಚಿಗೆ ಇರಬಹುದು.

ಶ್ರೀ ಎಸ್. ಆರ್. ಶಿವರಾಮೇಗೌಡ.—ನೀವು ಏನೇ ಮಾಡಿದರೂ ಕಳವು ಮಾಡುವುದನ್ನು ನಿಮಗೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಕಳವು ಮಾಡುವುದಕ್ಕೆ ಶಾಮೀಲಾಗಿರತಕ್ಕ ಅಧಿಕಾರಿಗಳನ್ನು ಜೈಲಿಗೆ ಹಾಕಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಅಧಿಕಾರಿಗಳನ್ನು ಮಾತ್ರವಲ್ಲ, ಕೆಲವು ಇಂಡಸ್ಟ್ರಿಯಲಿಸ್ಟ್‌ಗಳನ್ನೂ ಜೈಲಿಗೆ ಕಳುಹಿಸುವುದಕ್ಕೆ ಯೋಚನೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಆ ನಿಲುವನ್ನು ನೀವು ತೆಗೆದುಕೊಂಡರೆ ನಿಮಗೆ ಅಭಿನಂದನೆಗಳ ಸುರಿಮಳೆ ಮಾಡುತ್ತೇವೆ.

ಶ್ರೀ ಎಸ್. ಆರ್. ಶಿವರಾಮೇಗೌಡ.—ಯಾರು ಕಳ್ಳತನ ಮಾಡುತ್ತಾರೋ, ಅಂತಹವರನ್ನು ಮೊದಲು ಜೈಲಿಗೆ ಕಳಿಸಿ.

ಶ್ರೀ ಎಸ್. ಎಂ. ಯಾಹ್ಯಾ.—ನಾನು ತಮಾಷೆಗೆ ಹೇಳುತ್ತಿಲ್ಲ. ಇದು ಸೀರಿಯಸ್ ಮ್ಯಾಟರ್. ಯಾರು ಗಿಲ್ಟಿ ಇದ್ದಾರೆ, ಅವರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ? I am giving a warning to all these people. I am declaring on the floor of this August House that we are going to give warning to all those involved in theft, will be liable for criminal action. Even once for all we are going to cut-off their current forever. Legally, how far it is possible, I do not know. But, I am applying my mind for this.

ಶ್ರೀ ವಾಟಾಳ್ ನಾಗರಾಜ್.—ಸಾಧ್ಯವಾದರೆ ಕಾಯಿದೆಯನ್ನು ತಿದ್ದುಪಡಿ ಮಾಡಿ.

ಶ್ರೀ ಹೆಚ್. ಏಕಾಂತಯ್ಯ.—ಮಂತ್ರಿಗಳು ಹಾಗೆ ಮಾಡುವುದಕ್ಕೆ ಹೋದರೆ ಮುಂದಿನಸಾರಿ ಮಂತ್ರಿಯಾಗುವುದಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಯಾಹ್ಯಾ ಹುಟ್ಟಿರತಕ್ಕದು ಮಂತ್ರಿಯಾಗುವುದಕ್ಕೆ ಎಂದು ಅಲ್ಲ. ಯಾಹ್ಯಾ ಹುಟ್ಟಿರತಕ್ಕದ್ದು ಮನುಷ್ಯನಾಗಿ ಮತ್ತು ಮನುಷ್ಯರ ಸೇವೆ ಮಾಡಲಿಕ್ಕೆ. ಅದರಂತೆ ಸೇವೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ವಿದ್ಯುಚ್ಛಕ್ತಿ ಕಳವು ಮಾಡತಕ್ಕವರಿಗೆ ಶಾಮೀಲಾಗಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ಹೆಚ್. ಟಿ. ಬಿಲ್ಸನ್ನು ಕಂಪ್ಯೂಟರ್‌ನಿಂದ ಚೆಕ್ ಮಾಡಬೇಕೆಂದಿದ್ದೇವೆ. ವಿಜಿಲೆನ್ಸ್ ಸ್ಕ್ವಾಡನ್ನು ಬಲಗೊಳಿಸಿದ್ದೇವೆ. ಇದರಲ್ಲಿ ಇನ್ನೊಂದು ವಿಚಾರ ಎಂದರೆ ವಿದ್ಯುತ್ ಬಳಕೆದಾರರ ಜೊತೆ ಶಾಮೀಲಾಗಿ ದುಡ್ಡನ್ನು ಹೊಡೆಯುವವರಲ್ಲಿ ವಿಜಿಲೆನ್ಸ್‌ನವರೂ ಸೇರಿಕೊಂಡಿದ್ದಾರೆ. ಆದ್ದರಿಂದಲೇ ನಾನು ಹೇಳಿದ್ದು. ಬಾಕಿ ಎಲ್ಲರನ್ನೂ ಸೈಂಟಿಫಿಕ್ ಆಗಿ ಮಾಡಿದ ಮೇಲೆ ನಾನು ವಿಜಿಲೆನ್ಸ್‌ಗೆ ಬಂದಿದ್ದೇನೆ.

ಇನ್ನು ಅರಿಯಾರ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕದ್ದು. ಅರಿಯರ್ಸ್ ಹೆಚ್ಚಿಗೆ ಇರತಕ್ಕದು ನಮ್ಮ ಸರ್ಕಾರದ್ದು ಮತ್ತು ಸರ್ಕಾರದ ಅಂಡರ್‌ಟೇಕಿಂಗ್ಸ್‌ನಿಂದ, ವಿ.ಐ.ಎಸ್.ಎಲ್. ನಿಂದ ಏನು ಬಾಕಿ ಇತ್ತು, ಅದನ್ನು...

ಶ್ರೀ ಡಿ.ಬಿ. ಚಂದ್ರೇಗೌಡ.—ಸರ್ಕಾರ ಮತ್ತು ಸರ್ಕಾರದ ಮಂತ್ರಿಗಳಿಂದ...

ಶ್ರೀ ಎಸ್. ಎಂ. ಯಾಹ್ಯಾ.—ನೀವು ಹೇಳಿದಂತಿಲ್ಲ. ಅವರು ೨.೫ ಕೋಟಿ ರೂ.ಗಳನ್ನು ಪ್ರತಿ ತಿಂಗಳೂ ತಮ್ಮ ಬಿಲ್‌ನಲ್ಲಿ ಸಹಾ ಕಟ್ಟುತ್ತಿದ್ದಾರೆ. ಬಾಕಿ ೮೨-೮೩ರಲ್ಲಿ ಏನು ತೊಂದರೆ ಆಗಿತ್ತು; ಅದನ್ನೂ ಸಹ ಕಟ್ಟುತ್ತಾರೆ. ಡಿಫರೆನ್ಸ್ ಏನಿದೆ ಅದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿದೆ. ಇಂಟರೆಸ್ಟ್ ಬಗ್ಗೆ ಮಾತ್ರ ಬಾಕಿ ಇದೆ. ಇದು ಅಷ್ಟೊಂದು ಜಾಸ್ತಿ ಏನೂ ಇಲ್ಲ.

(ಗೊಂದಲ)

ಶ್ರೀ ಎಸ್. ಎಂ. ಯಾಹ್ಯಾ.—ಇನ್ನು ಅರಿಯರ್ಸ್ ಬಗ್ಗೆ ಹೇಳಬೇಕೆಂದರೆ ೪೨ ಕೋಟಿ ರೂಪಾಯಿಗಳು ಖಾಸಗೀಯವರಿಂದ ಬರಬೇಕಾದದ್ದು ಇರುತ್ತದೆ. ಈ ೪೨ ಕೋಟಿ ರೂಪಾಯಿಗಳನ್ನು ಆದಷ್ಟು ಜಾಗ್ರತೆ ವಸೂಲು ಮಾಡಬೇಕೆಂದಿದ್ದೇವೆ. ಮತ್ತೆ ಈ ಭಾಗದಲ್ಲಿ ವಾಟರ್ ಬೋರ್ಡ್‌ನದು ಬಹಳಷ್ಟು ಇದೆ. ಈ ರೀತಿ ೪೨ ಕೋಟಿ ರೂಪಾಯಿಗಳು ಬಾಕಿ ಇರತಕ್ಕಂಥದ್ದು ನಿಮಗೆ ಗೊತ್ತಿದೆ. ಅದನ್ನು ಡಿಫೈನ್ ಮಾಡಲಿಕ್ಕೆ ಹೇಳುತ್ತಿಲ್ಲ. ೭೦೦,೮೦೦ ಕೋಟಿ ರೂಪಾಯಿಗಳ ವ್ಯಾಪಾರ ಮಾಡುವ ಕೆ.ಇ.ಬಿ.ಗೆ ಹಲವಾರು ವರ್ಷಗಳಿಂದ ಈ ಬಾಕಿ ಉಳಿದುಕೊಂಡು ಬಂದಿದೆ. ವರ್ಷಕ್ಕೆ ೭೦೦ ಕೋಟಿ ರೂಪಾಯಿಗಳು ಕನ್‌ಸ್ಯೂಮರ್ಸ್‌ನಿಂದಲೇ ನಮಗೆ ಬರುತ್ತದೆ. ಒಂದು ಚಿಕ್ಕ ಅಂಗಡಿ ಇಟ್ಟರೂ ಸಹ ೩-೪ ವರ್ಷದಲ್ಲಿ ಸ್ವಲ್ಪ ಬಾಕಿ ಬರುತ್ತದೆ. ಆದ್ದರಿಂದ ೪೨ ಕೋಟಿ ರೂಪಾಯಿಗಳನ್ನು ಬಹಳ ದೊಡ್ಡ ಸಂಖ್ಯೆಯಲ್ಲ. ಇದರ ಒಟ್ಟು ಮೊತ್ತ ೭೨೦ ಕೋಟಿ ರೂಪಾಯಿಗಳಾದರೆ ೪೨ ಕೋಟಿ ರೂಪಾಯಿ ಬಾಕಿ ಇದೆ. ಇದನ್ನು ಸಹ ವಸೂಲು ಮಾಡಬೇಕೆಂದು ನಾವು ನಿರ್ಧಾರ ಮಾಡಿಕೊಂಡು ಕೆಲಸ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಕೇವಲ ೧೫ ಜನರಿಂದ ಸುಮಾರು ೨೬.೪ ಕೋಟಿ ೧೧ ಲಕ್ಷ ೪೩ ಸಾವಿರದ ೫೫೭ ರೂಪಾಯಿಗಳು ಬಾಕಿ ಬರಬೇಕೆಂದು ತಾವೇ ಉತ್ತರದಲ್ಲಿ ಹೇಳಿದ್ದೀರಿ, ನಿಮ್ಮ ಹೆಸರಿನಲ್ಲಿಯೇ ಉತ್ತರ ಬಂದಿದೆ. ಕೇವಲ ೧೮ ಜನರಿಂದ ಮಾತ್ರ.

ಶ್ರೀ ಎಸ್. ಎಂ. ಯಾಹ್ಯಾ.—ಎಲ್ಲ ಟೋಟಲ್ ಅಷ್ಟು ಬರುತ್ತದೆ. ೨೬.೧ ಕೋಟಿ. ಅದಕ್ಕಾಗಿ ಬಹಳ ಮುಖ್ಯವಾಗಿ ನಮ್ಮ ಬೆಂಗಳೂರಿನಲ್ಲಿ ವಿದ್ಯುತ್ ಸಾಕಷ್ಟು ಇದೆ. ೪೦ ಲಕ್ಷ ಜನ ಇಲ್ಲಿದ್ದಾರೆ. ಏನಾದರೂ ಮಾಡಬೇಕೆಂದಿದ್ದೇವೆ. ಏತಕ್ಕೆಂದರೆ ನಾನು ಬೆಂಗಳೂರಿನಿಂದಲೇ ಆರಿಸಿಬಂದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಬೆಂಗಳೂರಿನಿಂದ ಆರಿಸಿ ಬಂದಿದ್ದೀರಿ. ಆದ್ದರಿಂದ ಇಲ್ಲಿಗೆ ಅನುಕೂಲ ಮಾಡಿಕೊಡುತ್ತೇವೆಂದರೆ ನಮ್ಮ ಗತಿ ಏನು ?

ಶ್ರೀ ಎಸ್. ಎಂ. ಯಾಹ್ಯಾ.—ಬೆಂಗಳೂರುನಗರ ಬಹಳ ಪ್ರಮುಖವಾದ ನಗರ. ಇಡೀ ಭಾರತದಲ್ಲಿಯೇ ಇದು ಗಾರ್ಡನ್ ಸಿಟಿ ಎಂದು ಹೆಸರು ಪಡೆದಿರುತ್ತದೆ. ಇಲ್ಲೂ ಕೂಡ ವಿದ್ಯುತ್ತಿನ ತೊಂದರೆ ಎಲ್ಲಕಡೆ ಇರುವಂತೆಯೇ ಇದೆ. ಇಲ್ಲೂ ಕೂಡ ಜಾಸ್ತಿ ತೊಂದರೆ ಇದೆ. ಆದ್ದರಿಂದ ಇದನ್ನು ಹೀಗೆ ಬಿಟ್ಟುಬಿಟ್ಟರೆ ಸಾಲದು ಎಂದು ವರ್ಲ್ಡ್‌ಬ್ಯಾಂಕ್ ಸ್ಕೀಮ್ ಅನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. British Electrical International England ಅವರು ನಾಲ್ಕುವಾರಗಳು ಇಲ್ಲಿಗೆ ಬಂದಿದ್ದು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆ ರಿಪೋರ್ಟ್‌ನಲ್ಲಿ ಕೊಡುವಾಗ ಯಾವ ಸಿಸ್ಟಮ್ ಯೂಸ್ ಮಾಡಬೇಕು, ರೇಡಿಯಲ್ ಸಿಸ್ಟಮ್ ಯೂಸ್ ಮಾಡಬೇಕೆ ಅಥವಾ ಗ್ಲೋಬ್ ಸಿಸ್ಟಮ್ ಯೂಸ್ ಮಾಡಬೇಕೇ ಎಂದು ಐದು ಆಪ್ಷನ್ಸ್ ಕೊಟ್ಟಿದ್ದಾರೆ. ಪ್ರಿಲಿಮಿನರಿ ರಿಪೋರ್ಟ್‌ನನ್ನು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಗೆ ಕಳುಹಿಸಿಕೊಡುತ್ತೇವೆ. ಅವರು ಸ್ವಲ್ಪ ಕ್ಲಾರಿಫಿಕೇಷನ್ಸ್ ಕೇಳಿದ್ದಾರೆ.

ಈ ರೀತಿ ಒಂದು ಉತ್ತಮವಾದ ರೀತಿಯ ವ್ಯವಸ್ಥೆ ಬೆಂಗಳೂರಿನಲ್ಲಿ ಆಗಬೇಕೆಂದು ಅದನ್ನು ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನಿಂದ ಮಾಡಬೇಕೆಂದು, ಸೆಂಟ್ರಲ್ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಯಾವ ಕ್ಲಾರಿಫಿಕೇಷನ್ ಕೇಳಿದ್ದಾರೆ ಅದಕ್ಕೆ ಉತ್ತರವನ್ನು ಕೊಡುತ್ತಿದ್ದೇವೆ. ಈ ರೀತಿ ಬೆಂಗಳೂರಿನಲ್ಲಿಯೂ ಸಹ ಮಾಸ್ಟರ್‌ಪ್ಲಾನ್ ಪ್ರಕಾರ, ಯಾವ ಒಂದು ಬ್ರಿಟಿಷ್ ಕಂಪನಿಯವರು ಪ್ರಿಲಿಮಿನರಿ ರಿಪೋರ್ಟ್ ಕೊಟ್ಟಿದ್ದರೋ, ಆದರ ಪ್ರಕಾರ ಮಾಸ್ಟರ್‌ಪ್ಲಾನ್ ಎಕ್ಸಿಕ್ಯೂಟ್ ಮಾಡಿದರೆ ಬೆಂಗಳೂರಿನಲ್ಲಿ ಬಹಳ ಉತ್ತಮವಾಗಿ ಆಗಬಹುದು. ಒಂದು ನೀತಿಯ ಪ್ರಕಾರ ಇಲ್ಲಿಗೆ ಆದಷ್ಟೂ ಜಾಗ್ರತೆ ಅನುಕೂಲತೆ ಮಾಡಿಕೊಡಬೇಕೆಂದು ನಾವು ಬಯಸುತ್ತಿದ್ದೇವೆ. ಅದೇರೀತಿಯಲ್ಲಿ ನಮ್ಮ ಕೋಸ್ಟಲ್ ಲೈನ್‌ನಲ್ಲಿ ಬಹಳಷ್ಟು ತೊಂದರೆಯಾಗಿದೆ. ಎಲೆಕ್ಟ್ರಿಸಿಟಿ ಲೈಟಿಂಗ್ ಆಗಿದೆ. ಮಲೆನಾಡಿನಲ್ಲಿ ಯಾವರೀತಿ ಆಗಿದೆ, ಅದೇ ರೀತಿ ಇಲ್ಲಿ ಸಹ ಆಗಿದೆ. ಆದ್ದರಿಂದ ವೈರ್‌ಗಳನ್ನು ಚೇಂಜ್ ಮಾಡುವುದಕ್ಕೆ ಈ ವರ್ಷ ದಿಂದಲೇ ಕ್ರಮ ತೆಗೆದುಕೊಳ್ಳಬೇಕೆಂದಿದ್ದೇವೆ. ಇಲ್ಲಿ ೩೩ ಕಿಲೋವ್ಯಾಟ್ಸ್ ಇದ್ದುದನ್ನು ೧೧೦ ಕಿಲೋವ್ಯಾಟ್ಸ್‌ಗೆ ಹೆಚ್ಚಿಸಲು ಈ ಪ್ರದೇಶಗಳಲ್ಲಿ ಈ ವರ್ಷದಿಂದಲೇ ೫ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚು ಮಾಡ ಬೇಕೆಂದಿದ್ದೇವೆ.

೭-೦೫ ಪಿ.ಎಂ.

ಅದೇ ರೀತಿಯಲ್ಲಿ ಮಡಿಕೇರಿ ಕೊಡಗಿನ ರಾಜಧಾನಿಯಾಗಿದ್ದರೂ ಅಲ್ಲಿ ಯಾವ ರೀತಿಯ ವಿದ್ಯುಚ್ಛಕ್ತಿ ಸೌಕರ್ಯ ಸರಿ ಇಲ್ಲದ ಕಾರಣ ನಾವು ಅಲ್ಲಿ ೬೬ ಕೆ. ವಿ. ಲೈನನ್ನು ಹಾಕಬೇಕೆಂದು ಇದೆ. ಕುಶಾಲನಗರದಿಂದ ಮಡಿಕೇರಿವರೆಗೆ ಲೈನ್ ಹಾಕಲು ಈ ವರ್ಷ ಒಂದು ಕೋಟಿ ೫ ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಅಂತೆಯೇ ಉತ್ತರ ಕನ್ನಡ ಜಿಲ್ಲೆ ಮತ್ತು ಹಾಸನ ಜಿಲ್ಲೆ ಈ ಎರಡು ಜಿಲ್ಲೆಗಳಿಗೆ ಡಿವಿಜನಲ್ ಆಫೀಸ್ ಇಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರ್ ಆಫೀಸ್ ಇಲ್ಲ. ಅದಕ್ಕೋಸ್ಕರ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರವಾರ ಅಥವಾ ಕುಮಟದಲ್ಲಿ ಒಂದು ಡಿವಿಜನಲ್ ಆಫೀಸ್ ಮತ್ತು ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣದಲ್ಲಿ ಇನ್ನೊಂದು ಡಿವಿಜನಲ್ ಆಫೀಸ್ ಮಾಡಬೇಕೆಂದಿದ್ದೇವೆ. ಅದೇ ರೀತಿಯಲ್ಲಿ ಸುಮಾರು ೨೦ ತಾಲ್ಲೂಕುಗಳಲ್ಲಿ ಸಬ್‌ಡಿವಿಜನ್‌ಗಳು ಇಲ್ಲ. ಹೊಸನಗರದಲ್ಲಿ ಇಲ್ಲ. ಸೊರಬದಲ್ಲಿ ಇಲ್ಲ. ಗುಲ್ಬರ್ಗದವರು ಸಹ ಇಲ್ಲವೆಂದು ಹೇಳುತ್ತಿದ್ದರು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಸಬ್‌ಸ್ಟೇಷನ್ ಆಗಬೇಕೆಂಬ ನೀತಿಯನ್ನು ಇಟ್ಟುಕೊಂಡು ಒಂದೆರಡು ಮೂರು ವರ್ಷಗಳಲ್ಲಿ ಎಲ್ಲಾ ೨೦ ತಾಲ್ಲೂಕುಗಳಲ್ಲೂ ಸಬ್ ಡಿವಿಜನ್ ಆಗುವ ರೀತಿಯಲ್ಲಿ ಸರ್ಕಾರದವರು ಕೆಲಸ ಮಾಡುತ್ತೇವೆ. ಇನ್ನು ಹಲವಾರು ಸದಸ್ಯರು ನಮ್ಮ ಕೈಗಾರಿಕೆಯ ವಿಚಾರ ದಲ್ಲಿ......

ಶ್ರೀ ಡಿ. ಬಿ. ಚಂದ್ರೇಗೌಡ.—ಅದಕ್ಕೆ ಹೋಗುವುದಕ್ಕೆ ಮುಂಚೆ ಸಬ್‌ಡಿವಿಜನ್ ಮಾಡುತ್ತೇವೆ ಅಂದ್ರಲ್ಲ. ಮಲೆನಾಡಿನ ವಿಷಯ ತಮಗೆ ಗೊತ್ತಿದೆ; ನಮ್ಮ ತೀರ್ಥಹಳ್ಳಿಯಲ್ಲಿ ಒಂದು ಸಬ್‌ಡಿವಿಜನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನಾವು, ಹೊಸನಗರದವರೆಲ್ಲ ಸಾಗರಕ್ಕೆ ಹೋಗಬೇಕಾಗಿದೆ. ಈ ಸಾರಿ ತೀರ್ಥಹಳ್ಳಿಯಲ್ಲಿ ಒಂದು ಸಬ್‌ಡಿವಿಜನ್ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಒಂದು ಮನವಿ, ಈಗಾಗಲೇ ೭ ಗಂಟೆ ಆಯಿತು. ಒಂದು ಇಲಾಖೆ ಮಾತ್ರ ಮುಗಿದಿದೆ. ಕೈಗಾರಿಕೆ ಮತ್ತು ರೇಷ್ಮೆ ಇಲಾಖೆಯನ್ನು ಸೋಮವಾರ ಇಟ್ಟು ಕೊಳ್ಳೋಣ.

ಉಪಾಧ್ಯಕ್ಷಿಣಿಯವರು.—ಬೇಗ ಮುಗಿಸುತ್ತಾರೆ, ಕುಳಿತುಕೊಳ್ಳಿ.

ಶ್ರೀ ಎಸ್. ಎಂ. ಯಾಹ್ಯಾ.—ಕೈಗಾರಿಕೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಗ್ರೋತ್ ರೇಟ್ ಬಹಳಷ್ಟು ಕಡಿಮೆಯಾಗಿದೆ. ರಾಷ್ಟ್ರೀಯ ಮಟ್ಟದ್ದು ೭.೪ ಪರ್ಸೆಂಟ್ ಇದ್ದರೆ ನಮ್ಮ ಕರ್ನಾಟಕದ್ದು ೪.೦೦ ರಿಂದ ೪.೫ ಪರ್ಸೆಂಟ್‌ಗೆ ಬಂದು ತಲುಪಿದೆ. ನಮ್ಮಲ್ಲಿ ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕಾರ್ಖಾನೆಗಳು ಕಡಿಮೆ; ಒಟ್ಟಿನಲ್ಲಿ ೬೮೦ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕಾರ್ಖಾನೆಗಳು ಇವೆ. ಕಳೆದ ೫-೬ ವರ್ಷಗಳಲ್ಲಿ ೬೮ ಕಾರ್ಖಾನೆ ಗಳು ಮಾತ್ರ ಹೊಸದಾಗಿ ಆಗಿವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳು ಬಹಳಷ್ಟು ಬಂದಿವೆ. ಕರ್ನಾಟಕದಲ್ಲಿ ಒಂದು ಲಕ್ಷದ ೫ ಸಾವಿರಕ್ಕಿಂತ ಹೆಚ್ಚು ಸಣ್ಣ ಪ್ರಮಾಣದ ಕೈಗಾರಿಕೆಗಳು ಇವೆ. ಒಂದೆರಡು ಮೂರು ವರ್ಷಗಳಲ್ಲಿ ಈ ಸ್ಮಾಲ್ ಸ್ಕೇಲ್ ಯೂನಿಟ್‌ಗಳಿಗೆ ಕಾಯಿಲೆ ಬರುತ್ತದೆ. ರಿಸರ್ವ್ ಬ್ಯಾಂಕ್ ಕ್ರೈಟೀರಿಯಾ ಪ್ರಕಾರ ೫ ವರ್ಷದಲ್ಲಿ ತೆಗೆದುಕೊಂಡು ಎ ರೋಷನ್ ಆಫ್ ಕ್ಯಾಪಿಟಲ್ ೫೦ ಪರ್ಸೆಂಟ್ ಬರಬೇಕು. ಇತರ ರದ್ದು ಇದೆ, ಅವರು ಸಹ ಚೇಂಜ್ ಮಾಡಿದ್ದಾರೆ. ಎ.ಐ.ಎಫ್.ಆರ್. ಬಗ್ಗೆ

ಬಹಳಷ್ಟು ಸ್ನೇಹಿತರು ಹೇಳಿದರು. ಚಿಕ್ಕ ಉದ್ದಿಮೆಗಳಿಗೆ ಎಸ್.ಎಸ್.ಐ. ಯುನಿಟ್‌ಗಳಿಗೆ ಆ ಕಾಯಿಲೆ ಆಗದಂತೆ ಮಾನಿಟರ್ ಮಾಡುವಂತಹ ವ್ಯವಸ್ಥೆ ಆಗಬೇಕು ಎಂದು; ಆದರೆ ಇದೆಲ್ಲಾ ಸ್ಟ್ಯಾಟ್ಯುಟರಿ ಕಾನೂನು ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಇದರಲ್ಲಿ ಬ್ಯಾಂಕ್‌ಗಳ ಫೈನಾನ್ಷಿಯಲ್ ಇನ್‌ವಾಲ್ವ್‌ಮೆಂಟ್ ಇರುತ್ತದೆ. ಆ ಕಾರಣದಿಂದ ನಮ್ಮಲ್ಲಿ ಕೆ.ಎಸ್.ಎಫ್.ಸಿ. ಯಿಂದ ಎಷ್ಟಾಗುತ್ತದೋ ಅಷ್ಟು ಮಾಡುತ್ತಾರೆ. ಮಾನಿಟರಿ ಯುನಿಟ್ ಈಗಾಗಲೇ ಶುರು ಮಾಡಿದ್ದಾರೆ. ಕೆ.ಎಸ್.ಎಫ್.ಸಿ.ನವರು ಬಹಳಷ್ಟು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರೇ ಮಾನಿಟರ್ ಮಾಡಿ ಪ್ರತಿಯೊಂದು ಉದ್ದಿಮೆಗಳು ಸಿಕ್‌ನೆಸ್ ಬಂದಾಗ ಅವರ ಹತ್ತಿರ ಬಂದು ಮಾತನಾಡಿ ಅವರನ್ನು ರಿಹ್ಯಾಬಿಲಿಟೇಟ್ ಮಾಡುವಂಥ ಎಲ್ಲ ಪ್ರಯತ್ನಗಳು ಮಾಡಬೇಕು ಎನ್ನುವಂಥದ್ದು ಸರ್ಕಾರದ ಉದ್ದೇಶವಾಗಿದೆ. ಬಿ.ಐ.ಎಫ್.ಆರ್. ನಷ್ಟ ಆಗದಿದ್ದರೂ ಎಸ್.ಎಸ್.ಐ. ಯುನಿಟ್‌ಗಳನ್ನು ಕರ್ನಾಟಕದಲ್ಲಿ ಹೆಚ್ಚು ಹೆಚ್ಚಾಗಿ ಅಯು ಕಾಯಿಲೆಗೆ ಬೀಳದಹಾಗೆ ನೋಡಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ನಾವು ಮಾಡಿದರೆ ಉತ್ಪಾದನೆ ಹೆಚ್ಚಾಗುವುದಕ್ಕೆ ಸಾಧ್ಯವಿದೆ. ಆ ಕಾರಣದಿಂದ ಇದೊಂದು ದೊಡ್ಡ ಹೆಜ್ಜೆ. ಬಿ.ಐ.ಎಫ್.ಆರ್. ದೊಡ್ಡ ದೊಡ್ಡ ಕಾರ್ಖಾನೆಗಳನ್ನು ನೋಡುವುದಾದರೆ, ಚಿಕ್ಕ ಕಾರ್ಖಾನೆಗಳಿಗೆ ಹೆಚ್ಚು ಹೆಚ್ಚು ಲುಕ್ಸಾನು ಆಗದಹಾಗೆ, ಲಾಭ ಗಳಿಸುವಹಾಗೆ, ಪ್ರೊಡಕ್ಷನ್ ಹೆಚ್ಚು ಆಗುವಹಾಗೆ ಕೆಲವು ಕಾರ್ಯಗಳನ್ನು ಮಾಡಬೇಕೆಂದು ಮಾಡಿದ್ದೇವೆ. ಅದಕ್ಕಾಗಿ ಬಹಳಷ್ಟು ನಮ್ಮ ಸ್ನೇಹಿತರು ಹೇಳಿದಹಾಗೆ ಬೆಂಗಳೂರಿನಲ್ಲಿ ಇಂಡಸ್ಟ್ರೀಸ್ ಹೆಚ್ಚು ಬರುತ್ತಿದೆ. ನಮ್ಮ ಸರ್ಕಾರದ ಉದ್ದೇಶ ಬೆಂಗಳೂರಿನಲ್ಲಿ ಇಂಡಸ್ಟ್ರೀಸ್ ಹಾಕಬೇಕೆಂದು ಇಲ್ಲ. ನಮ್ಮ ಹೊಸ ನೀತಿ ಪ್ರಕಾರ ಬೆಂಗಳೂರಿನಲ್ಲಿ ಯಾರು ಇಂಡಸ್ಟ್ರೀಸ್ ಹಾಕುತ್ತಾರೆ, ಅವರಿಗೆ ಯಾವ ಇನ್‌ಸೆಂಟೀವ್ ಕೂಡ ಕೊಡುವುದಿಲ್ಲ. ಜೀರೋ ಇನ್‌ಸೆಂಟೀವ್ ಅವರಿಗೆ ಕೊಡುವುದು. ಅವರನ್ನು 'ಎ' ಕ್ಯಾಟಗರಿಯಲ್ಲಿ ಹಾಕಿ ಕನ್‌ಸೆಷನ್ ಇನ್‌ಸೆಂಟೀವ್ ಕೊಡದಹಾಗೆ ಮಾಡಿ ಅವರು ಬೆಂಗಳೂರು ಬಿಟ್ಟು ಬೇರೆ ಕಡೆ ಹೋಗಬೇಕೆಂದು ಮಾಡಿದ್ದೇವೆ. ಹೋಮೋಜಿನಿಯಸ್ ಗ್ರೋತ್ ಎಲ್ಲಾ ಪ್ರದೇಶದಲ್ಲೂ ಎಲ್ಲಾ ತಾಲ್ಲೂಕುಗಳಲ್ಲೂ ಆಗಬೇಕು, ಹಿಂದುಳಿದ ಭಾಗಗಳಿಗೂ ಇಂಡಸ್ಟ್ರೀಸ್ ಹೋಗಬೇಕು ಎಂಬುದು ನಮ್ಮ ಉದ್ದೇಶ ಇದೆ.

SRI D.B. CHANDRE GOWDA.—When do you present your Industrial policy decument to this House?

SRI S.M. YAHYA.—I am revealing most of the things.

SRI D.B. CHANDRE GOWDA.—As a new Government you should present your policy.

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಏಕಾಂತಯ್ಯನವರು ಕೂಡ ಈ ಮಾತು ಹೇಳಿದರು. ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಹೊಸದಾಗಿ ಫೈನಲ್ ಟಚ್ ಕೊಡುತ್ತಿದ್ದೇವೆ. ಒಂದು ವಾರದಲ್ಲಿಯೇ ಈ ಸದನಕ್ಕೆ ಹೊಸ ಇಂಡಸ್ಟ್ರಿಯಲ್ ಪಾಲಿಸಿಯನ್ನು ತರುತ್ತೇವೆ. ನಮ್ಮ ಪಾಲಿಸಿ ಉದ್ದೇಶ ಇಷ್ಟೆ. ಮೊದಲನೆಯದಾಗಿ ಅನ್‌ಎಂಪ್ಲಾಯಿಮೆಂಟ್ ಹೆಚ್ಚಾಗುತ್ತಿದೆ. ಆರೇಳು ವರ್ಷದ ಹಿಂದೆ ೫,೪೦.೦೦೦ ಇರುವಂಥದ್ದು ಇವತ್ತು ೨½ ಲಕ್ಷ ಆಗಿದೆ. ಪ್ರೊಫೆಷನಲ್ ಮತ್ತು ಟೆಕ್ನಿಕಲ್ ೨೫ ಸಾವಿರ ನಿರುದ್ಯೋಗಿಗಳು ೧೯೮೦ರಲ್ಲಿದ್ದರೆ ಈಗ ೪೦ ಸಾವಿರ ಆಗಿದೆ. ನಮ್ಮ ಪಾಲಿಸಿ ಫಸ್ಟ್ ಯಾವುದು ಇದೆ ಅದು ಅನ್‌ಎಂಪ್ಲಾಯಿಮೆಂಟ್‌ಗೆ ಅವರಿಗೆ ಅನುಕೂಲವಾಗುವಂಥ ಹೆಚ್ಚು ಹೆಚ್ಚು ಇಂಡಸ್ಟ್ರೀಸ್ ಬರಬೇಕೆಂಬುದಾಗಿದೆ ದೊಡ್ಡ ಇಂಡಸ್ಟ್ರೀಸ್ ಬಂದರೆ ಅದರ ಅನ್ಸಿಲರಿ ಯುನಿಟ್‌ಗಳೂ ಬರಬೇಕಾಗುತ್ತದೆ. ಆದ್ದರಿಂದ ದೊಡ್ಡ ಇಂಡಸ್ಟ್ರೀಸ್, ಎಸ್.ಎಸ್.ಐ. ಯುನಿಟ್ಸ್ ಎರಡೂ ಒಟ್ಟಿಗೆ ಹೋಗಬೇಕಾಗುತ್ತದೆ. ಬರೀ ಚಿಕ್ಕ ಇಂಡಸ್ಟ್ರೀಸ್ ಬಂದರೂ ಸಾಲದು. ಏಕೆಂದರೆ ಇವರು ಪ್ರೊಡಕ್ಷನ್ ಮಾಡಿದ ವಸ್ತುವನ್ನು ತೆಗೆದುಕೊಳ್ಳುವುದಕ್ಕೆ ದೊಡ್ಡ ಇಂಡಸ್ಟ್ರೀಸ್ ಬೇಕಾಗುತ್ತದೆ. ಅದಕ್ಕಾಗಿ ಹೋಮೋಜಿನಿಯಸ್ ಡೆವಲಪ್‌ಮೆಂಟ್ ಆಗುವುದು ನಮ್ಮ ಕರ್ನಾಟಕದ ಪಾಲಿಸಿಯ ದೊಡ್ಡ ಉದ್ದೇಶ ಎಂದು ಹೇಳ ಬಯಸುತ್ತೇನೆ. ಹೋಮೋಜಿನಿಯಸ್ ಗ್ರೋತ್ ಆಗಬೇಕಾದರೆ ದೊಡ್ಡದು ಚಿಕ್ಕದು ಸಹ ಇರಬೇಕು. ಅದು ಎಲ್ಲಾ ಕಡೆ ಹೋಗಬೇಕು. ನಮ್ಮ ಪಾಲಿಸಿ ರೂರಲ್ ಬಯಾಸ್ ಇರುವಂಥದ್ದು. ಅದನ್ನು ಇಟ್ಟುಕೊಂಡು ಎಲ್ಲಾ ಕಡೆ ಡಿಸ್‌ಪರ್ಸ್ ಮಾಡಬೇಕೆಂದು ಇದ್ದೇವೆ. ಇದರಲ್ಲಿ ಡಚ್ ಸ್ಕೀಂ ಕೂಡ ಇದೆ. ೮.೪ ಕೋಟಿ ರೂಪಾಯಿಗಳನ್ನು ಡಚ್ ಸ್ಕೀಂನಿಂದ ಟೈನಿ ಇಂಡಸ್ಟ್ರೀಸ್‌ಗೆ ಬರುತ್ತದೆ. ಈಗ ಮೈಸೂರು ಮತ್ತು ಧಾರವಾಡಕ್ಕೆ ಕೊಟ್ಟು ನಂತರ ಗುಲ್ಬರ್ಗಾ ಮತ್ತು ರಾಯಚೂರಿಗೂ ಕೊಡಬೇಕೆಂದಿದ್ದೇವೆ. ಡಚ್‌ನವರು ೪.೦ ಕೋಟಿ ರೂಪಾಯಿ ಅಸಿಸ್ಟೆನ್ಸ್ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಇಂಡಸ್ಟ್ರಿಯಲ್ ಡಿಸ್‌ಪರ್ಸ್ ಮಾಡಬೇಕೆಂಬುದೇ ನಮ್ಮ

ಉದ್ದೇಶವಾಗಿದೆ. ಒಂದು ಹೋಮೋಜೀನಿಯಸ್ ಗ್ರೋತ್ ಆಗಬೇಕು. ಎರಡನೆಯದು ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಪರಿಹಾರ ಆಗಬೇಕು. ಮೂರನೆಯದು ಎಲ್ಲಾ ಕಡೆ ಇಂಡಸ್ಟ್ರೀಸ್ ಡಿಸ್‌ಪರ್ಸ್ ಆಗಬೇಕು, ಟೈನಿ ಇಂಡಸ್ಟ್ರೀಸ್‌ಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡುತ್ತೇವೆ. ಪ್ರತಿ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಆದರೂ ಚಿಕ್ಕ ಚಿಕ್ಕ ಟೈನಿ ಇಂಡಸ್ಟ್ರೀಸ್ ಮಾಡುವಂಥ ಒಂದು ಸ್ಕೀಂ ಅನ್ನು ಇಟ್ಟುಕೊಂಡಿದ್ದೇವೆ.

ನಮ್ಮ ಸ್ಕೀಮ್ ಪ್ರಕಾರ ಷೆಡ್ಯೂಲ್ ಕಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್, ಮೈನಾರಿಟೀಸ್, ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಇದೆ. ಇಲ್ಲಿ ಟೈನಿ ಹಾಕಿದರೆ ಹೊರಗಿನವರು ಬಂದು ತೆಗೆದು ಕೊಂಡು ಹೋದರು ಎನ್ನುವುದು ಇಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗಾಗಲೇ ಬಂದು ಎಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಇನ್ನೇನೂ ಉಳಿದಿಲ್ಲ. ಬರೀ ನಮ್ಮ ಮೂಳೆ ಮಾತ್ರ ಉಳಿದಿದೆ.

ಶ್ರೀ ಎಸ್. ಎಂ ಯಾಹ್ಯಾ.—ನಿಮಗೆ ಮಾಂಸ ಸ್ವಲ್ಪ ಕಮ್ಮಿ. ಮೂಳೆ ಹೆಚ್ಚು ಇದೆ.

ಶ್ರೀ ವಾಟಾಳ್ ನಾಗರಾಜ್ —ಇಲ್ಲ ಬರೀ ಮೂಳೆ ಉಳಿದಿದೆ. ಬೇರೆ ಎಲ್ಲಾ ಹೊರಗಡೆಯವರು ಬಂದು ಹೊತ್ತುಕೊಂಡು ಹೋಗಿದ್ದಾರೆ. ತಾವು ಧಾರಾಳವಾಗಿ ಕೊಡುತ್ತಿದ್ದೀರಿ, ಕೊಡಿ.

ಶ್ರೀ ಎಸ್. ಎಂ ಯಾಹ್ಯಾ.—ನೀವು ಉದ್ದ ಇದ್ದೀರಿ. ಅದಕ್ಕೆ ನಿಮ್ಮಲ್ಲಿ ಮೂಳೆ ಹೆಚ್ಚು ಇದೆ ಎಂದು ಹೇಳಿದೆ. ಡಿಸ್‌ಪರ್ಸ್ ಮಾಡುವುದಕ್ಕೆ ಈಗ ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರಿನಲ್ಲಿ ಇದೆ. ಅದು ಬಹಳಷ್ಟು ಮುಂದುವರೆದಿದೆ, ಇನ್ನು ಮೇಲೆ ಇಲ್ಲಿ ಕೊಡುವುದು ಬೇಡ. ಮೈಸೂರು ಮತ್ತು ಧಾರವಾಡದಲ್ಲಿ ಇನ್ನೂ ಎರಡು ಎಲೆಕ್ಟ್ರಾನಿಕ್ ಸಿಟಿ ಮಾಡಬೇಕೆಂದಿದ್ದೇವೆ. ಮತ್ತೆ ಡಿಸ್‌ಪರ್ಸ್ ಮಾಡುವುದಕ್ಕೆ ಮೂರನೆಯದಾಗಿ ಗ್ರೋತ್ ಸೆಂಟರ್‌ಗಳನ್ನು ಮಾಡಬೇಕೆಂದಿದ್ದೇವೆ. ಒಂದು ಹಾಸನ ದಲ್ಲಿ, ಒಂದು ರಾಯಚೂರಿನಲ್ಲಿ ಮತ್ತು ಇನ್ನೊಂದು ಧಾರವಾಡದಲ್ಲಿ ಗ್ರೋತ್ ಸೆಂಟರ್ ಮಾಡುವುದಕ್ಕೆ ೩ ಅಥವಾ ೪ ಸಾವಿರ ಎಕರೆ ತೆಗೆದುಕೊಂಡು ಅಲ್ಲಿ ಇಂಡಸ್ಟ್ರಿಯನ್ನು ಬೆಳೆಸಬೇಕೆಂದಿದ್ದೇವೆ. ಪ್ರತಿ ಯೊಂದು ಗ್ರೋತ್ ಸೆಂಟರ್‌ಗೆ ೩೦ ಕೋಟಿ ರೂಪಾಯಿ ಕೊಡುತ್ತೇವೆಂದ ಹಿಂದಿನ ಕೇಂದ್ರ ಸರ್ಕಾರ ಹೇಳಿತ್ತು. ಅದನ್ನು ಹೊಸ ಸರ್ಕಾರ ಕೊಡುತ್ತದೆಂದು ತಿಳಿದು ನಾವು ಪ್ರಯತ್ನ ಮಾಡುತ್ತಿದ್ದೇವೆ. ೫ ವರ್ಷದಲ್ಲಿ ಗ್ರೋತ್ ಸೆಂಟರ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಪ್ರತಿಯೊಂದು ಸೆಂಟರ್‌ಗೆ ೩೦ ಕೋಟಿಯಂತೆ ಒಟ್ಟು ೯೦ ಕೋಟಿ ರೂಪಾಯಿ ಕೊಡುತ್ತಾರೆ. ಈ ರೀತಿ ಇಂಡಸ್ಟ್ರೀ ಅನ್ನು ಡಿಸ್‌ಪರ್ಸ್ ಮಾಡುವ ಪಾಲಿಸಿಯನ್ನು ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಎಸ್‌ಎಸ್‌ಐ ಯೂನಿಟ್ ನಲ್ಲಿ ಸಿಕ್‌ನೆಸ್ ತೆಗೆಯುವ ಬಗ್ಗೆ ನಮ್ಮ ಸ್ನೇಹಿತರು ಹೇಳಿದರು, ಹಾಗೇ ಮೈಸೂರು ಲ್ಯಾಂಪ್ಸ್ ಬಗ್ಗೆ ಹೇಳಿದ್ದಾರೆ. ಈಗ ಎಸ್‌ಎಸ್‌ಐ ಯೂನಿಟ್ಸ್ ಏನಿದೆ, ಅವುಗಳಿಂದಲೇ ೧೦೦ ಪರ್ಸೆಂಟ್ ಸಾಮಾಗ್ರಿ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಈ ರೀತಿ ಆದರೆ ಅವಕ್ಕೆ ಒಳ್ಳೆಯದಾಗುತ್ತದೆ. ಎಲ್ಲಾ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್ ಎಸ್‌ಎಸ್‌ಐ ಯೂನಿಟ್‌ಗಳಿಂದ ಪ್ರಾಡಕ್ಟ್ಸ್ ತೆಗೆದುಕೊಳ್ಳಬೇಕೆಂದು ಕರ್ನಾಟಕದ ಹೊರಗಿನಿಂದ ತರಿಸಿಕೊಳ್ಳಬಾರದೆಂದು, ಎಲ್ಲರಿಗೂ ಮನವರಿಕೆ ಮಾಡುವ ಹಾಗೆ ಹೇಳು ತ್ತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಕ್ವಾಲಿಟಿ ಇಲ್ಲ ಎಂದು ರಿಜೆಕ್ಟ್ ಮಾಡುತ್ತಾರೆ.

ಶ್ರೀ ಎಸ್. ಎಂ ಯಾಹ್ಯಾ.—ಕ್ವಾಲಿಟಿ ಚೆನ್ನಾಗಿದೆ, ಎಲ್ಲಾ ಚೆನ್ನಾಗಿದೆ. ಮನಸ್ಸು ಚೆನ್ನಾಗಿರ ಬೇಕು ಅಷ್ಟೇ. ಇವತ್ತು ನಾವು ಮಾರ್ಕೆಟಿಂಗ್ ಬಗ್ಗೆ ಬಹಳ ಯೋಚನೆ ಮಾಡುತ್ತಿದ್ದೇವೆ, ಇವತ್ತು ಎಸ್‌ಎಸ್‌ಐ ಯೂನಿಟ್‌ಗಳು ಸಿಕ್ ಆಗುವುದಕ್ಕೆ ಮೊದಲನೇ ಕಾರಣ ಫ್ಲೋ ಆಫ್ ಮನಿ ಸರಿಯಾಗಿ ಬರುತ್ತಾ ಇಲ್ಲ. ಬ್ಯಾಂಕಿನವರಾಗಲೀ, ಸರ್ಕಾರದವರಾಗಲೀ, ಯಾವ ಕಾಲಕ್ಕೆ ಸಾಲ ಕೊಡಬೇಕೋ ಆಗ ಕೊಡುವುದಿಲ್ಲ. ಅವು ಸಿಕ್ ಆದಮೇಲೆ ಸಾಲ ಕೊಡುತ್ತಾರೆ. ಇನ್ನೊಂದು ಕಾರಣ ಮಾರ್ಕೆಟಿಂಗ್ ಇವೆರಡೂ ಕಡೆಗೆ ನಾವು ಹೆಚ್ಚು ನೋಡಬೇಕು.

ಶ್ರೀ ಎ. ಕೆ. ಅನಂತಕೃಷ್ಣ.—ಸಿಕ್ ಆಗುವವರೆಗೆ ಕೊಡುವುದಿಲ್ಲ. ಸಿಕ್ ಆದಮೇಲೆ ಕೊಡುವುದೇ ಇಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಅದು ನಂಬುವಂತಹ ವಿಚಾರ. ಆದ್ದರಿಂದ ಅವುಗಳ ಸಿಕ್‌ನೆಸ್‌ನ್ನು ಆದಷ್ಟು ಕಡಿಮೆ ಮಾಡಬೇಕೆಂದು ಹೇಳುವುದೇ ನಮ್ಮ ಉದ್ದೇಶವಾಗಿದೆ. ಇವತ್ತು ನಾನು ಸಬ್ಸಿಡಿ ಬಗ್ಗೆ ಹಳೇ ಸರ್ಕಾರವನ್ನು ಕ್ರಿಟಿಸೈಸ್ ಮಾಡುತ್ತಿದ್ದೇನೆಂದು ತಿಳಿಯಬಾರದು. ೮೬ ಕೋಟಿ ರೂಪಾಯಿ ಆ ಕಾಲದಲ್ಲೇ ಅವರಿಗೆ ಹೋಗಬೇಕಾಗಿತ್ತು. ಇವತ್ತು ಶೇಕಡಾ ೨೫ರಷ್ಟು ಇಂಡಸ್ಟ್ರೀಗಳು ಸಿಕ್ಕ ಇವೆ.

ಅದಕ್ಕೆ ಕಾರಣ ೮೭ರಲ್ಲಿ ನಾವು ೫೦ ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದೇವೆ. ಈ ಬಗ್ಗೆ ಇನ್ನೂ ೩೫ ಕೋಟಿ ರೂಪಾಯಿ ಕೊಡಬೇಕಾಗಿದೆ. ಆ ಹಣವನ್ನು ನಾವು ಪುನಃ ರಿಲೀಸ್ ಮಾಡುತ್ತಿದ್ದೇವೆ. ಇವತ್ತು ಸಬ್ಸಿಡಿ ಸರಿಯಾದ ಸಮಯಕ್ಕೆ ಸಿಗಬೇಕೆಂದು ಅನಂತಕೃಷ್ಣ ಅವರು ಹಾಗೂ ಇನ್ನೂ ಅನೇಕರು ಹೇಳಿದ್ದಾರೆ. ಸರಿಯಾದ ಸಮಯಕ್ಕೆ ಅವರಿಗೆ ಸಿಗಬೇಕೆಂದು ನಮ್ಮ ಉದ್ದೇಶ ಇದೆ. ಇದರಲ್ಲಿ ಹಳೇ ಬಾಕಿ ೨೨ ಕೋಟಿ ರೂಪಾಯಿ ಬಾಕಿ ಇದೆ. ಅದನ್ನೂ ಕೂಡಾ ಕೊಡುತ್ತಿದ್ದೇವೆ, ನಮ್ಮ ಇಲಾಖೆಯನ್ನು ಕ್ರಿಟಿಸೈಸ್ ಮಾಡಬೇಡಿ, ನಾವು ಫೈಲ್ ಬಿಚ್ಚಿದಂತೆ ನೂರಕ್ಕಿಂತಲೂ ಹೆಚ್ಚು ಕೋಟಿ ರೂಪಾಯಿ ಹಳೆಯ ಸಾಲವೇ ಕಾಣುತ್ತಿದೆ. ಇದು ಕ್ರಿಟಿಸೈಸ್ ಎಂದು ತಿಳಿದುಕೊಳ್ಳಬೇಡಿ. It is a fact. ಆ ಕಾರಣದಿಂದ ಇದೆಲ್ಲಾ ಮಾಡಿ ಉತ್ತಮಗೊಳಿಸಬೇಕು. ಪಬ್ಲಿಕ್ ಸೆಕ್ಟರ್‌ನಲ್ಲೂ ಸಹ ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಎನ್.ಜಿ.ಇ.ಎಫ್. ವಿಚಾರದಲ್ಲಿ ಹೇಳಿದ್ದಾರೆ. ಅದೆಲ್ಲಾ ನನಗೆ ಗೊತ್ತಿದೆ. ಎಲ್ಲವನ್ನೂ ಅಧಿಕಾರಿಗಳ ಮೂಲಕ ಸೂಕ್ತವಾಗಿ ಸರಿಮಾಡಿಸುತ್ತೇನೆ. ಅವರ ಬಗ್ಗೆ ಮಾತನಾಡುವುದಕ್ಕೆ ಹೋದರೆ ಒಂದೊಂದು ವಿಚಾರದಲ್ಲಿ ಒಂದೊಂದು ಘಂಟೆ ಮಾತನಾಡಬಹುದು. ಬೈರೇಗೌಡರು ಮತ್ತು ನಮ್ಮ ಇತರ ಸ್ನೇಹಿತರು ಹೇಳಿದ ವಿಚಾರ ಎಲ್ಲಾ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಚೆನ್ನಾಗಿ ಆಗಬೇಕು ಎಂಬುದು. ಈಗಾಗಲೇ ಕೆಲವು ಪುನಃ ಚೆನ್ನಾಗಿ ಆಗಿದೆ. ನೀವು ಹೇಳಿದ ಹಾಗೆ ಮೈಸೂರು ಲ್ಯಾಂಪ್ಸ್ ವಿಚಾರದಲ್ಲಿ ಅದು ಚೆನ್ನಾಗಿ ಆಗಿದೆ. ಎನ್.ಜಿ.ಇ.ಎಫ್. ಒಂದು ವರ್ಷ ಪುನಃ ವಾಪಸ್ ಬಂದಿದೆ. ಎಂ.ಪಿ.ಎಂ. ಬಹಳ ವರ್ಷಗಳಿಂದ ತೊಂದರೆಯಲ್ಲಿದ್ದು, ಈಗ ಚೆನ್ನಾಗಿ ಆಗುತ್ತಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಆದರೂ ೬೦೦ ಕೋಟಿ ರೂಪಾಯಿ ನಷ್ಟವಾಗಿದೆ.

ಶ್ರೀ ಎಸ್. ಎಂ. ಯಾಹ್ಯಾ.—ಲಾಸ್ ಇದೆ, ಆದರೆ ಅದರ ಕ್ಯಾಪಿಟಲ್ ಸಹ ಅಷ್ಟೇ ಇದೆ. ಅಂತೂ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರಿಯನ್ನು ಉತ್ತಮಗೊಳಿಸಬೇಕು, ಲಾಭದಾಯಕವಾಗಿ ಮಾಡಬೇಕು ಎಂದು ತಿಳಿದುಕೊಂಡು, ಅದು ಜನರ ಸ್ವತ್ತು ಎಂದು ತಿಳಿದುಕೊಂಡು ಅದನ್ನು ಉತ್ತಮಗೊಳಿಸುವುದಕ್ಕೆ ಯಾವುದೆಲ್ಲಾ ಸಲಹೆ ತಾವು ಹೇಳಿದ್ದೀರಿ, ಆ ಕಾರ್ಯಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿ......

ಶ್ರೀ ಎಲ್. ಆರ್. ಶಿವರಾಮೇಗೌಡ.—ಬಹಳ ಸ್ಪೀಡ್ ಆಯಿತು.

ಶ್ರೀ ಎಸ್. ಎಂ. ಯಾಹ್ಯಾ. ಅದಕ್ಕೆ ನಾನೇನು ಮಾಡಲಿ? ಇನ್ನೊಂದು ಸಾರಿ ಕೂರೋಣ ಅದಕ್ಕೇನೂ ಇಲ್ಲ.

ಶ್ರೀ ಸಿ. ಬೈರೇಗೌಡ.—ಎನ್.ಜಿ.ಇ.ಎಫ್., ಎಂ.ಪಿ.ಎಂ. ಬಗ್ಗೆ ಲೋಕಾಯುಕ್ತದಿಂದ ತನಿಖೆ ಮಾಡಿಸುತ್ತೀರಾ ?

SRI S M. YAHYA.—We will have a separate discussion. I have no objection. N.G.E.F., itself may take one or two hours.

SRI KAGODU THIMMAPPA.—So many doubts are there. We do not know as to what exactly is going on there, You come out with truth.

SRI S. M. YAHYA.—Doubts cannot be cieercd in 5 or 10 minutes. We will not hide anything. I am not a person who hide things. We will look into the interest of Karnataka.

ಶ್ರೀ ಸಿ. ಬೈರೇಗೌಡ.—ನಮಗೆ ಬಂದಿರತಕ್ಕ ಇನ್‌ಫರ್ಮೇಷನ್ ಸರಿಯಿರಬಹುದು, ಸರಿಯಿಲ್ಲದೇ ಇರಬಹುದು, ನೀವು ಫ್ಯಾಕ್ಟ್ಸ್ ಹೇಳಿ. ನೀವು ಹೇಳಿದಮೇಲೆ ಚರ್ಚೆ ಮಾಡೋಣ. ಅದಕ್ಕೇನಂತೆ.

ಶ್ರೀ ಎಸ್. ಎಂ. ಯಾಹ್ಯಾ.—ಇಂಡಸ್ಟ್ರೀಸ್ ಚೆನ್ನಾಗಿ ಆಗಬೇಕು, ಅವರಿಗೆ ಪ್ರೋತ್ಸಾಹ ಕೊಡಬೇಕು ಎಂದು ನ್ಯಾಷನಲ್ ಅವಾರ್ಡ್ಸ್ ಕೊಡಬೇಕು ಎಂದು ಮಾಡಿದ್ದೇವೆ. ಬೆಸ್ಟ್ ಅನ್ಸಿಲರಿಗೆ, ಬೆಸ್ಟ್ ಎಕ್ಸ್‌ಪೋರ್ಟ್ ಯೂನಿಟ್ಸ್‌ಗೆ, ಬೆಸ್ಟ್ ವಿಮೆನ್ ಯೂನಿಟ್ಸ್‌ಗೆ ಅವಾರ್ಡ್ಸ್ ಇಡಬೇಕು ಎಂದು ವಿಚಾರ ಮಾಡುತ್ತಿದ್ದೇವೆ. ಅದೇರೀತಿಯಲ್ಲಿ ಇನ್‌ಸ್ಟಿಟ್ಯೂಟ್ ಫಾರ್ ಡೆವಲಪ್‌ಮೆಂಟ್ ಆಫ್ ಎಂಟರ್‌ಪ್ರಿನರ್ಸ್ ಹುಬ್ಬಳ್ಳಿಯಲ್ಲಿ ಮಾಡಬೇಕೆಂದಿದ್ದೇವೆ. ಅದೇರೀತಿಯಲ್ಲಿ ಪ್ಲಾಸ್ಟಿಕ್ ಇಂಡಸ್ಟ್ರೀಸ್‌ಗೆ ಪ್ಲಾಸ್ಟಿಕ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಗೆ ವ್ಯವಸ್ಥೆಗೆ ಮಾಡುತ್ತಿದ್ದೇವೆ. ಇದಕ್ಕೆ ಸೆಂಟ್ರಲ್ ಗೌರ್ನಮೆಂಟ್

ನಿಂದ ೫೦ ಪರ್ಸೆಂಟ್, ನಮ್ಮದು ೫೦ ಪರ್ಸೆಂಟ್ ಬರುತ್ತದೆ. ಅದನ್ನು ಮೈಸೂರಿನಲ್ಲಿ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಲ್ಯಾಂಡ್ ತೆಗೆದುಕೊಂಡಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಂಡ್ಯ ಯಾವುದೂ ನಿಮ್ಮ ಕಣ್ಣಿಗೆ ಬೀಳುವುದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಮಂಡ್ಯದವರಿಗೆ ನೀರು ಬೇಕಾದಷ್ಟಿದೆ.

ಶ್ರೀ ಎಲ್. ಆರ್ ಶಿವರಾಮೇಗೌಡ.—ರೀ ವೆಂಕಟೇಶ್ ಕೂತ್ಕೊಳ್ಳಿ ಸಾಕು. ಮಂಡ್ಯದಲ್ಲಿ ನಾಗಮಂಗಲ, ಕೆ.ಆರ್.ಪೇಟೆ ಬಹಳ ಡ್ರೈ ಏರಿಯಾ. ಜನ ವಲಸೆ ಬರುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕು.

ಉಪಾಧ್ಯಕ್ಷರು.—ಶಿವರಾಮೇಗೌಡರೇ ಕೂತ್ಕೊಳ್ಳಿ.

ಶ್ರೀ ಎಸ್. ಎಂ. ಯಾಹ್ಯಾ.—ಎಲೆಕ್ಟ್ರಾನಿಕ್ ಅಂಡ್ ಫುಡ್ ಪ್ರೋಸೆಸಿಂಗ್‌ಗೆ ಬಹಳ ಪ್ರೋತ್ಸಾಹ ಕೊಟ್ಟು. ಅದಕ್ಕಾಗಿ ರೀಜನಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಸಹ ಮಾಡಬೇಕೆಂದಿದ್ದೇವೆ. ಈ ರೀತಿಯಾಗಿ ಹಲವಾರು ಕಾರ್ಯಕ್ರಮಗಳನ್ನು ಇಂಡಸ್ಟ್ರೀಸ್‌ನಲ್ಲಿ ಹೊಸ ಚೈತನ್ಯವನ್ನು ತರುವಂಥ ಕಾರ್ಯಕ್ರಮವನ್ನು ಮಾಡುತ್ತೇವೆ. ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಉತ್ಪಾದನೆಯಾಗಿ ನಮ್ಮ ಕನ್ನಡಿಗರಿಗೇ ಕೆಲಸ ಕೊಡಬೇಕೆಂದು ನಮ್ಮ ಸ್ನೇಹಿತರು ಹೇಳಿದ್ದಾರೆ. ನಾನು ಹೇಳುತ್ತೇನೆ, ೮೦ ಪರ್ಸೆಂಟ್‌ಗಿಂತ ಕಡಿಮೆ ಕನ್ನಡಿಗರು, ಕರ್ನಾಟಕದವರು ಇರಲೇಬಾರದು ಎಂದು ನಮ್ಮ ಧೋರಣೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—೧೦೦ಕ್ಕೆ ೮೦ ಪರ್ಸೆಂಟ್ ಕನ್ನಡಿಗರಿಗೆ ಎಂದು ಕಾಯಿದೆ ಮಾಡಿ. ನಿಮಗೆ ಕೀರ್ತಿ ಬರುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾಡುತ್ತೇವೆ, ಇನ್ನು ಕಡೆಯದಾಗಿ......

ಶ್ರೀ ಎಲ್. ಆರ್. ಶಿವರಾಮೇಗೌಡ.—ವಿಕ್ರಾಂತ್ ಟೈರ್ಸ್ ಬಗ್ಗೆ ಹೇಳಲಿಲ್ಲ.

ಉಪಾಧ್ಯಕ್ಷರು.—ಅವರು ಮುಗಿಸಲಿ. ದಯವಿಟ್ಟು ಕ್ಲಾರಿಫಿಕೇಷನ್ಸ್ ನಂತರ ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಕೆಲವು ಅಪಾದನೆಗಳನ್ನು ಮಾಡಿದ್ದೇನೆ. ಅವರು ಬಹಳ ಸ್ಪೀಡಾಗಿ ಹೋಗಿಬಿಟ್ಟರು. ಅದರ ಬಗ್ಗೆ ಹೇಳಲಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ನೀವು ಹೇಳಿದ್ದೆಲ್ಲಾ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ನಿರ್ದಿಷ್ಟವಾದ ಕೆಲವು ಆಪಾದನೆಗಳನ್ನು ಮಾಡಿದ್ದೇನೆ. ಆ ಬಗ್ಗೆ ತಾವು ಕೂಡ ನಿರ್ದಿಷ್ಟವಾದ ಉತ್ತರ ಕೊಡಬೇಕು.

ಉಪಾಧ್ಯಕ್ಷರು.—ಈಗ ಏಳೂವರೆ ಗಂಟೆಯಾಗಿದೆ. ಅವರು ಮುಗಿಸಿಬಿಡಲಿ ಆಮೇಲೆ ನೀವು ಕ್ಲಾರಿಫಿಕೇಶನ್ಸ್ ಕೇಳಬಹುದು.

ಶ್ರೀ ಎಸ್. ಎಂ. ಯಹ್ಯಾ.—ನಾನು ಅದೆಲ್ಲವನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಆಮೇಲೆ ಕಡೆಯದಾಗಿ ವಕ್ಫ್ ವಿಚಾರವಾಗಿ ನಮ್ಮ ಇಬ್ಬರು-ಮೂವರು ಸ್ನೇಹಿತರು ಮಾತನಾಡಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ನಿಮ್ಮ ಪಕ್ಷದ ಸಹ-ಸದಸ್ಯರಾದ ಕಾರಣ, ಅವರನ್ನು ಕರೆಸಿ ನೀವು ಮಾತನಾಡಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಂಡ್ಯ ಜಿಲ್ಲೆಯ ಬಗ್ಗೆ ಒಂದು ಸ್ಕ್ಯಾಂಡಲ್ ಬಗ್ಗೆ ತಮ್ಮ ಗಮನ ಸೆಳೆದಿದ್ದೇನೆ. ಎನ್‌ಕ್ವೈರಿ ಮಾಡಿಸುತ್ತೇನೆ ಎಂದರೆ ಅದು ಸರಿಯಾದ ಉತ್ತರ ಅಲ್ಲವೆಂದು ನಾನು ಭಾವನೆ ಮಾಡಬೇಕಾಗುತ್ತದೆ. ಒಂದು ಸಾವಿರ ಐ. ಪಿ. ಸೆಟ್‌ಗಳ ವಿಷಯದಲ್ಲಿ ರೈತರಿಗೆ ಮೋಸವಾಗಿದೆ....

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ಸಿನವರೇ ಈ ರೀತಿ ಕೇಳುವುದು ಸರಿಯಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಾಂಗ್ರೆಸ್ ಗವರ್ನಮೆಂಟ್ ಇದ್ದಾಗ ಅಲ್ಲ ಅವರ ಸರ್ಕಾರ ಇದ್ದಾಗ ಇದು ನಡೆದಿರುವುದನ್ನು ನಾನು ಹೇಳುತ್ತಿರುವುದು. ಒಂದು ಕೋಟಿ ಒಳ ಅವ್ಯವಹಾರ ನಡೆದಿದೆ ಇದು ಕಾಂಗ್ರೆಸ್ ಸರ್ಕಾರ ಬಂದಾಗ ನಡೆದಿರುವುದಲ್ಲ...

ಶ್ರೀ ಎಸ್. ಎಂ. ಯಾಹ್ಯಾ.—ಚಾಮುಂಡೇಶ್ವರಿ ವಿಚಾರ ತಾನೇ ನೀವು ಹೇಳುತ್ತಿದ್ದೀರಿ? ಅದಕ್ಕೆ ಸೆಂಟ್ರಲ್ ಶುಗರ್ ಫಂಡ್ ಅಂತ ಇದೆ. ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಈ ಸೆಂಟ್ರಲ್ ಶುಗರ್ ಫಂಡ್‌ನಿಂದ ಎಲ್ಲಾ ಫ್ಯಾಕ್ಟರಿಗೆ ಕೂಡ ಕೊಡುತ್ತಾರೆ. ಇವರು ಮೊದಲು

ತೆಗೆದುಕೊಂಡಿದ್ದಾರೆ. ಇನ್ನೂ ಹಲವಾರು ಅಪ್ಲಿಕೇಶನ್‌ಗಳು ಬರುತ್ತಾ ಇವೆ. ಅವರು ೫೦ ಲಕ್ಷ ರೂಪಾಯಿಗಳನ್ನು ಕೆ.ಇ.ಬಿ. ಯವರಿಗೆ ಕೊಟ್ಟಿದ್ದಾರೆ. ಏನು ಮಾಡುವುದು ? ಬೋರ್‌ವೆಲ್ ರೈತರಿಗೆ ಮಾಡಿಸಿಕೊಡುವುದು ; ಅವರು ಲ್ಯಾಂಡ್ ಮಾರ್ಟ್‌ಗೇಜ್ ಮಾಡುವುದಿಲ್ಲ. ಇದರಿಂದ ತೊಂದರೆಯಾಗಿದೆ ಇದು ಇಡೀ ಆಲ್ ಇಂಡಿಯಾಸ್ಕೀಮ್ ಪ್ರಕಾರ ಅವರು ಇನ್‌ಟರ್ನ್ ಕಬ್ಬು ತೆಗೆದುಕೊಳ್ಳುವಾಗ ಏನು ಹೇಳಿದ್ದಾರೆ ಎಂದರೆ ೧೦ ವರ್ಷಕ್ಕೆ ಇನ್‌ಸ್ಟಾಲ್‌ಮೆಂಟ್ಸ್ ಇದ್ದು ೬ ಪರ್ಸೆಂಟ್‌ನಷ್ಟು ಬಹಳ ಕಡಿಮೆ ಬಡ್ಡಿ ದರಕ್ಕೆ ಅವರು ಕೊಡುತ್ತಿದ್ದಾರೆ. ಅದೇರೀತಿ ಫ್ಯಾಕ್ಟರಿ ಮುಂದೆ ಬಂದಿತ್ತು. ಮತ್ತೆ ಮೈಸೂರು ಶುಗರ್ ಫ್ಯಾಕ್ಟರಿಯನ್ನು ಪುನಃ ಆ ರೀತಿ ಮಾಡಬೇಕು ಎಂದಿದೆ ಎಂ.ಪಿ.ಎಂ. ಮಾಡಬೇಕೆಂದು ಇದೆ. ಸಂಕೇಶ್ವರದಲ್ಲಿ ಕೂಡ ಇದೆ.

ಶ್ರೀ ಎಲ್ ಆರ್ ಶಿವರಾಮೇಗೌಡ.—ಪವರ್ ಸಪ್ಲೈ ಆ್ಯಕ್ಟ್ ಪ್ರಕಾರ ಸೀನಿಯಾರಿಟಿ ಬಿಟ್ಟು ಕೊಡಬಹುದೇ ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಇದು ದೊಡ್ಡ ಆಲ್ ಇಂಡಿಯಾ ಸ್ಕೀಮ್ ಪ್ರಕಾರ ರೈತರಿಗೆ ಹಿತ ಆಗಬೇಕೆಂದು ಹೇಳಿ, ಗ್ರೋಯರ್ಸ್‌ಗೆ ಹಿತ ಆಗಬೇಕೆಂದು ಹೇಳಿ. ಇದು ಎಲ್ಲಾ ಫ್ಯಾಕ್ಟರಿಗಳಿಗೆ ಶುಗರ್ ಡೆವಲಪ್‌ಮೆಂಟ್ ಫಂಡ್‌ನಿಂದ ಬರುತ್ತಾ [illegible]. ಅದಕ್ಕಾಗಿ ಇನೂ ಕಲವರಿಗೆ ಕೊಡಬೇಕು ಇವರಿಗೆ [illegible] ಒಂದು [illegible]. ಇದು ಈ ಆಲ್ ಇಂಡಿಯಾ ಸ್ಕೀಮ್ [illegible] ಮೇಲೆ [illegible] ಕೊಡಬೇಕು ಎಂದು ಹೇಳಿದರೆ, ಅದು [illegible]. ಈ ಕಾರಣದಿಂದ [illegible] ಮಾನ್ಯ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಉತ್ತರದಿಂದ ಸಮಾಧಾನ ಆಗಿಲ್ಲ.

ಶ್ರೀ [illegible] ನಾನು [illegible] ಆದರು [illegible] ಕೊಟ್ಟಿದ್ದಾರೆ [illegible] ಹಕ್ಕು [illegible] ಮತ್ತು [illegible] ಇದ [illegible] ಸಹ ಆಗಿ.

[illegible] ಎಂದು [illegible] ? ಮಾನ್ಯ [illegible] ಇವಾಲ್ಯುಯೇಷನ್ [illegible] ಮೈನಾರಿಟಿ [illegible], ಮಾನ್ಯ [illegible] ಹೇಳುವುದು [illegible]. ಮಾನ್ಯ ಮುಖ್ಯಮಂತ್ರಿಗಳು ಕಳೆದ ವಾರವೇ [illegible] ಮೈನಾರಿಟೀಸ್‌ಗೆ ಸಂವಿಧಾನದ ರೈಟ್ಸ್ ಇದೆ. ಎಲ್ಲೆಲ್ಲಿ ಅವರಿಗೆ [illegible] ಆಗಬೇಕೋ ಅದನ್ನು ಮಾಡತಕ್ಕದ್ದು ಅಲ್ಲವೆ. ಮೈನಾರಿಟೀಸ್ ಅನ್ನು ನಂಬಿಕೆಗೆ ತೆಗೆದುಕೊಂಡು ಹೋದರೆ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ. ಈ ದೇಶದ ಐಕ್ಯತೆ ಆಗುತ್ತದೆ, ಅದಕ್ಕಾಗಿ ಮೆಜಾರಿಟಿ ಕಮ್ಯೂನಿಟಿಯವರು ಮ್ಯಾಗ್‌ನಾನಿಮಸ್ ಆಗಿ ಮೈನಾರಿಟೀಸ್ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಅಲೋಕೇಷನ್ ೧೦ ಲಕ್ಷ ಕಡಿಮೆಯಾಗಿದೆ ಎಂದು ಹೇಳಿ ಮೈನಾರಿಟೀಸ್‌ಗೆ ನಾವು ವಿರೋಧವಾಗಿದ್ದೇವೆ ಮೈನಾರಿಟೀಸ್‌ಗೆ ನಾವು ಸಹಾಯ ಮಾಡುತ್ತಿಲ್ಲವೆಂದು ಹೇಳುವುದು ಸರಿಯಾದ ಮಾತಲ್ಲ, ಇನ್ನು ಹಲವಾರು ಜನ ಸದಸ್ಯರು ವಕ್ಫ್ ಬೋರ್ಡ್ ವಿಚಾರ ಹೇಳಿದ್ದಾರೆ. ಇದರ ಬಗ್ಗೆ ಬಹಳಷ್ಟು ವಿಚಾರ ಇದೆ, ಇದನ್ನು ಹೇಳುತ್ತಾ ಹೋದರೆ ಬೆಳಿಗ್ಗೆಯವರೆಗೂ ಹೇಳಬೇಕಾಗುತ್ತದೆ. ಅಂತೂ ಈ ಡೆಮೊಕ್ರಸಿಯಲ್ಲಿ ಹೇಳುವುದಾದರೆ, ಖಂಡಿತವಾಗಿ ವಕ್ಫ್ ಬೋರ್ಡ್ ಯಾವ ರೀತಿಯಲ್ಲಿ ರಚನೆಯಾಯಿತು. ಈ ಬಗ್ಗೆ ಮಾನ್ಯ ನಜೀರ್‌ಸಾಬ್ ರವರೂ ಕೂಡ ಮಾತನಾಡಿದರು. ಈ ರೀತಿಯಾಗಿ ಕೆಲವು ಚೇಂಜ್ ಮಾಡಬೇಕು. ಡೆಮೊಕ್ರಸಿಯಲ್ಲಿ ಸರ್ಕಾರದವರು. ಶಾಸಕರು ಬೇಡ ಎಂದು ಹೇಳುವಾಗ. ಯಾರೇ ಅಧಿಕಾರದಲ್ಲಿ. ಚೇರ್ಮನ್ ಇರಲಿ, ಸದಸ್ಯರು ಇರಲಿ. ಅವರು ಬಿಟ್ಟು ಹೋಗಬೇಕು, ಡೆಮಾಕ್ರಸಿಯಲ್ಲಿ ಜನರ ದೊಡ್ಡ ತಾಕತ್ತು ಇದೆ. ಆ ಕಾರಣದಿಂದ ಡೆಮಾಕ್ರಸಿಯಲ್ಲಿ ನಂಬಿಕೆ ಇರುವವರು ನಾವು, ಹೇಳಿದ ಮೇಲೆ,

ಅವರು ಬಿಟ್ಟು ಹೋಗಬೇಕು. ಇದನ್ನು ಸರಿಯಾಗಿ ಹೊಸದು ಮಾಡಬೇಕು. ಟೆಕ್ನಿಕಲ್ ಗ್ರೌಂಡ್‌ನಲ್ಲಿ ಕುಳಿತುಕೊಂಡಿರಬಾರದು, ಟೆಕ್ನಿಕಲ್ ಗ್ರೌಂಡ್‌ನಲ್ಲಿ ಕುಳಿತುಕೊಂಡರೆ ಸಾಲುವುದಿಲ್ಲ. ಮುಸಲ್ಮಾನ್ ಶಾಸಕರು ಮಾತ್ರವಲ್ಲ, ಮಾನ್ಯ ಲಕ್ಕಪ್ಪನವರೂ ಹೇಳಿದರು, ಪ್ರತಿಯೊಬ್ಬರೂ ಕೇಳುತ್ತಾ ಇದ್ದಾರೆ, ಇದು ಸರಿಯಾಗಿಲ್ಲ, ಹೊಸದಾಗಿ ಮಾಡಬೇಕು ಎಂದು ಹೇಳಿದರು. ಡೆಮಾಕ್ರಸಿಯಲ್ಲಿ ನಾವೂ ನೀವೂ ಎಲ್ಲರೂ ಹೇಳುತ್ತಾರೆ. ಆ ಕಡೆ ಕುಳಿತವರು, ಈ ಕಡೆ ಕುಳಿತವರೂ ನೀವು ಬಿಟ್ಟು ಹೋಗಿ ಎಂದು ಹೇಳಬಹುದು. ಅದಕ್ಕಾಗಿ ನಿಮ್ಮೆಲ್ಲರ ಪರವಾಗಿ ಹೇಳುತ್ತೇನೆ. ಇದನ್ನು ಸರಿ ಮಾಡಬೇಕು. ಎಲ್ಲರ ಮನಸ್ಸಿನಲ್ಲಿ ಏನಿದೆ, ಇದು ಸರಿಯಾಗಿ ನಡೆಯುವುದಿಲ್ಲ ಎಂದು ಏನು ಹೇಳುತ್ತಿದ್ದೀರಿ, On behalf of all of you I appeal to the Chairman and the Members to step down so that we can have a new Board so that the hopes and aspirations of the people can be properly met. ಡೆಮಾಕ್ರಸಿಯಲ್ಲಿ ನಂಬಿಕೆ ಇರುವವರು ಇಷ್ಟು ಹೇಳಿದ ಮೇಲೆ, ಅವರು ಖಂಡಿತವಾಗಿ ಬಿಟ್ಟು ಹೋಗುತ್ತಾರೆ. ಈಗಾಗಲೇ ವಕ್ಫ್ ಬೋರ್ಡ್ ಸದಸ್ಯರಿಂದ ಎರಡು ಮೂರು ರಾಜೀನಾಮೆ ಪತ್ರ [illegible]. ನಾವು ಇನ್ನೂ ಒಪ್ಪಿಲ್ಲ, ಮಾನ್ಯ ಕಮರುಲ್ ಇಸ್ಲಾಂರವರು ಹೇಳಿದರು, [illegible] ಲೆವಲ್‌ನಲ್ಲಿ ಗೂಂಡಾಗಳನ್ನು ಹಾಕಿದ್ದೀರಿ ಎಂದು ಹೇಳಿದರು, ಇದನ್ನು ಸರಿಮಾಡಬೇಕು, ಈಗಾಗಲೇ [illegible] ಅವರೂ ಸಹ ತಾನಾಗಿಯೇ ಬಿಟ್ಟು ಹೋದರೆ, ಅತ್ಯಂತ ಒಳ್ಳೆಯದು [illegible]. ಈ ವಕ್ಫ್ ಬೋರ್ಡನ್ನು ಚೆನ್ನಾಗಿ ಮಾಡಬೇಕು, ಇದಕ್ಕೆ ಹೊಸ ರೂಪ ಕೊಡಬೇಕು. ಒಳ್ಳೆಯ [illegible] ಹೋಗಬೇಕೆಂದು ನಿಮ್ಮೆಲ್ಲರ ಪರವಾಗಿ ಅವರನ್ನು I request him to [illegible] to submit his resignation so that we can [illegible] would be given and we will keep in mind the new hopes and aspirations of the People and improve the conditions of the minorities through the administration Wakfs. Thank you.

SRI D. B. CHANDRE GOWDA.—I would like to know from the Hon. Minister [illegible] what action is taken on the Basheer Hussain Commission report. What happened [illegible]?

ಶ್ರೀ ಎಸ್. [illegible].—[illegible] ರಿಪೋರ್ಟ್ [illegible] ಮೂರು ಜನ ಸದಸ್ಯರಿದ್ದರು [illegible] ರಿಪೋರ್ಟ್, ರಿಪೋರ್ಟ್ ಆಗಿ [illegible] ಸಾಧ್ಯವಿಲ್ಲ. ಅದಕ್ಕಾಗಿ [illegible] ಒಂದು ಕಮಿಷನ್ ನೇಮಿಸಿದೆ. ಡಿಸ್ಟ್ರಿಕ್ಟ್ ಸೆಷನ್ ಜಡ್ಜ್ ಆಗಿದ್ದ [illegible] ಏಕ ಸದಸ್ಯ ಆಯೋಗವಾಗಿ ನೇಮಕ ಮಾಡಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಆ ರಿಪೋರ್ಟ್ [illegible] ಅಜೀಜ್ ಸೇಠ್ ಅವರ ವಿರುದ್ಧ ಇದ್ದದ್ದು ನಿಜವೇ. ಹಾಗಿದ್ದರೆ ಅವರ [illegible] ತೆಗೆದುಕೊಂಡಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಆ ರಿಪೋರ್ಟ್ ಒಬ್ಬ ಕ್ಯಾಬಿನೆಟ್ ಮಂತ್ರಿಗಳ ವಿರುದ್ಧ ಇದೆ ಎನ್ನುವ ಕಾರಣಕ್ಕಾಗಿ ಬಶೀರ್ ಹುಸೇನ್ ವರದಿಯನ್ನು ಈ ರೀತಿ ಮಾಡಿದ್ದೀರಿ. The Commission has examined nearly about 20 cases if my information is correct and they have given report in each individual case. ಒಬ್ಬರೇ ಅದಕ್ಕೆ ಸೈನ್ ಮಾಡಿದ್ದರು, it is not conclusive. ಆದುದರಿಂದ ಸರಿ ಹೋಗಲಿಲ್ಲ ಎಂದು ಹೇಳಿ ಮತ್ತೆ ಒನ್ ಮ್ಯಾನ್ ಕಮೀಷನ್ ಮಾಡಿದ್ದೀರಲ್ಲ ಇದು ಸರಿಯೋ ?

ಶ್ರೀ ಎಸ್. ಎಂ ಯಾಹ್ಯಾ.—ನಿಮಗೆ ಕಾನೂನು ಚೆನ್ನಾಗಿ ಗೊತ್ತಿದೆ. ನೀವೂ ವಕೀಲರು. ಮೂರು ಜನ ಆ ಕಮೀಷನ್‌ನಲ್ಲಿ ಇದ್ದ ಮೇಲೆ, ಮೂರು ಜನರೂ ಸೈನ್ ಮಾಡಬೇಕು, ಆದರೆ ಮೂರೂ ಜನರೂ ಸೈನ್ ಹಾಕದೇ ಒಬ್ಬರೇ ಸೈನ್ ಮಾಡಿದರೆ ಅದನ್ನು ರಿಪೋರ್ಟ್ ಎಂದು ಹೇಳುವುದಕ್ಕೆ ಸಾಧ್ಯ ಇದೆಯೋ ? I say it is not a report at all. 3 of rhem should have signed. If one person signs a report it cannot be a report. Therefore, we thought in fitness of things that a Judge should be appointed and we have appointed a Judge and whatever material is given by Baseer Hussain Commission, we will certainly give it to the new Commission.

SRI D. B. CHANDRE GOWDA.—Do you maen to say that the Government has rejected the Commission Report. I would like to know as to whether the Governmet has accepted or relected the Basher Hussain Commission on report partially. That is all.

SRI S. M. YAHYA.—I cannot put it in simpler way. It is not a report at all.

SRI S. H. KAUGALAGI.—Because the report is against your Cabinet Minister, because the report is not favourable to the Cabinet Minister you have not accepted. Otherwise you would have accepted it.

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಸ್ವಾಮಿ ಒಂದು ವಿಚಾರ. ಬಳ್ಳಾರಿ ಶಾದಿ ಮಹಲ್ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದೆ. ಅದರ ಮೇಲೆ ಎನ್‌ಕ್ವೈರಿ ಮಾಡಿಸಿದ್ದೀರಿ. ಪಿ. ಡಬ್ಲ್ಯು. ಡಿ. ಎಂಜಿನಿಯರ್ಸ್ ಕಡೆಯಿಂದ ರಿಪೋರ್ಟ್ ಕೂಡಾ ಕೊಡಿಸಿದ್ದೇವೆ. ಆದರೂ ಇಲ್ಲಿಯವರೆಗೆ ಏನೂ ಆಕ್ಷನ್ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ? ಏತಕ್ಕೆ ಇದರ ಬಗ್ಗೆ ಹೇಳಲಿಲ್ಲ. ವಕಫ್ ಕಮಿಟಿಯಲ್ಲಿ ಅವ್ಯವಹಾರಗಳು ನಡೆದಿರುವುದನ್ನು ಹೊರಗಡವಬೇಕಾಗಿತ್ತು. ಏತಕ್ಕೆ ಮಾಡಲಿಲ್ಲ. ಇದರಲ್ಲಿ ಚೇರ್ಮನ್‌ರ ಸಂಬಂಧ ಇದೆ. ವೈಸ್‌ಪ್ರೆಸಿಡೆಂಟ್ ಏನಿದ್ದಾರೆ ಅವರೆಲ್ಲರೂ ಸಹ ತಪ್ಪು ಮಾಡಿದ್ದಾರೆ. ಅದರ ಮೇಲೆ ನೀವು ಏನೂ ಆಕ್ಷನ್ ತೆಗೆದುಕೊಳ್ಳದೇ ಬಿಟ್ಟಿದ್ದೀರಿ. ಈಗಲಾದರೂ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಶಾಸಕರಾದ ರಾಮಪ್ಪನವರು ಎರಡು ಮೂರು ಸಲ ನನ್ನ ಹತ್ತಿರ ಬಂದು ಹೇಳಿದ್ದಾರೆ. ಬಳ್ಳಾರಿ ಡಿಸ್ಟ್ರಿಕ್ಟ್‌ನಲ್ಲಿ ಬಹಳಷ್ಟು ತಪ್ಪುಗಳಾಗಿವೆ. ಡಿಸ್ಟ್ರಿಕ್ಟ್ ಕಮಿಟಿಯವರು ಮಾಡಿದ್ದಾರೆಂದು ಹೇಳಿದ್ದಾರೆ. ಅದನ್ನು ಅವರದ್ದೆ ಆದ ರೀತಿಯಲ್ಲಿ ಎನ್‌ಕ್ವೈರಿ ಮಾಡಿದರು. ನಾನೂ ಸಹ ಬಂದ ಮೇಲೆ ನೀವು ಕೊಟ್ಟಿದ್ದೆಲ್ಲಾ ಸರಿಯಾಗಿ ನೋಡಿಕೊಂಡು ಯಾರೇ ತಪ್ಪಿತಸ್ಥರು ಇರಲು, ಸರಿಯಾಗಿ ಕಾರ್ಯಾಚರಣೆ ಮಾಡುವಂತೆ ನಾವು ಕೆಲಸ ಮಾಡುತ್ತೇವೆ.

ಶ್ರೀ ಎಂ. ರಾಮಪ್ಪ.—ಕಾನೂನು ಪ್ರಕಾರ ಎಂದರೆ ಏನೂ ಸ್ವಾಮಿ ? ಒಂದು ವರ್ಷನೋ, ಎರಡು ವರ್ಷನೋ, ನಾನು ಕೊಟ್ಟು ಆರು ತಿಂಗಳಾಗಿದೆ.

ಉಪಾಧ್ಯಕ್ಷರುಯವರು.—ಏಕಾಂತಯ್ಯನವರು.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಮಾನ್ಯ ಉಪಾಧ್ಯಕ್ಷರೆಯವರೇ, ನಾನು ಕೇಳಿದಂಥ ಕೆಲವು ವಿಚಾರಗಳನ್ನು ಅವರು ಒಪ್ಪಿದ್ದಾರೆ. ಮೊದಲನೆಯದಾಗಿ ಸಣ್ಣ ಕೈಗಾರಿಕೆಗಳು, ರೋಗಗ್ರಸ್ಥ ಕೈಗಾರಿಕೆಗಳು ಏನಿದ್ದಾವೆ, ಅವುಗಳಿಗೆ ಸಹಾಯ ಮಾಡುವುದಕ್ಕೆ ಹೊಸ ವ್ಯವಸ್ಥೆಯನ್ನು ಮಾಡುವುದಕ್ಕೆ ಒಪ್ಪಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಸಾರ್ವಜನಿಕ ವಲಯದಲ್ಲಿರುವ ಅನೇಕ ಕಾರ್ಖಾನೆಗಳ ಕಾರ್ಯನಿರ್ವಹಣೆಯ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಒಪ್ಪಿರುತ್ತಾರೆ. ಆದುದರಿಂದ ಆದರ ಬಗ್ಗೆ ನಾನು ಈಗ ಹೇಳುವುದಿಲ್ಲ. ಆದರೆ ನಮ್ಮಲ್ಲಿರುವ ವಿದ್ಯುತ್ ಉತ್ಪಾದನಾ ಸ್ಥಾವರಗಳು ಅವುಗಳ ಉತ್ಪಾದನಾ ಶಕ್ತಿ ಬಗ್ಗೆ ೧೯೮೨-೮೩ನೇ ಇಸವಿ ಯಿಂದ ಈಚೆಗೆ ಅವರು ತೆಗೆದುಕೊಂಡು ಹೇಳಿದ್ದಾರೆ. ಬಹಳ ಸಂತೋಷ. ಅವರಿಗೆ ಯಾವುದೇ ದುರುದ್ದೇಶ ಇಲ್ಲ ಎಂದು ನಾನು ತಿಳಿದುಕೊಂಡಿರುತ್ತೇನೆ. ೧೯೮೦-೮೧ನೇ ಇಸವಿಯಲ್ಲಿ ಯಾವ ಉತ್ಪಾದನಾ ಶಕ್ತಿ ನಮ್ಮಲ್ಲಿತ್ತು ಸ್ವಾಮಿ ? ಅದಕ್ಕಿಂತ ಹೆಚ್ಚಾಗಿ ೧೯೮೩-೮೪ನೇ ಇಸವಿಗಿಂತ ಮೊದಲು ಇದ್ದಂಥ ಸರಕಾರಗಳು ಎಷ್ಟು ಜಲವಿದ್ಯುತ್ ಯೋಜನೆಗಳನ್ನು ರೂಪಿಸಿ ಮಂಜೂರಾತಿಗಾಗಿ ಕೇಂದ್ರಕ್ಕೆ ಕಳುಹಿಸಿದ್ದವು ೧೯೮೩-೮೪ನೇ ಇಸವಿ ನಂತರ ಕೇಂದ್ರ ಸರಕಾರಕ್ಕೆ ಎಷ್ಟು ಯೋಜನೆಗಳು ಮಂಜೂರಾತಿಗಾಗಿ ಹೋದವು. ೧೯೮೩-೮೪ನೇ ಇಸವಿಯನಂತರ ಇದ್ದಂಥ ಸರಕಾರಎಷ್ಟು ವಿದ್ಯುತ್ ಯೋಜನೆಗಳನ್ನು ರೂಪಿಸಿ ಮಂಜೂರಾತಿಗಾಗಿ ಕೇಂದ್ರಕ್ಕೆ ಕಳುಹಿಸಿದೆ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇಯವರೇ ಮಾನ್ಯ ಸದಸ್ಯರು ಕೇಳಿದ ಎಲ್ಲಾ ಕ್ಲಾರಿಫಿಕೇಶನ್ಸ್‌ಗೂ ನನ್ನ ಹತ್ತಿರ ಮಾಹಿತಿ ಇದೆ. ಅವೆಲ್ಲವನ್ನೂ ಹೇಳುತ್ತಾ ಹೋದರೆ ಒಂದು ಗಂಟೆ ಸಮಯ ಬೇಕಾಗುತ್ತದೆ. ಕಾಳಿ ನದಿ ಬಗ್ಗೆ ಸಹ ಮಾಹಿತಿ ಇದೆ. ಎಲ್ಲಾ ಇದೆ...

ಶ್ರೀ ಎಚ್. ಏಕಾಂತಯ್ಯ.—ಹಿಂದಿನ ಸರ್ಕಾರ ಏನೂ ಮಾಡಿಲ್ಲವೆನ್ನುವ ಅರ್ಥ ಬರುವ ಹಾಗೆ ತಾವು ಉತ್ತರ ಹೇಳಿದ್ದೀರಿ. ಏನೂ ಹಣ ಖರ್ಚು ಮಾಡಿಲ್ಲ ಎನ್ನುವ ಅರ್ಥ ಬರುವ ಹಾಗೆ ತಾವು ಹೇಳಿದ್ದೀರಿ. ೧೯೮೩ ರಿಂದ ಅಧಿಕಾರಕ್ಕೆ ಬಂದಂತಹ ಸರ್ಕಾರಗಳು ಜಲ ವಿದ್ಯುತ್ ಯೋಜನೆಗಳಿಗೆ ಶರಾವತಿಗೆ ಆಗಲಿ, ಬೇರೆ ಆಗಲಿ ಏನೂ ಹಣ ಖರ್ಚು ಮಾಡಿಲ್ಲ ಎಂದು ಹೇಳಿದ್ದೀರಿ...

ಶ್ರೀ ಎಸ್. ಎಂ. ಯಾಹ್ಯಾ.—ನಾನು ಮೊದಲೇ ಹೇಳಿದೆ, ನಾನು ಇಲ್ಲಿ ಯಾರನ್ನೂ ಕ್ರಿಟಿಸಿಜಮ್ ಆಗಲಿ ಅಥವಾ ಬೇರೆ ಏನೂ ಅಪಾದನೆ ಮಾಡುತ್ತಿಲ್ಲ, ಎರಡನೆಯದಾಗಿ ಇದರ ಬಗ್ಗೆ ತಾವ್ಯಾರು ಸೆನ್ಸಿಟೀವ್ ಆಗಬಾರದು ಎಂದು ಸಹ ಹೇಳಿದೆ...

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೇ...

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣೀಯವರೇ, ಬಡ್ಜೆಟ್ ಪುಸ್ತಕದಲ್ಲಿ ಎಲ್ಲ ವಿವರಗಳಿರುತ್ತದೆ. ಅದನ್ನು ಅವರು ನೋಡಿಕೊಳ್ಳಬಹುದು.

ಶ್ರೀ ಎಸ್. ಎಂ. ಯಾಹ್ಯಾ.—ಪ್ರತಿಯೊಂದು ವಿಷಯದ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಪ್ರತಿಯೊಂದು ಕಾಲದ್ದು ಮಾಹಿತಿ ಇದೆ. ನಾನು ಏತಕ್ಕೆ ಆ ಪಾಯಿಂಟ್ ಹೇಳಿದೆ ಎನ್ನುವುದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ...

ಶ್ರೀ ಎಚ್. ಏಕಾಂತಯ್ಯ.—೧೯೮೩-೮೪ ರಲ್ಲಿ ಜಲವಿದ್ಯುತ್ ಯೋಜನೆಗಳಿಗೆ ಖರ್ಚು ಮಾಡಿದಂತಹ ಹಣ ಎಷ್ಟು ? ಮತ್ತು ೧೯೮೩ ರಿಂದ ೮೯ ರವರೆಗೂ ಈ ಬಾಬಿಗೆ ಖರ್ಚು ಮಾಡಿದಂತಹ ಹಣ ಎಷ್ಟು ? ಅದಕ್ಕಿಂತ ಹಿಂದೆ ಇದ್ದ ಸರ್ಕಾರಗಳು ಖರ್ಚು ಮಾಡಿದಂತಹ ಹಣ ಎಷ್ಟು ಎಂದು ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ.—ನಾನು ಮೊದಲೇ ಹೇಳಿದೆ ಟೈಮ್ ಇಲ್ಲ ಎಂದು. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. ಬೇರೆ ಸಮಯದಲ್ಲಿ ಕೇಳಿ ನಾನು ವಿವರ ಕೊಡುತ್ತೇನೆ.

ಶ್ರೀ ಎಚ್. ಏಕಾಂತಯ್ಯ.—ತಾವು ಆರೋಪ ಬರುವಂತಹ ಅರ್ಥದಲ್ಲಿ ಮಾತನಾಡಿ ನಾವು ವಿವರಣೆ ಕೇಳಿದರೆ ಉತ್ತರ ಹೇಳದಿದ್ದರೆ ಅದು ಸರಿಯಾಗುವುದಿಲ್ಲ. ತಾವು ಆ ಬಗ್ಗೆ ವಿವರಣೆ ಕೊಡದಿದ್ದರೆ ಹಿಂದಿನ ಸರ್ಕಾರ ಹಣ ಖರ್ಚು ಮಾಡಿಲ್ಲವೇನೋ ಎನ್ನುವ ಒಂದು ತಪ್ಪು ಕಲ್ಪನೆಗೆ ಅವಕಾಶವಾಗುತ್ತದೆ. ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಹೇಳಿದರು, ಪುಸ್ತಕ ಇದೆ ನೋಡಿಕೊಳ್ಳಿ ಎಂದು. ಪುಸ್ತಕವನ್ನು ನಾವೂ ನೋಡಿದ್ದೇವೆ. ಆ ಬಗ್ಗೆ ಬೇಕಾದರೆ ಮೂರು ದಿವಸ ಚರ್ಚೆ ಮಾಡೋಣ ತಾವು ತಯಾರಾಗಿದ್ದೇವೆ. ಆದರೆ ೧೯೮೩ ರಿಂದ ೧೯೮೯ ರವರೆಗೆ ಹಾಗೂ ಅವರ ಹಿಂದೆ ಜಲವಿದ್ಯುತ್ ಯೋಜನೆಗಳಿಗೆ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು ಎಂಬುದರ ವಿವರ ಕೊಟ್ಟರೆ ಎಲ್ಲರಿಗೂ ಯಾರು ಯಾರು ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆಂದು ತಿಳಿಯುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಹಳ ಚೆನ್ನಾಗಿ ಮಾಡಿದ್ದೀರಿ ಎಂದು ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀ ಎಸ್. ಎಂ. ಯಾಹ್ಯಾ.—ಕಾಳಿ ಸೆಕೆಂಡ್ ಸ್ಟೇಜ್ ಕಾಳಿ ಮೊದಲನೇ ಸ್ಟೇಜ್ ಇವೆಲ್ಲಾ ಯಾರ ಕಾಲದಲ್ಲಿ ಆಗಿದ್ದುದು ?

ಶ್ರೀ ಎಚ್. ಏಕಾಂತಯ್ಯ.—ಮಾನ್ಯ ಮಂತ್ರಿಗಳು ನನ್ನ ವಿವರಣೆಗೆ ಉತ್ತರ ಹೇಳುವಷ್ಟು ನಿಸ್ಸಹಾಯಕರೇ ನನ್ನ ಪ್ರಶ್ನೆಗೆ ಅವರು ಉತ್ತರ ಕೊಡುವುದು ಬೇಡವೇ ?

ಉಪಾಧ್ಯಕ್ಷರು.—ಉತ್ತರ ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣೀಯವರೇ, ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಕಟ್ಟಿಸಿರುವ ಇಂಡಸ್ಟ್ರಿಯಲ್ ಷೆಡ್ಡುಗಳನ್ನು ಖಾಲಿ ಇವೆ. ಇದಕ್ಕೆ ಕಾರಣವೇನೆಂದರೆ ಸೇಲ್ ಕವಲ್ಲಿ ಲೀಜ್ ಕಮ್ ಸೇಲ್ ಎಂದು ಇವರು ಕೊಡುತ್ತಿದ್ದಾರೆ. ಇದರಿಂದ ಜನ ಹಣ ಕಟ್ಟರೆ ಖಾಲಿ ಇವೆ ಮತ್ತು ಎಂಟರ್‌ಪ್ರೆನರ್ಸ್ ಯಾರೂ ಮುಂದೆ ಬರುತ್ತಿಲ್ಲ. ನಾವು ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದ್ದರಿಂದ ಇದನ್ನು ಲೀಜ್ ಕಮ್ ಸೇಲ್ ಎಂದು ಇರುವುದನ್ನು ಬರೀ ಲೀಜ್ ಎಂದು ಪರಿವರ್ತನೆ ಮಾಡಿದರೆ ಹೊ ಹೊಸ ಎಂಟರ್ ಪ್ರೆನರ್ಸ್ ಮುಂದೆ ಬಂದು ಷೆಡ್ಡುಗಳನ್ನು ತೆಗೆದುಕೊಳ್ಳುತ್ತಾರೆ, ಸರ್ಕಾರಕ್ಕೂ ಆದಾಯ ಬರುತ್ತದೆ. ಈ ಬಗ್ಗೆ ಮಾನ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಸಮಸ್ಯೆ ಬಹಳ ದೊಡ್ಡದು ಇದೆ. ಮಾನ್ಯ ಸದಸ್ಯರು ಹೇಳಿದ ಮಾತನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡಿ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಅಧ್ಯಕ್ಷಣೀಯವರೇ ಧಾರವಾಡದಲ್ಲಿ "ಟೆಲಿಕೋ" ಆಗಬೇಕೆಂದು ಹಿಂದಿನ ಸರ್ಕಾರದವರು ಸಾವಿರಾರು ಎಕರೆ ಜಮೀನನ್ನು ರೈತರಿಂದ ತೆಗೆದುಕೊಂಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ದೊರೆತಿದೆಯೋ ? ಇಲ್ಲವೇ ? ಇದನ್ನು ಯಾವಾಗ ಮಾಡುತ್ತೀರಿ ? ಆಮೇಲೆ ಸಿಕ್ ಆಗಿರುವ ಇಂಡಸ್ಟ್ರೀಗಳಿಗೆ ಏನಾದರೂ ಟಾನಿಕ್ ಕೊಡುತ್ತೀರಾ ? ಮೂರನೆಯದಾಗಿ ಕೆ. ಇ. ಬಿ. ಬಗ್ಗೆ ಹೇಳುತ್ತಾ ಸಬ್ ಡಿವಿಜನ್‌ಗಳನ್ನು ಮಾಡುತ್ತೇನೆಂದು ಹೇಳಿದಿರಿ. ನಮ್ಮ ಕಲಘಟಗಿಯಲ್ಲಿ ಒಂದು ಸಬ್ ಡಿವಿಜನ್ ಮಾಡುತ್ತೀರಾ ? ಮತ್ತು ಹುಬ್ಬಳ್ಳಿ ಸಿಟಿಯನ್ನು ಇಂಡಸ್ಟ್ರೀಯಿಂದ ತೆಗೆದಿರುವುದರಿಂದ ಅಲ್ಲಿ ಇಂಡಸ್ಟ್ರೀ ತೆರೆಯುವವರಿಗೆ ಸಬ್ಸಿಡಿ ಸಿಗುವುದಿಲ್ಲ. ಬೆಂಗಳೂರು ಬಿಟ್ಟು ಇಡೀ ರಾಜ್ಯಕ್ಕೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದಿರಿ. ಇದರಲ್ಲಿ ಹುಬ್ಬಳ್ಳಿ ಸಹ ಸೇರಿದೆಯೋ ಹೇಗೆ ?

ಶ್ರೀ ಎಸ್. ಎಂ. ಯಾಹ್ಯಾ.—ಟೆಲಿಕೋ ಬಗ್ಗೆ ಅವರು ಕೇಳಿದ್ದಾರೆ. ಇದರ ಒಂದು ಗ್ರೋತ್ ಸೆಂಟರ್ ಧಾರವಾಡದಲ್ಲಿ ಆಗುತ್ತಿದೆ. ಇಂಡಸ್ಟ್ರೀಗಳನ್ನು ಅಭಿವೃದ್ಧಿ ಮಾಡಬೇಕು, ಜನರಿಗೆ ಕೆಲಸ ಕೊಡಬೇಕು ಎಂದು ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಕೇಳಿರುವಂತಹ ಪ್ರಶ್ನೆಗಳ ಬಗ್ಗೆ ನಾನು ಯೋಚನೆ ಮಾಡಿ ಹೇಳಬೇಕಾಗುತ್ತದೆ. ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಅವರು ತಮ್ಮ ಭಾಷಣದಲ್ಲಿ ಸಹ ಪ್ರಸ್ತಾಪ ಮಾಡದೆ ಈಗ ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಸಿ. ಸಿದ್ದನಗೌಡರ್.—ಈ ಟೆಲ್ಕೊವನ್ನು ಮಾಡದಿದ್ದರೆ ಅವರ ಜಮೀನನ್ನಾದರೂ ವಾಪಸ್ ಕೊಡಿ ಅದನ್ನು ಕ್ಲಿಯರ್ ಆಗಿ ಹೇಳಿ.

ಶ್ರೀ ಎಸ್.ಎಂ. ಯಾಹ್ಯಾ.—ಅದನ್ನು ನೋಡೋಣ.

ಶ್ರೀ ಕೆ.ಹೆಚ್. ಹನುಮೇಗೌಡ.—ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಫ್ಯಾಕ್ಟರಿಯಲ್ಲಿ ನೂರು ಕೋಟಿ ರೂಪಾಯಿಗೆ ಮೇಲ್ಪಟ್ಟು ಲಾಸ್ ಆಗಿದೆ ಎಂದು ಕೇಳಿದ್ದೇವೆ. ಕೆಲವು ಡೀಲರ್‌ಗಳಿಗೆ ಯೂರಿಯಾವನ್ನು ಆಂಧ್ರಪ್ರದೇಶದಲ್ಲಿ ಮತ್ತು ಕರ್ನಾಟಕದಲ್ಲಿ ಕೊಟ್ಟಿದ್ದೀರಲ್ಲಾ, ಆ ರೀತಿ ಕೊಟ್ಟಿರತಕ್ಕಂಥ ಡೀಲರ್ಸ್‌ಗಳು ಕೆಲವರು ದುಡ್ಡನ್ನೇ ಕೊಟ್ಟಿಲ್ಲ. ಮತ್ತು ಅಲ್ಲಿ ಸ್ಟಾಕೂ ಕೂಡಾ ಇಲ್ಲವಂತೆ. ಒಬ್ಬೊಬ್ಬರು ಪಾಪರ್ ಚೀಟಿಯನ್ನು ಕೂಡಾ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇವೆ ಈ ಎಲ್ಲಾ ಅವ್ಯವಹಾರವನ್ನು ಎನ್‌ಕ್ವೈರಿ ಮಾಡುವುದಕ್ಕೆ ಎಂದು ಹೇಳಿ ಎಂ.ಬಿ.ಶೆಟ್ಟಿ ಎನ್ನುವವರೊಬ್ಬರನ್ನು ನೇಮಿಸಿದರು ಆದರೆ ಅವನೇ ಈ ಎಲ್ಲದಕ್ಕೂ ಮೂಲ ಕಾರಣ ಎಂದು ನಾವು ಕೇಳಿದ್ದೇವೆ ಆದರೂ ಅವನನ್ನೇ ಎನ್‌ಕ್ವೈರಿಗೆ ಹಾಕಿಬಿಟ್ಟು ಈಗ ದುಡ್ಡು ವಾಪಸ್ಸು ಬರುವ ಹಾಗೂ ಇಲ್ಲ ಎಲ್ಲವನ್ನೂ ಸುಮಾರು ನಾಲ್ಕು ಕೋಟಿ ರೂಪಾಯಿಗೆ ಮೇಲ್ಪಟ್ಟು ಅಲ್ಲಿ ಸ್ಟಾಕೂ ಇಲ್ಲ, ದುಡ್ಡು ಬರುವ ಹಾಗೂ ಇಲ್ಲ ಈ ಪರಿಸ್ಥಿತಿಯಾಗಿದೆ ಎಂದು ನಾವು ಕೇಳಿದ್ದೇವೆ. ಇದು ನಿಜವೇ ? ಹಾಗಿದ್ದರೆ ಸಂಬಂಧಪಟ್ಟವರ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್.ಎಂ. ಯಾಹ್ಯಾ.—ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ಕೆಮಿಕಲ್ಸ್ ಆಗಲಿ ಮತ್ತು ವಿಕ್ರಾಂತ್ ಟೈರ್ಸ್ ಆಗಲಿ ಇದು ಎರಡೂ ಸ್ಟೇಟ್ ಸೆಕ್ಟರ್ ಅಲ್ಲ. ಇದು ಎರಡೂ ಜಾಯಿಂಟ್ ಕಂಪನೀಸ್ ಅದಕ್ಕಾಗಿ ನೇರವಾಗಿ ಸರ್ಕಾರಕ್ಕೆ ಯಾವ ಅಧಿಕಾರವೂ ಇಲ್ಲ. ನಮ್ಮದು ಬರೀ ಮ್ಯಾನೇಜ್‌ಮೆಂಟ್ ಈ ಎರಡೂ ಮಾತ್ರ, ಆ ರೀತಿ ಇದೆ. ಬಾಕಿಯದೆಲ್ಲಾ ಎಸ್.ಜಿ.ಎಫ್. ಆಗಲಿ ಬೇರೆ ಎಲ್ಲೇ ಸ್ಟೇಟ್ ಸೆಕ್ಟರ್‌ನಲ್ಲಿ ಬರುತ್ತದೆ. ಈ ವಿಕ್ರಾಂತ್ ಟೈರ್ಸ್ ಮತ್ತು ಮಂಗಳೂರು ಕೆಮಿಕಲ್ಸ್ ಅದು ಜಾಯಿಂಟ್ ಸೆಕ್ಟರ್‌ನಲ್ಲಿ ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್‌ನ ಹಿಡಿತದಲ್ಲಿರುತ್ತವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಮಂತ್ರಿಗಳ ಉತ್ತರ ಅರ್ಥಮಂತ್ರಿಗಳು ಇರತಕ್ಕಂಥ ಮೈಸೂರು ಜಿಲ್ಲೆಗೆ, ಮಾನ್ಯ ಮುಖ್ಯಮಂತ್ರಿಗಳು ಇರತಕ್ಕಂಥ ಗುಲ್ಬರ್ಗಾ ಜಿಲ್ಲೆಗೆ ಮತ್ತು ಅವರು ಇರತಕ್ಕಂಥ ಮಲೆನಾಡು ಪ್ರದೇಶಕ್ಕೆ ಆಗಿದೆಯೋ ಹೊರತು ನಮ್ಮ ಬಯಲುಸೀಮೆಯಲ್ಲಿರುವ ಬಡ ರೈತರನ್ನು ಚಿತ್ತಲೆ ಮಾಡಿದ್ದೀರಿ ನಾನು ಕಳೆದ ಆರು ತಿಂಗಳಿಂದಲೂ ತಮಗೆ ಒತ್ತಿ ಒತ್ತಿ ಕೇಳುತ್ತಿರುವುದು ಒಂದೇ ವಿಚಾರ ಈ ಒಂದು ಪೋಲ್, ಎರಡು ಪೋಲ್ ಗೋಸ್ಕರ ಇರತಕ್ಕಂಥ ರೈತರು ಯಾರು ಇದ್ದಾರೆ ಅವರಿಗೆ ದಯವಿಟ್ಟು ಕರೆಂಟ್ ಕನೆಕ್ಷನ್‌ನ್ನು ಕೊಡಿ, ಇವರನ್ನು ೧೫-೨೦ ಪೋಲ್ ಜೊತೆಯಲ್ಲಿ

ತಾವು ಹೋಲಿಕೆ ಮಾಡಿಕೊಳ್ಳಬೇಡಿ ಪ್ರೈಯಾರಿಟಿ ಲಿಸ್ಟ್ ಅದನ್ನೇ ಬೇರೆ ಮಾಡಿ. ೧–೨ ಪೋಲ್ ಇರತಕ್ಕಂಥವರಿಗೆ ತಾವು ಪ್ರೈಯಾರಿಟಿ ಲಿಸ್ಟನ್ನು ಬೇರೆ ಮಾಡಿ ೧–೨ ಪೋಲ್‌ಗಳಿಗೆ ಕಡಿಮೆ ಖರ್ಚಾಗುತ್ತದೆ. ಕೆ.ಇ.ಬಿ.ಗೆ ಮುಖ್ಯವಾದ ಸಮಸ್ಯೆ ಇರತಕ್ಕಂಥದ್ದು ಎಂದರೆ ದುಡ್ಡು ನೀವು ಏತಕ್ಕೆ ಇದನ್ನು ಮಾಡಬಾರದು ? ಒಂದು–ಎರಡು ಪೋಲ್‌ಗಳನ್ನು ಮಾಡುವುದಕ್ಕೆ ನಿಮಗೆ ಏನೂ ತೊಂದರೆ ಆಗುವುದಿಲ್ಲ. ಈಗ ಏನಾಗಿದೆ ಎಂದರೆ...

(ಗೊಂದಲ)

ಶ್ರೀ ಎಸ್. ಹೆಚ್. ಕೌಜಲಗಿ.—ಕಾಗೋಡು ತಿಮ್ಮಪ್ಪನವರೇ ನಿಮಗೆ ಮಲೆನಾಡು ಮಂತ್ರಿಗಳು ಸಿಕ್ಕಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ರೈತರ ಬಯಕೆ ಏನು ಇದೆ ಅದನ್ನು ದಯವಿಟ್ಟು ತಾವು ಬಯಲು ಸೀಮೆಗೆ ಏತಕ್ಕೆ ಅನುಕೂಲ ಮಾಡಬಾರದು ? ಎರಡನೆಯದಾಗಿ ಮಾನ್ಯ ಯಾಹ್ಯಾರವರ ಬಗ್ಗೆ ಬಹಳ ಗೌರವ ನಮಗಿದೆ. ಅವರು ಒಳ್ಳೆಯ ಉತ್ತಮ ಆಡಳಿತಗಾರರು ಎನ್ನತಕ್ಕಂಥ ಭಾವನೆ ಕೂಡಾ ಇದೆ. ಅವರಿಂದ ನಾವು ದೊಡ್ಡದನ್ನು ಬಯಸುತ್ತೇವೆ ಆದರೆ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಗುನಗುತ್ತಾ ೮೩ನೇ ಇಸವಿಯಿಂದ ಕಳೆದ ಆರು ವರ್ಷಗಳ ಕಾಲದಲ್ಲಿ ಈ ಹಿಂದಿನ ಸರ್ಕಾರ ವಿದ್ಯುತ್ತನ್ನು ರಾಜ್ಯದಲ್ಲಿ ಉತ್ಪಾದನೆ ಮಾಡಲಿಕ್ಕೆ ಏನೂ ಖರ್ಚು ಮಾಡಲಿಲ್ಲ ಎನ್ನತಕ್ಕಂಥ ಅಪಾದನೆಯನ್ನು ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು.—ಅವರು ಆ ರೀತಿ...

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ರೀತಿ ಆದರೆ ನಾವು ವಿರೋಧ ಪಕ್ಷದಲ್ಲಿ ಹೇಗೆ ಕೆಲಸ ಮಾಡುವುದು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಸಹಿತ ಇಲ್ಲಿದ್ದಾರೆ ನಾನು ನಿಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ ದಯವಿಟ್ಟು ಈ ಸಭೆಯಲ್ಲಿ ಚರ್ಚೆಗೆ ತಾವು ಒಂದು ಅವಕಾಶವನ್ನು ಮಾಡಿ ಕೊಡಿ. ನೋಡೋಣ, ೮೩ ರಿಂದ ಎಷ್ಟು ಕೆಲಸವನ್ನು ಮಾಡಿದ್ದಾರೆ ೮೩ರ ಹಿಂದೆ ಎಷ್ಟು ಕೆಲಸವನ್ನು ನೀವು ಮಾಡಿದ್ದೀರಿ ಎಂಬುದನ್ನು ಚರ್ಚೆ ಮಾಡೋಣ ಆಗ ಗೊತ್ತಾಗುತ್ತದೆ ನಾನು ನಿಮ್ಮಲ್ಲಿ ಇಷ್ಟೇ ಕೇಳಿಕೊಳ್ಳುವುದು ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಿ ಕೇಂದ್ರ ಸರ್ಕಾರ ಏನೇನು ಮಾಡಿತು ಎನ್ನುವುದನ್ನೂ ಸಹ ಚರ್ಚೆ ಮಾಡೋಣ ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ದುಡ್ಡು ಕೊಟ್ಟಿದೆ ಎನ್ನುವುದನ್ನೂ ಚರ್ಚೆ ಮಾಡೋಣ. ನಾವು ಏನು ಮಾಡಿದ್ದೇವೆ, ನೀವು ಏನು ಮಾಡಿದ್ದೀರಿ ಎನ್ನುವುದನ್ನು ಚರ್ಚೆ ಮಾಡೋಣ ಸ್ವಾಮಿ,

(ಗೊಂದಲ)

ಶ್ರೀ ಎಸ್.ಎಂ ಯಾಹ್ಯಾ.—ಮಾನ್ಯ ಉಪಾಧ್ಯಕ್ಷರೇ, ನಾನು ಉತ್ತರವನ್ನು ಕೊಡುವಾಗಲೇ ಮಾನ್ಯ ಸಿಂಧ್ಯಾರವರಿಗೆ ಹೇಳಿವೆ ಕೆಲವರು ದೂರ ಇದ್ದವರಿಗೆ ನಮಗೆ ಡಿಸ್ಕ್ರಿಮಿನೇಷನ್ ಆಯಿತು ನಮಗೆ ಏನೂ ಅನುಕೂಲ ಬರುತ್ತಿಲ್ಲ, ಎಲ್ಲಾ ಅಲ್ಲಿಯೇ ಹೋಗುತ್ತಿದೆ ಎಂದು ಹೇಳುತ್ತಾರೆ ಅಂತಹ ಯಾವುದಾದರೂ ವಿಚಾರವಿದ್ದರೆ ಅದನ್ನು ಗಮನದಲ್ಲಿಟ್ಟುಕೊಂಡು...

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಕಳೆದ ಆರು ತಿಂಗಳಿಂದಲೂ ಇದನ್ನೇ ಹೇಳುತ್ತಿದ್ದೀರಿ.

ಶ್ರೀ ಎಸ್.ಎಂ. ಯಾಹ್ಯಾ.—ಅದು ನನ್ನ ಗಮನಕ್ಕೆ ಈಗ ಬಂದಿದೆ.

ಶ್ರೀ ಎಂ ಪಿ. ವೆಂಕಟೇಶ್.—ಮಾನ್ಯ ಉಪಾಧ್ಯಕ್ಷರೇ, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಏನು ಕೈಗಾರಿಕಾ ನಿವೇಶನ ಇದೆ, ಪರಿಶಿಷ್ಟ ಜಾತಿ ಮತ್ತು ವರ್ಗದವರು ಅದನ್ನು ಬೇಕು ಎಂದು ಅರ್ಜಿಗಳನ್ನು ಹಾಕುತ್ತಿದ್ದಾರೆ ತಾವು ಕೈಗಾರಿಕೆಗಳನ್ನು ಮಾಡುತ್ತೇವೆ ಎಂದು ಹೇಳಿದರೂ ಕೂಡಾ ಅವರುಗಳಿಗೆ ನಿವೇಶನಗಳನ್ನು ಕೊಡುತ್ತಿಲ್ಲ. ಅದನ್ನು ಹರಾಜು ಹಾಕಬೇಕು ಎಂದು ಹೇಳಿ ಹರಾಜಿನಲ್ಲಿ ಕೊಡಬೇಕು ಎಂದು ಮಾಡುತ್ತಿದ್ದಾರೆ. ಹರಾಜನ್ನು ಹಾಕಿದರೆ ಹೊರದೇಶದವರು ಬಂದು ತೆಗೆದುಕೊಂಡು ಹೋಗುತ್ತಾರೆ.

ಇದಕ್ಕೆ ಬದಲು ನಮ್ಮ ಜನ ಏನು ಅರ್ಜಿಗಳನ್ನು ಹಾಕಿದ್ದಾರೆ, ಅವರಿಗೆ ಕೊಡುವುದಕ್ಕೆ ನೀವು ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಎಂ. ಯಾಹ್ಯಾ.— ಆ ಬಗ್ಗೆ ಸೂಕ್ತ ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ದಯಾನಂದರಾವ್.— ವೈಜ್ಞಾನಿಕ ಮತ್ತು ತಾಂತ್ರಿಕ ವಿದ್ಯಾಭ್ಯಾಸ ಪಡೆದಿರುವ ಯುವಕರಿಗೆ ಸೂಕ್ತ ಔದ್ಯೋಗಿಕ ತರಬೇತಿ ಕೊಟ್ಟು ಆ ಮೇಲೆ ಸಾಕಷ್ಟು ಧನ ಸಹಾಯ ಮತ್ತು ಸೂಕ್ತ ಸವಲತ್ತುಗಳನ್ನು ಒದಗಿಸಿ ಯುವ ಜನಾಂಗವು ಉದ್ಯೋಗ ಸಂಸ್ಥೆಗಳನ್ನು ಪ್ರಾರಂಭ ಮಾಡುವುದಕ್ಕೆ ಹಾಗೂ ಅದರ ಮೂಲಕ ವಿದ್ಯಾವಂತ ನಿರುದ್ಯೋಗಿಗಳಿಗೆ ಸಹಾಯಕವಾಗುವಂತೆ ಯಾವುದಾದರೂ ಯೋಜನೆಗಳನ್ನು ತಯಾರು ಮಾಡುತ್ತೀರಾ?

ಶ್ರೀ ಎಸ್. ಎಂ. ಯಾಹ್ಯಾ.— ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ಹೊಸ ಪಾಲಿಸಿಯಲ್ಲಿ ಅದಕ್ಕೆ ಒಂದು ಸ್ಥಾನ ಇದೆ. ಅಂಥವರಿಗೆ ನಾವು ಎನ್‌ಕರೇಜ್ ಮಾಡಬೇಕೆಂದಿದ್ದೇವೆ. ಮಾನ್ಯ ಸದಸ್ಯರು ಹೇಳಿದ ವಿಚಾರ ನಮ್ಮ ಹೊಸ ನೀತಿಯಲ್ಲಿ ಅಳವಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಸಚಿವರು ಬಾಯಿ ತುಂಬಾ ಕನ್ನಡವನ್ನು ಮಾತನಾಡುತ್ತಾರೆ. ಈ ಒಂದು ಪ್ರತೀಯನ್ನು ಇಟ್ಟುಕೊಂಡು ಬಂದಿದ್ದಕ್ಕೆ ಮೊಟ್ಟಮೊದಲು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅಂತೆಯೇ ನಮ್ಮ ಕಾನೂನು ಮತ್ತು ಸಂಸದೀಯ ಸಚಿವರಾದ ಶ್ರೀಯುತ ಮೊಯಿಲಿಯವರಿಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಇವರುಗಳು ಪ್ರೀತಿಪೂರ್ವಕವಾಗಿ ಕನ್ನಡವನ್ನು ಬಳಸುತ್ತಾರೆ. ಅಂಥ ಒಂದು ಪದ್ಧತಿಯನ್ನು ವಿಶೇಷವಾಗಿ ರೂಢಿಸಿಕೊಂಡಿದ್ದಾರೆ. ಮಾನ್ಯ ಯಾಹ್ಯಾರವರು ಹಿಂದೆ ಹಣಕಾಸಿನ ಸಚಿವರಾಗಿ ಇದ್ದಾಗಲೂ ಕೂಡ ಅದೇ ರೀತಿಯಲ್ಲಿ ಬಾಯಿ ತುಂಬಾ ಕನ್ನಡವನ್ನು ಮಾತನಾಡುತ್ತಿದ್ದರು. ಅದಕ್ಕಾಗಿ ತಮಗೆ ಅಭಿನಂದನೆಗಳು. ಈಗ ತಮ್ಮಿಂದ ಗಾಳಿ, ಗುಡುಗು ಸಿಡಿಲು, ಮಿಂಚು ಎಲ್ಲಾ ಆಯಿತು. ಆದರೆ ಮಳೆ ಮಾತ್ರ ಬರಲೇ ಇಲ್ಲ. ತಾವುಗಳು ಮಳೆಯನ್ನು ಹೇಗೆ ಬರಿಸುತ್ತೀರಿ ಎಂದು ಹೇಳಬೇಕು. ಅಂತೆಯೇ ಮತ್ತೊಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಶೇಕಡಾ ೮೦ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಮೀಸಲಿಡುವ ವಿಚಾರದಲ್ಲಿ ತಾವುಗಳು ಏನೂ ಹೇಳಲಿಲ್ಲ. ಇದಕ್ಕಾಗಿ ಒಂದು ಕಾಯಿದೆಯನ್ನು ತಾವುಗಳು ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ ಯಾರು ಕಾರ್ಖಾನೆಗಳನ್ನು ತೆರೆಯುತ್ತಾರೆ, ಆಗ ಸ್ಥಳೀಯರಿಗೆ ಉದ್ಯೋಗವನ್ನು ಕೊಡುವ ಬಗ್ಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ಇನ್ನು ನನ್ನ ಸ್ವಕ್ಷೇತ್ರದ ವಿಚಾರ ಹೇಳುವುದಾದರೆ ನಮ್ಮದು ಗಡಿ ಪ್ರದೇಶ. ಅಲ್ಲಿ ವಿದ್ಯುತ್ ಇಲ್ಲ. ಸುಮ್ಮನೆ ಕಂಬಗಳು ಮಾತ್ರ ನಿಂತಿವೆ. ಈ ಬಗ್ಗೆ ತಾವುಗಳು ವಿಶೇಷವಾದಂಥ ಗಮನಹರಿಸಬೇಕು. ಜೊತೆಗೆ ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ ಪ್ರದೇಶಗಳಿಗೂ ನಮ್ಮೊಂದಿಗೆ ಬರುತ್ತವೆ. ಚಾಮರಾಜನಗರದಲ್ಲಿ ದೀಪವೇ ಇರಲಿಲ್ಲ. ಕಳೆದ ಒಂದು ವಾರದಿಂದ ಅಲ್ಲಿ ದೀಪ ಇಲ್ಲ ವಿದ್ಯುಚ್ಛಕ್ತಿ ಇಲ್ಲದೇ ಕುಡಿಯುವ ನೀರು ಕೂಡ ಇಲ್ಲವಾಗಿದೆ. ಈ ಬಗ್ಗೆ ತಾವು ಸೂಕ್ತ ಕ್ರಮವನ್ನು ಸಕಾಲದಲ್ಲಿ ತೆಗೆದುಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.— ಗಡಿ ಪ್ರದೇಶದಲ್ಲಿ ಮಾನ್ಯ ಸದಸ್ಯರುಗಳು ಹೇಳುತ್ತಿರುವ ಸಮಸ್ಯೆಗಳು ಇವೆ. ಅದು ನಿಜವಾಗಿದೆ. ಇನ್ನು ಮುಂದೆ ಅಲ್ಲಿ ಈ ಸಮಸ್ಯೆಗಳನ್ನು ಪರಿಹರಿಸ ಬಹುದೆಂದು ಒಂದು ಯೋಜನೆ ಮಾಡಬೇಕಾಗುತ್ತದೆ. ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಮಾಡ ಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ಇನ್ನು ೮೦ ಪರ್‌ಸೆಂಟ್‌ನಷ್ಟು ಉದ್ಯೋಗವನ್ನು ಕನ್ನಡಿಗರಿಗೆ ಕೊಡುವ ವಿಚಾರದಲ್ಲಿ ಹೇಳಿದ್ದೀರಿ ಇದು ಕಾನೂನು ಪ್ರಕಾರ ಆಗುತ್ತದೋ ಇಲ್ಲವೋ ಹಾಗೂ ಸಂವಿಧಾನಾತ್ಮಕವಾಗಿ ಅದು ಬರುತ್ತದೋ ಎಂದು ಗೊತ್ತಿಲ್ಲ. ಇಲ್ಲೀಗಲ್ ಆಗಿ ಯಾವುದನ್ನೂ ಮಾಡುವಂತಿಲ್ಲವಲ್ಲ? ಈ ಬಗ್ಗೆ ಕಾನೂನು ವಿಚಾರ ಇರಲಿ, ಇಲ್ಲದಿರಲಿ, ಬೇರೆ ರೀತಿಯಿಂದ ಇದನ್ನು ಎಷ್ಟರಮಟ್ಟಿಗೆ ಮಾಡಲಿಕ್ಕೆ ಸಾಧ್ಯ ಎಂದು ವಿಚಾರ ಮಾಡುತ್ತೇನೆ. ಬೇರೆ ರೀತಿಯ ಹಲವು ನ್ಯಾಯಬದ್ಧ ಮಾರ್ಗಗಳನ್ನು ಅನುಸರಿಸಬಹುದು. ಆ ಬಗ್ಗೆ ತಾವುಗಳು ನನ್ನ ಬಾಯಿಯಿಂದ ಇಲ್ಲಿ ಹೇಳಿಸಿಕೊಳ್ಳುವುದು ಬೇಡ. ಈ ಬಗ್ಗೆ ಸಕಾಲದಲ್ಲಿ ಎಲ್ಲವನ್ನೂ ಮಾಡಿ ಕೊಡುತ್ತೇವೆ.

ಶ್ರೀ ಎ. ಕೆ. ಅನಂತಕೃಷ್ಣ.— ಕಾರ್ಖಾನೆಗಳ ಪ್ರೈವೇಟೈಸೇಶನ್ ಬಗ್ಗೆ ಕೆಲವರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಆದರ ವಿಚಾರದಲ್ಲಿ ತಾವುಗಳು ಏನೂ ಹೇಳಲಿಲ್ಲ. ಆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳಬೇಕು. ಈ ಬಗ್ಗೆ ಯಾವುದೇ ಕಾರಣಕ್ಕೂ ತಾವು ಅವಕಾಶ ಮಾಡಿ ಕೊಡಬಾರದು. ಸಾರ್ವಜನಿಕ ಉದ್ಯಮಗಳನ್ನು ತಾವು ಇನ್ನೂ ಬಲಪಡಿಸಬೇಕು.
ಇಂಡಸ್ಟ್ರಿ ಅಂಡ್ ಕಾಮರ್ಸ್ ಇಲಾಖೆಯಲ್ಲಿ ೮೮ ಅಸಿಸ್ಟೆಂಟ್ ಡೈರೆಕ್ಟರ್ಸ್ ಹುದ್ದೆಗಳು ಖಾಲಿ ಇವೆ. ಇದರ ಜೊತೆಗೆ ಅಲ್ಲಿ ಪ್ರೊಮೋಷನ್‌ಗೆ ಸಾಕಷ್ಟು ಅವಕಾಶ ಇಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯ.—ಕೆಲವು ಕಡೆ ಈಗ ಪ್ರೊಮೋಷನ್ ಕೊಡಲಾಗುತ್ತಿದೆ. ಅದು ಹೆಚ್ಚಾಗುತ್ತಿದೆ. ಈ ಬಗ್ಗೆ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ಇದನ್ನೆಲ್ಲಾ ಸರಿಪಡಿಸಲು ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಒಟ್ಟಾರೆ ಅವಲೋಕಿಸಿದಾಗ ನಮ್ಮ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳು ರೋಗಗ್ರಸ್ತವಾಗಲು ಮತ್ತು ಅಧೋಗತಿಗೆ ಇಳಿಯಲು ಐಎಎಸ್ ಆಫೀಸರ್ಸ್‌/ಅನ್ನು ನೇಮಕ ಮಾಡುವುದರಿಂದ ಎಂದು ಗೊತ್ತಾಗುತ್ತದೆ. ನಮ್ಮಲ್ಲಿ ವಿಶ್ವೇಶ್ವರಯ್ಯನವರು ಹುಟ್ಟಿದಂಥ ಈ ನಾಡಿನಲ್ಲಿ ಅನೇಕ ಬುದ್ಧಿವಂತ ಇಂಜಿಯರುಗಳಿಗೆ, ತಂತ್ರಜ್ಞರಿಗೆ ಕೊರತೆ ಇಲ್ಲ. ಇಂಥವರನ್ನು ಈ ಸಂಸ್ಥೆಗಳ ಎಂ.ಡಿ. ಆಗಿ, ಚೇರ್ಮನ್ ಆಗಿ ಮಾಡಿದರೆ ಒಳ್ಳೆಯದಾಗುತ್ತದೆ. ಈ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೋ ಎಂದು ತಿಳಿಸಬೇಕು ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಬಹಳ ದೊಡ್ಡ ಸಮಸ್ಯೆ. ಹಿಂದಿನ ಇಂಡಸ್ಟ್ರಿ ಮಂತ್ರಿಗಳೂ ಸಹ ಬಹಳ ಹುರುಪಿನಿಂದ ಹೇಳುತ್ತಿದ್ದರು. ಏನೆಂದರೆ ಐಎಎಸ್ ಆಫೀಸರ್ಸ್‌ನ್ನು ತೆಗೆದು ಆ ಜಾಗದಲ್ಲಿ ತಜ್ಞರನ್ನು ಹಾಕಿಬಿಡುತ್ತೇವೆ ಎಂದು, ಆದರೆ ಏತಕ್ಕೆ ಇನ್ನೂ ಆಗಲಿಲ್ಲ. ಹೊರಗಡೆಯಿಂದ ತಂದರೂ ಸಹ ಬಹಳಷ್ಟು ತೊಂದರೆಯಾಗುತ್ತದೆ ಬಂದವರು ೨-೩ ವರ್ಷಗಳು ಮಾತ್ರ ಇರಬಹುದು. ಅದಕ್ಕಾಗಿ ಅವರು ನಾಳೆ ಆನ್ಸರೆಬಲ್ ಆಗದಿರಬಹುದು. ಇಂತಹ ಅನೇಕ ತೊಂದರೆಗಳಿವೆ. ಐಎಎಸ್, ಕೆಎಎಸ್, ಪೋಲೀಸರಲ್ಲಿ ಹಾಗೂ ಮತ್ತಿತರ ವಿಭಾಗಗಳಲ್ಲಿ ನಿಜವಾಗಿಯೂ ಇಂಡಸ್ಟ್ರಿಗಳ ಬಗ್ಗೆ, ಇವುಗಳ ಅಭಿವೃದ್ಧಿ ಬಗ್ಗೆ ಆಸಕ್ತಿಯಿರುವ ಜನರಿದ್ದಾರೆ. ಅಂಥವರೆನ್ನೆಲ್ಲಾ ಸೇರಿಸಿ ಒಂದು ಪೂಲ್ ಮಾಡಿಕೊಂಡು, ಅವರ ಸೇವೆಯನ್ನು ಬಳಸಿ ಕೊಳ್ಳುವುದರ ಜೊತೆಗೆ ಅವರು ಆನ್ಸರೆಬಲ್ ಮಾಡುವ ರೀತಿಯಲ್ಲಿ ಮಾಡಬೇಕೆಂಬುದು ಸರ್ಕಾರದ ಗಮನದಲ್ಲಿದೆ.

ಶ್ರೀ ಸಿ. ಬೈರೇಗೌಡ.—ನೀವೇ ಕೊಟ್ಟಿರುವ ಅಂಕಿಅಂಶದ ಪ್ರಕಾರ ಕೋಲಾರ ಜಿಲ್ಲೆ ಪರ್‌ಕ್ಯಾಪಿಟಾ ಇನ್‌ಕಮ್‌ನಲ್ಲಿ ಕೊನೇ ಸ್ಥಾನದಲ್ಲಿದೆ. ಎಲೆಕ್ಟ್ರಾನಿಕ್ ನಗರಗಳೆಂದು ಧಾರವಾಡ ಮತ್ತು ಮೈಸೂರನ್ನು ಅಭಿವೃದ್ಧಿ ಮಾಡುವುದಾಗಿ ಹೇಳಿದಿರಿ. ಆದರೆ ನಮ್ಮ ಕೋಲಾರ ಕರ್ನಾಟಕದಲ್ಲಿದೆ ಎಂದು ನಿಮಗೆ ಮರೆತು ಹೋಗಿದೆಯೇ ? ಕೋಲಾರದಲ್ಲೂ ಇಂತಹ ಒಂದು ಪ್ರೊಜೆಕ್ಟನ್ನು ಶುರು ಮಾಡುತ್ತೀರಾ ? ಆ ಮೇಲೆ ಲೋಕಾಯುಕ್ತದ ಕಡೆಯಿಂದ ಎನ್‌ಜಿಇಎಫ್ ಅವ್ಯವಹಾರವನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಕೋಲಾರ ಬೆಂಗಳೂರಿಗೆ ಬಹಳ ಹತ್ತಿರದಲ್ಲಿದೆ. ಆದ್ದರಿಂದ, ಬೆಂಗಳೂರಿಗೆ ಏನೆಲ್ಲಾ ಸಿಗುತ್ತದೋ ಅದು ಕೋಲಾರಕ್ಕೂ ಸಿಕ್ಕಿದ ಹಾಗೆ.

ಉಪಾಧ್ಯಕ್ಷರು.—ಈಗ ರೇಷ್ಮೆ ಖಾತೆ ಸಚಿವರ ಉತ್ತರಿಸುವರು.

ಶ್ರೀ ಆತ್ಮಾನಂದ ಎಂ. ಎಸ್. (ರೇಷ್ಮೆ ಇಲಾಖೆ ರಾಜ್ಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ನನ್ನ ರೇಷ್ಮೆ ಖಾತೆ ಬಗ್ಗೆ ಅನುಭವಿಗಳಾದ ಸದಸ್ಯರು ಮಾತನಾಡಿ ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆ ನನ್ನ ಅಭಾರವನ್ನು ಸಲ್ಲಿಸುತ್ತೇನೆ. ಈ ಎಲ್ಲಾ ಸಲಹೆಗಳನ್ನು ರೇಷ್ಮೆ ಇಲಾಖೆ ಅಭಿವೃದ್ಧಿಯಲ್ಲಿ ಬಳಸಿ ರೈತರ ಸಮಗ್ರ ಅಭಿವೃದ್ಧಿಗೆ ನಾನು ಪ್ರಯತ್ನ ಮಾಡುತ್ತೇನೆ. ಒಂದೆರಡು ಪ್ರಮುಖ ಅಂಶಗಳನ್ನು ಎಲ್ಲರೂ ಹೇಳಿದ್ದಾರೆ. ಅವೆಂದರೆ ಬೆಳೆಗಾರರಿಗೆ ಉತ್ತಮ ಮೊಟ್ಟೆ ಒದಗಿಸುವುದು. ನಮಗೆಲ್ಲ ಗೊತ್ತಿರುವಂತೆ ನಮ್ಮ ರಾಜ್ಯದಲ್ಲಿ ೧.೪೭ ಲಕ್ಷ ಹೆಕ್ಟಾರ್‌ನಲ್ಲಿ ಹಿಪ್‌ನೇರಳೆ ಬೆಳೆ ಇದೆ. ಅದಕ್ಕೆ ೨೩ ಕೋಟಿ ಮೊಟ್ಟೆ ಬೇಕು. ಇಷ್ಟನ್ನು ಒದಗಿಸಲು ೭೭ ಸರ್ಕಾರಿ ಗ್ರೈನೇಜ್‌ಗಳು, ೬ ಕೇಂದ್ರ ರೇಷ್ಮೆ ಮಂಡಳಿ ಗ್ರೈನೇಜ್‌ಗಳು ಹಾಗೂ ೬೪೪ ಖಾಸಗಿ ಮೊಟ್ಟೆ ಉತ್ಪಾದಕರಿದ್ದಾರೆ. ಈ ಖಾಸಗಿಯವರು ಹೆಚ್ಚು ವೈಜ್ಞಾನಿಕವಾಗಿ ಮೊಟ್ಟೆ ಉತ್ಪಾದನೆ ಮಾಡುವುದರ ಕಡೆ ಗಮನಕೊಟ್ಟು, ನಮ್ಮ ಸರ್ಕಾರಿ ಗ್ರೈನೇಜ್‌ಗಳು ಪೂರ್ಣ ಸಾಮರ್ಥ್ಯದಲ್ಲಿ ಮೊಟ್ಟೆ ಉತ್ಪಾದಿಸಲು ಮತ್ತು ಇರುವ ಕೊರತೆಯನ್ನು ನೀಗಿಸಲು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆಂದು ಹೇಳುತ್ತೇನೆ.

ಈ ಹಿಂದೆ ಗಮನ ಸೆಳೆಯುವ ಸೂಚನೆಗಳು ಮತ್ತು ಪ್ರಶ್ನೆಗಳ ಮೂಲಕ ಈ ಒಂದು ಮೊಟ್ಟೆಯ ಅಭಾವದ ಒಂದು ಪ್ರಶ್ನೆ ಬಂದಾಗ ಮೂಲಭೂತವಾಗಿ ಮೈಸೂರು ಬಿತ್ತನೆ ತಳಿ ಪ್ರದೇಶದಲ್ಲಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಬೇಕು ಹಾಗೂ ಹುಳು ಸಾಕಣೆ ಮನೆಯನ್ನು ಮಾಡಿಕೊಡಬೇಕು ಎಂದು ಅನೇಕ ಸದಸ್ಯರು ಸಲಹೆಯನ್ನು ಮಾಡಿದರು. ಆ ಒಂದು ಸಲಹೆಯ ಪ್ರಕಾರ ಈ ಒಂದು ಮೈಸೂರು ತಳಿ ಬಿತ್ತನೆ ಪ್ರದೇಶದಲ್ಲಿ ನೀರಾವರಿ ಸೌಲಭ್ಯವನ್ನು ಹಾಗೂ ರೈತರಿಗೆ ಹುಳು ಸಾಕಣೆ ಮನೆಯನ್ನು ಕಟ್ಟಿಕೊಟ್ಟು, ಯಾವತ್ತೂ ಕೂಡ ಬರತಕ್ಕಂಥ ಏಪ್ರಿಲ್, ಮೇ, ಜೂನ್‌ನಲ್ಲಿ ಮಳೆಯ ಅಭಾವದಿಂದ ಕೊರತೆ ಬೀಳುತ್ತದೆಯೋ, ಅದನ್ನು ನೀಗಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು

ಹೇಳುತ್ತೇನೆ. ಹಾಗೂ ಈ ಒಂದು ಬಿತ್ತನೆಯ ಆವಶ್ಯಕತೆ, ಬಿತ್ತನೆಯ ಗುಣಮಟ್ಟ ಹಾಗೂ ಆ ಒಂದು ಬಿತ್ತನೆಗೆ ಸಂಬಂಧಪಟ್ಟ ಸಲಹೆಗಳನ್ನು ಕೊಡುವುದಕ್ಕೆ ರಾಜ್ಯಮಟ್ಟದಲ್ಲಿ ಒಂದು ಈ ಬಿತ್ತನಾ ಸಲಹಾ ಸಮಿತಿಯನ್ನು ಮಾಡಬೇಕು ಎನ್ನುವ ಆಶಯವನ್ನು ಇಟ್ಟುಕೊಂಡು, ಆ ಒಂದು ಸಮಿತಿಯಲ್ಲಿ ಈ ರೇಷ್ಮೆ ಪ್ರದೇಶದಿಂದ ಬರತಕ್ಕಂಥ ಶಾಸಕರು ಹಾಗೂ ಪರಿಣತರನ್ನೊಳಗೊಂಡ ಸಮಿತಿಯನ್ನು ಮಾಡಿ ಕಾಲಾನುಕಾಲಕ್ಕೆ ಈ ಬಗ್ಗೆ ಸಲಹೆಯನ್ನು ಕೊಡುವುದರಲ್ಲಿ ಅವರು ನಮಗೆ ಸಹಾಯವಾಗುವ ರೀತಿಯಲ್ಲಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಶೈತ್ಯಾಗಾರದಲ್ಲಿ ಈ ಮೊಟ್ಟೆಯನ್ನು ಸ್ಟೋರ್ ಮಾಡಲು ಸುಮಾರು ೧೩ ಶೈತ್ಯಾಗಾರಗಳು ಬರುತ್ತವೆ. ಆಗಸ್ಟ್ ತಿಂಗಳಲ್ಲಿ ಅದು ಪ್ರಾರಂಭವಾಗಿ ಈ ಒಂದು ಅಭಾವ ಇರುವಾಗ ಶೈತ್ಯಾಗಾರದಲ್ಲಿ ಮೊಟ್ಟೆಯನ್ನು ಸಹಾ ಸ್ಟೋರ್ ಮಾಡಿ ಅದನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಮಾರುಕಟ್ಟೆ ಪ್ರದೇಶ ಏನು ಇದೆ, ಅದರ ಬಗ್ಗೆ ಬಹಳ ಟೀಕೆಗಳು ಬಂತು. ಈ ಶೋಷಣೆಯನ್ನು ತಪ್ಪಿಸಬೇಕು ಎಂದು ಹೇಳಿ ಅನೇಕ ಸದಸ್ಯರು ಸಲಹೆಯನ್ನು ಮಾಡಿದ್ದಾರೆ. ಈಗ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಸಮಿತಿ ಎಂದು ಇದೆ. ರೈತರನ್ನು ಒಳಗೊಂಡ ಹಾಗೂ ರೀಲರ್‌ಗಳನ್ನು ಒಳಗೊಂಡ ಪ್ರತಿನಿಧಿಗಳು ಆ ಮಾರುಕಟ್ಟೆ ಸಮಿತಿಯಲ್ಲಿದ್ದಾರೆ. ಆ ಮಾರುಕಟ್ಟೆ ಸಮಿತಿಗಳು ಈಗ ಕೆಲಸವನ್ನು ಮಾಡುತ್ತಿಲ್ಲ. ಆ ಮಾರುಕಟ್ಟೆ ಸಮಿತಿಗಳನ್ನು ಕೂಡಾ ಹೆಚ್ಚು ಸಮರ್ಥನೀಯವಾಗಿ ಕೆಲಸ ಮಾಡಬೇಕು ಹಾಗೂ ಪ್ರತಿನಿಧಿ ಸ್ಥಾನದಲ್ಲಿ ಇರತಕ್ಕಂಥ ರೈತರುಗಳಾಗಲೀ ರೀಲರ್ಸ್‌ಗಳಾಗಲೀ ಅವರನ್ನು ಹೆಚ್ಚು ಮಾಡಿ ನಮ್ಮ ಶಾಸಕರನ್ನೂ ಸಹಾ ಆ ಸಮಿತಿಯ ವ್ಯಾಪ್ತಿಗೆ ತಂದು ಮಾರುಕಟ್ಟೆಯಲ್ಲಿ ರೈತರುಗಳಿಗೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸುವ ದಿಸೆಯಲ್ಲಿ ಕೆಲಸವನ್ನು ಮಾಡಬೇಕು ಎಂದು ಇದ್ದೇವೆ. ಈ ರೀತಿಯ ಒಂದು ಆಶಯವನ್ನು ಇಲಾಖೆಯು ಹೊಂದಿದೆ, ಹಾಗೂ ತೂಕದಲ್ಲಿ ಮೋಸ ಎಂದು ಬಹಳ ಜನ ಹೇಳಿಕೊಂಡು ಬರುತ್ತಿದ್ದಾರೆ. ಈಗ ಬೆಂಗಳೂರಿದ ಬೈವೋಲ್ಟಿನ್ ಮಾರುಕಟ್ಟೆಯಲ್ಲಿ ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್ ಇದೆ. ಅದು ಚೆನ್ನಾಗಿ ಕೆಲಸ ಮಾಡುತ್ತಿದೆ. ಅದೇ ರೀತಿ ವೇಯಿಂಗ್ ಮೆಷಿನನ್ನು ಈಗ ೩೦-೬-೭೦ರಿಂದ ರಾಮನಗರದಲ್ಲಿ ಹಾಕಿದ್ದೇವೆ. ಆ ಮೆಷಿನ್ ಹೇಗೆ ಕೆಲಸವನ್ನು ಮಾಡುತ್ತದೆ ಎನ್ನುವುದನ್ನು ನೋಡಿಕೊಂಡು ಮುಂದೆ ಎಲ್ಲಾ ಮಾರುಕಟ್ಟೆಗಳಲ್ಲಿಯೂ ಈ ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನನ್ನು ಹಾಕುವ ಒಂದು ಆಶಯವನ್ನು ಇಟ್ಟುಕೊಂಡಿದ್ದೇವೆ. ಮಾರುಕಟ್ಟೆಗಳಲ್ಲಿ ಅನೇಕ ಕಡೆ ಸ್ಥಳಾಭಾವ ಇದೆ, ಮಾರುಕಟ್ಟೆಗಳ ಸಂಖ್ಯೆ ಹೆಚ್ಚಬೇಕು ಎಂದು ಹೇಳಿದ್ದಾರೆ. ವಿಶ್ವಬ್ಯಾಂಕ್ ಎರಡನೇ ಹಂತದ ಯೋಜನೆಯಲ್ಲಿ ಗೂಡಿನ ಮಾರುಕಟ್ಟೆಗೆ ಹೆಚ್ಚಿನ ವ್ಯವಸ್ಥೆಯನ್ನು ಕಲ್ಪಿಸಲಿಕ್ಕೆ ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಚಾಮರಾಜನಗರ, ಟಿ. ನರಸೀಪುರ. ಕೋಲಾರ ಜಿಲ್ಲೆಯ ಚಿಂತಾಮಣಿ, ಶಿಡ್ಲಘಟ್ಟ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ಹಾಗೂ ಚನ್ನಪಟ್ಟಣಗಳಲ್ಲಿ ಹೊಸ ಮಾರುಕಟ್ಟೆಗಳನ್ನು ಕೊಡುವ ಒಂದು ಪ್ರಯತ್ನವೂ ಇದೆ. ಇದಲ್ಲದೇ ಬೈವೋಲ್ಟಿನ್ ಬಿತ್ತನೆಗೆ ಮಂಡ್ಯ ಜಿಲ್ಲೆಯ ಕೆ. ಆರ್. ಪೇಟೆ ಉತ್ತರ ಕನ್ನಡ ಜಿಲ್ಲೆಯ ಸಿರಸಿಯಲ್ಲಿಯೂ ಕೂಡಾ ಗೂಡು ಮಾರುಕಟ್ಟೆಗಳನ್ನು ಕಟ್ಟುವ ಒಂದು ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳುತ್ತೇನೆ. ರೇಷ್ಮೆ ಬಿಚ್ಚಣಿಕೆದಾರರ ಸಂಘಗಳು ಸುಮಾರು ೨೩ ಇತ್ತು. ಇದರಲ್ಲಿ ೧೭ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಣವನ್ನು ಮರುಪಾವತಿ ಮಾಡದೇ ಇರತಕ್ಕಂಥ ಸ್ಥಿತಿಯಲ್ಲಿದ್ದು ಈ ತರಹ ಸಹಕಾರ ಸಂಘದ ಸದಸ್ಯರು ತೆಗೆದುಕೊಳ್ಳುವ ಸಾಲಗಳನ್ನು ಮರುಪಾವತಿ ಮಾಡಲು ಅನುವು ಮಾಡಿಕೊಡಲು ಬಡ್ಡಿ ಸಹಾಯಧನ ಯೋಜನೆಯನ್ನು ಕೂಡಾ ನಾವು ರೂಪಿಸಿಕೊಂಡಿದ್ದೇವೆ. ಈ ಹಣ ಪಡೆದ ರೀಲರ್ಸ್‌ಗಳು ಮೂರು ತಿಂಗಳೊಳಗೆ ಸಾಲವನ್ನು ಹಿಂತಿರುಗಿಸಬೇಕು ಎಂದು ಹೇಳಿ ಒಂದು ಕಂಡೀಷನನ್ನು ಹಾಕಿ ಆ ಒಂದು ಸೌಲಭ್ಯವನ್ನು ಒದಗಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದೇ ರೀತಿ ತರಬೇತಿ ಬಗ್ಗೆಯೂ ಕೂಡಾ ಹೇಳಿದರು. ಈಗಾಗಲೇ ರಾಜ್ಯದಲ್ಲಿ ನಾಲ್ಕು ತರಬೇತಿ ಶಾಲೆಗಳು ಚನ್ನಪಟ್ಟಣ, ಹಾಸನ, ಕುದೇರು, ತೋರಹುಣಸೆಗಳಲ್ಲಿ ಇವೆ. ಇವುಗಳ ಜೊತೆಗೆ ಧಾರವಾಡ ಮತ್ತು ಕೆ. ಆರ್. ಪೇಟೆಯಲ್ಲಿ ಸಹ ಪ್ರಾರಂಭಿಸಬೇಕು ಎಂದು ನಾವು ಅಂದುಕೊಂಡಿದ್ದೇವೆ.

೮-೦೫ ಪಿ. ಎಂ.

ಇನ್ನು ಎಂ ೫ ತಳಿಯನ್ನು ಹೆಚ್ಚು ಹೆಚ್ಚಾಗಿ ಉತ್ಪಾದನೆ ಮಾಡಬೇಕು ಎಂದು ನಮ್ಮ ಶಾಸಕರಲ್ಲಿ ಅಭಿಪ್ರಾಯಪಟ್ಟರು. ಅದೇ ರೀತಿ ಮಳೆ ಆಧಾರಿತ ಪ್ರದೇಶವನ್ನು ನೀರಾವರಿ ಪ್ರದೇಶಕ್ಕೆ ಒಳಪಡಿಸಬೇಕು ಎಂಬುದು ಅವರ ಆಶಯವಾಗಿತ್ತು. ಬೇಡಿ ಎರಡನೆ ಹಂತದಲ್ಲಿ ಸುಮಾರು ೫೦೦ ಕೊಳವೆ ಬಾವಿಗಳನ್ನು ತೆಗೆಯಲು ೧೭೫ ಲಕ್ಷ ರೂಪಾಯಿಗಳ ಸಾಲ ಕೊಡುವ ಯೋಜನೆ ಇದ್ದು, ಈ ೫೦೦ ಬಾವಿಗಳು ಪೂರ್ತಿಯಾದ ನಂತರ ಸಹ ಇನ್ನೂ ಹೆಚ್ಚಿನ ಬಾವಿಗಳನ್ನು ತೆಗೆಯಲು ಕಾರ್ಯಕ್ರಮ ರೂಪಿಸಿ

ಲಾಗಿದೆ. ಮತ್ತು ಈ ಚಾಕಿ ಕೇಂದ್ರಗಳ ಬಗ್ಗೆ ಮತ್ತು ಹೂಜಿ ನೊಣದ ಒಂದು ಹಾವಳಿ ತಡೆಗಟ್ಟುವ ಬಗ್ಗೆ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಹೇಳಿ, ಆದರ ಸಲಕರಣೆಗಳ ಬಗ್ಗೆ ಇನ್ನೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಅವನ್ನೆಲ್ಲ ಕಾರ್ಯರೂಪಕ್ಕೆ ತರುವಲ್ಲಿ ನಾನು ಶ್ರದ್ಧೆವಹಿಸಿ ಪ್ರಯತ್ನಪಡುತ್ತೇನೆ. ವಿಶ್ವ ಬ್ಯಾಂಕಿನ ಎರಡನೇ ಹಂತದ ಯೋಜನೆಯ ಸೂಕ್ಷ್ಮ ಪರಿಚಯವನ್ನು ನಾನಾದರೂ ಹೇಳಲಿಕ್ಕೆ ಬಯಸುತ್ತೇನೆ. ಈ ಮೊದಲನೆ ಹಂತದ ಯೋಜನೆ ಆದಮೇಲೆ ಸುಮಾರು ೧೧೫.೩ ಕೋಟಿಗಳಲ್ಲಿ ಈ ಎರಡನೇ ಯೋಜನೆ ಪ್ರಾರಂಭವಾಗುತ್ತದೆ.

" ಈ ಯೋಜನೆಯ ಮುಖ್ಯ ಮೂಲ ಉದ್ದೇಶಗಳೆಂದರೆ.—

೧) ಯೋಜನೆಯ ೭ನೇ ವರ್ಷದ ಅಂತ್ಯದಲ್ಲಿ ವಾರ್ಷಿಕ ೩,೩೪೬ ಟನ್‌ಗಳಷ್ಟು ಕಚ್ಚಾ ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸುವುದು.

೨) ಪ್ರತಿ ಹೆಕ್ಟೇರಿಗೆ ೬೨೫ ಕಿ. ಗ್ರಾಂ. ಇರುವ ಉತ್ಪಾದಕತೆಯನ್ನು ೭೫೦ ಕಿ. ಗ್ರಾಂಗಳಿಗೆ ನೀರಾವರಿ ಆಸರೆಯಲ್ಲಿಯೂ ಹಾಗೂ ಮಳೆ ಆಶ್ರಯದಲ್ಲಿ ಪ್ರತಿ ಹೆಕ್ಟೇರಿಗೆ ೨೦೦ ಕಿ. ಗ್ರಾಂ ಗೂಡುಗಳ ಉತ್ಪಾದಕತೆಯನ್ನು ೨೫೦ ಕಿ. ಗ್ರಾಂ. ಗಳಿಗೆ ಹೆಚ್ಚಿಸುವುದು. ನೀರಾವರಿ ಆಸರೆಯಲ್ಲಿ ಈಗ ಹಾಲಿ ಇರುವ ೯.೫ ರೆಂಡಿಟ್ಟಾವನ್ನು ೮.೫ ರೆಂಡಿಟ್ಟಾಕ್ಕೂ ಮಳೆಯಾಶ್ರಯದಲ್ಲಿ ಈಗ ಹಾಲಿ ಇರುವ ೧೨ ರೆಂಡಿಟ್ಟಾವನ್ನು ೧೦.೫ ರೆಂಡಿಟ್ಟಾಕ್ಕೂ ಅನುಕ್ರಮವಾಗಿ ಇಳಿಸುವುದು,

ಈ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಯೋಜನೆಯಡಿಯಲ್ಲಿ ೬೨ ಕೃಷಿ ಕ್ಷೇತ್ರಗಳನ್ನು ೬೧ ಮತ್ತು ೬೨ ಬಿತ್ತನೆ ಕೋಠಿಗಳನ್ನು ಚಾಕಿ ಸಾಕಾಣಿಕಾ ಕೇಂದ್ರಗಳನ್ನು ಮತ್ತು ನೂರು ಬಿಚ್ಚಾಣಿಕೆಯ ತಾಂತ್ರಿಕ ಸೇವಾ ಕೇಂದ್ರಗಳನ್ನು ಸದೃಢವಾಗಿ ಬಲಪಡಿಸಲು ಯೋಜಿಸಲಾಗಿದೆ. ಅಲ್ಲದೆ ೧೫,೦೦೦ ಹೆಕ್ಟೇರ್ ಭೂಮಿಯಲ್ಲಿ ಹಿಪ್ಪುನೇರಳೆಯನ್ನು ಹೊಸದಾಗಿ ನಾಟಿ ಮಾಡಿಸುವುದು.

೩) ರೇಷ್ಮೆ ನೂಲಿನ ಮತ್ತು ರೇಷ್ಮೆ ಜವಳಿಗಳ ಗುಣಮಟ್ಟವನ್ನು ಉತ್ತಮ ಪಡಿಸಲು ಆಧುನಿಕ ಸಂಸ್ಕರಣಾ ಸೌಲಭ್ಯಗಳನ್ನು ಒದಗಿಸುವುದು.

೪) ಸ್ಥಳೀಯ ಸಂಶೋಧನೆಯನ್ನು ಬಲಪಡಿಸುವುದು.

ಈ ಯೋಜನೆಯ ಅಂದಾಜು ವೆಚ್ಚ ರೂ. ೧೧೫.೩೦ ಕೋಟಿಗಳು. ಈ ಯೋಜನೆಯನ್ನು ಐದು ವರ್ಷಗಳಿಗೆ ವಿಸ್ತರಿಸಲಾಗಿದೆ.

ಈ ಯೋಜನೆಯನ್ನು ಕಾರ್ಯಗತ ಗೊಳಿಸುವುದರಿಂದ ವಾರ್ಷಿಕವಾಗಿ ೨,೭೧,೫೦೧ ಜನರಿಗೆ ಅದರಲ್ಲೂ ಗ್ರಾಮಾಂತರ ಜನತೆಗೆ ಉದ್ಯೋಗಾವಕಾಶ ದೊರಕುವುದು. ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ ೨ನೇ ಹಂತದಲ್ಲಿ ಈ ಕೆಳಕಂಡಂತೆ ಸಾಲದ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

	ಉದ್ದೇಶಗಳು	ಭೌತಿಕ	ಆರ್ಥಿಕ
೧)	ಹಿಪ್ಪುನೇರಳೆ ನಾಟಿ ಮಾಡುವುದು	೧೩೧೧೧ ಎಕರೆ	೨೬೨.೨ ಲಕ್ಷ
೨)	ಹುಳು ಸಾಕುವ ಸಲಕರಣೆ	೧೩೧೧೧ ಎಕರೆ	೬೬೮.೬ ಲಕ್ಷ
೩)	ಹುಳು ಸಾಕುವ ಮನೆ ಕಟ್ಟಲು	೧೮೭೫೦ ಸಂಖ್ಯೆ	೩೭೫೦.೦ ಲಕ್ಷ
೪)	ಕಾಟೇಜ್ ಬೇಸಿನ್	೧೦೨	೮೬.೮
೫)	ಸುಧಾರಿತ ಚರಕಾ	೧೦೦	೨೭.೮
೬)	ನೀರಾವರಿ ಬಾವಿ	೫೦೦	೧೭೫.೦
೭)	ಖಾಸಗಿ ರೇಷ್ಮೆ ಮೊಟ್ಟೆ ತಯಾರಿಕೆಗೆ ಬೇಕಾದ ಅನುಕೂಲತೆಗಳನ್ನು ಒದಗಿಸುವುದು.	೧೦೫	೨೫೭.೯೮

ಈ ಎರಡನೆ ಹಂತದ ಯೋಜನೆಗೆ ಕರ್ನಾಟಕದ ಎಲ್ಲ ಜಿಲ್ಲೆಗಳು ಸೇರ್ಪಡೆಯಾಗಿದ್ದು ಮೇಲೆ ವಿವರಿಸಿದ ಯೋಜನೆಗಳಿಗೆ ಸಾಲ ನೀಡಲು ರಾಜ್ಯದಲ್ಲಿನ ಸಹಕಾರ ಬ್ಯಾಂಕುಗಳು ಗ್ರಾಮೀಣ ಬ್ಯಾಂಕು

ಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳನ್ನು ಬಳಸಿಕೊಳ್ಳಲಾಗಿದೆ. ಈ ಯೋಜನೆಗಳಿಗೆ ನಬಾರ್ಡ್ ಸಂಸ್ಥೆಯು ಪುನರ್‌ಧನ ಸಹಾಯ ನೀಡಲು ಮುಂದೆ ಬಂದಿರುತ್ತದೆ.

ಮೇಲೆ ಹೇಳಿದ ಕೃಷಿ ಅಭಿವೃದ್ಧಿ ಸಾಲಗಳ ಜೊತೆಗೆ ೨ನೇ ಹಂತದ ಯೋಜನೆಯಲ್ಲಿ ೬೦ ಟ್ವಿಸ್ಟಿಂಗ್ ಘಟಕಗಳನ್ನು ಸ್ಥಾಪಿಸುವ ಗುರಿಯನ್ನು ಹಾಕಿಕೊಂಡಿದ್ದಾಗಿದೆ. ಈ ಘಟಕಗಳಿಗೆ ಗ್ರಾಮೀಣ ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಸಾಲಗಳನ್ನು ಒದಗಿಸಿದ್ದು ಈ ಸಂಸ್ಥೆಗಳಿಗೆ ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಪುನರ್‌ಧನ ಸಹಾಯ ನೀಡಲಿದೆ.''

ಇನ್ನೂ ಅನೇಕ ಸಮಿತಿಗಳನ್ನು ಮಾಡಬೇಕು ಎಂದು ನಮ್ಮ ಸದಸ್ಯರು ಅನೇಕರು ಸಲಹೆ ನೀಡಿದ್ದರು. ಈ ಹಿಂದೆ ರಾಜ್ಯ ಮಟ್ಟದಲ್ಲಿ ಒಂದು ಸಲಹಾ ಸಮಿತಿ ಇತ್ತು. ಆ ಸಲಹಾ ಸಮಿತಿಯನ್ನು ನಾವು ಮತ್ತೆ ಪುನರುಜ್ಜೀವನಗೊಳಿಸಿ ಈ ಸಮಿತಿಯಲ್ಲಿ ನಮ್ಮ ಶಾಸಕರು, ಅನೇಕ ಪರಿಣಿತರು ಇರುತ್ತಾರೆ. ಅವರ ಸಲಹೆಗಳನ್ನು ಆಗಿಂದಾಗ್ಗೆ ಪಡೆದು ಕೊಂಡು ನಮ್ಮ ಈ ರೇಷ್ಮೆ ಕೃಷಿಯ ಸಮಗ್ರ ಅಭಿವೃದ್ಧಿಗೆ ಹೊಸ ಆಯಾಮವನ್ನು ಕೊಡುತ್ತೇವೆ ಎಂದು ಹೇಳಿ ಈ ವಿಷಯದ ಚರ್ಚೆಯಲ್ಲಿ ಭಾಗ ವಹಿಸಿದ ಮಾನ್ಯ ಸದಸ್ಯರಿಗೆ ವಂದಿಸಿ. ಅವರ ಸಹಕಾರವನ್ನು ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ಫಿಲೇಚರ್ ಬಗ್ಗೆ ಕೆಎಸ್‌ಐಸಿ ಬಗ್ಗೆ ತಾವು ಪ್ರಸ್ತಾಪವನ್ನೇ ಮಾಡಲಿಲ್ಲವಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ಸಮಯದ ಅಭಾವ ಇರುವುದರಿಂದ ಮಾನ್ಯ ಮಂತ್ರಿಗಳು ನಮಗೆಲ್ಲ ಭರವಸೆ ಕೊಟ್ಟಿದ್ದಾರೆ. ಒಂದು ಸಮಿತಿ ಮಾಡುತ್ತೇನೆ, ಆ ಸಮಿತಿಯಲ್ಲಿ ನಿಮ್ಮ ಎಲ್ಲ ಅಭಿಪ್ರಾಯಗಳನ್ನು ಕೊಡಿ, ನಾನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಅವರ ಪ್ರಾಮಾಣಿಕತೆ ಬಗ್ಗೆ ನನಗೆ ನಂಬಿಕೆ ಇದೆ. ಈಗ ೨-೩ ವಿಚಾರ ಇದೆ. ನಾನು ನಿಮಗೆ ಮುಖ್ಯವಾಗಿ ಹೇಳಿದ್ದು ಏನೆಂದರೆ, ಬಿತ್ತನೆಗೂಡು ಬೆಳೆಯತಕ್ಕಂಥ ರೈತರು ಯಾರಿದ್ದಾರೆ ಅವರಿಗೆ ವಿಮಾ ಯೋಜನೆ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ಹೇಳಿದ್ದೆ. ಅದರ ಬಗ್ಗೆ ತಾವು ಗಮನಿಸಬೇಕು. ಎರಡನೆಯದಾಗಿ, ರೀಲರ್ಸ್‌ಗೆ ಪಾಸ್‌ಬುಕ್ ಕೊಡುವುದು ಬಹಳ ಮುಖ್ಯವಾಗಿರತಕ್ಕಂಥಾದ್ದು. ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ಆಗುವ ಅವ್ಯವಹಾರಗಳು ನಿಲ್ಲಬೇಕು ಅಂದರೆ ರೀಲರ್ಸ್‌ಗೆ ಪಾಸ್ ಬುಕ್ಕನ್ನು ಕೊಡಿ, ಅರ್ಧ ಕರಪ್ಷನ್ ಕಡಿಮೆಯಾಗುತ್ತದೆ. ವಿಶ್ವಬ್ಯಾಂಕ್ ಯೋಜನೆ ಬಗ್ಗೆ ಅಧಿಕಾರಿಗಳು ನಿಮ್ಮ ಕೈಯಲ್ಲಿ ಓದಿಸಿದರಲ್ಲ, ಹಿಂದಿನ ವಿಶ್ವಬ್ಯಾಂಕ್ ಯೋಜನೆ ಇದೆಯಲ್ಲ, ಕರ್ನಾಟಕದಲ್ಲಿ ಬೈವೋಲ್ಟಿನ್ ಮಾಡುತ್ತೇವೆಂದು ಹೇಳಿದ್ದಾರಲ್ಲ ಬೈವೋಲ್ಟಿನ್ ಬೆಳೆಯಬೇಕು ಎನ್ನುವುದರ ಬಗ್ಗೆ ನಾನು ಕ್ಯಾಬಿನೆಟ್‌ನಲ್ಲಿ ವಿರೋಧ ಮಾಡಿದ್ದೇನೆ. ಆ ವಿಚಾರ ತಮಗೆ ಗೊತ್ತಿದೆ. ಈ ಬೈವೋಲ್ಟಿನ್ ಬೆಳೆಯಬೇಕು ಎಂದು ವರ್ಲ್ಡ್ ಬ್ಯಾಂಕ್ ಸಹಾಯದಲ್ಲಿ ದುಡ್ಡು ಏನು ತೆಗೆದುಕೊಂಡಿದ್ದಾರೆ. ಎಷ್ಟು ಕೆ.ಜಿ. ಬೈವೋಲ್ಟಿನ್ ಪ್ರೊಡ್ಯೂಸ್ ಮಾಡಿದ್ದಾರೆಂದು ನಿಮ್ಮ ಅಧಿಕಾರಿಗಳನ್ನು ಕೇಳಿ ದೊಡ್ಡ ಮೋಸವಾಗಿದೆ. ದಿಸ್ ಈಸ್ ಬಿಗ್ ಫ್ರಾಡ್. ಈಗ ಇವರು ಎರಡನೇ ಯೋಜನೆಗೆ ನಿಮ್ಮ ಸರ್ಕಾರದ ಒಪ್ಪಿಗೆ ಪಡೆಯಲಿಕ್ಕೆ ಹೋಗುತ್ತಾ ಇದ್ದಾರೆ. ನಾನು ಹೇಳುತ್ತಾ ಇದ್ದೇನೆ. ರೇಷ್ಮೆಗೂಡು ಬೆಳೆಯುತಕ್ಕಂಥ ಒಬ್ಬ ರೈತನಾಗಿ ಇದರ ಅವಶ್ಯಕತೆಯಿಲ್ಲ ಎಂದು, ಆದ್ದರಿಂದ ತಾವು ಇವರ ಬಗ್ಗೆ ಪುನರ್ವಿಚಾರ ಮಾಡಬೇಕು. ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು. ನಿಮಗೆ ಒಳ್ಳೆಯ ಹೆಸರು ಬರಬೇಕು, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು, ಈ ಇಂಡಸ್ಟ್ರಿ ಉಳಿಯಬೇಕು ಅಂದರೆ, ನೀವು ಹಾಕಿದ್ದೀರಲ್ಲ ಟ್ಯಾಕ್ಸ್ ಅದನ್ನು ತೆಗೆಯದೇಹೋದರೆ ಇದು ಉಳಿಯುವುದೇ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸಿಂಧ್ಯರವರು ಹೇಳಿದಹಾಗೆ ಬೈವೋಲ್ಟಿನ್ ಬೆಳೆಯತಕ್ಕಂಥ ಉದ್ದೇಶ ಸರಿ ಎಂದು ಕಂಡರೂ ಕೂಡ ಅದರಿಂದ ಲಾಭ ಏನೂ ಸಿಕ್ಕಿಲ್ಲ. ಈಗ ಮೈಸೂರು ತಳಿ ಬೀಜ ಏನಿದೆ ಅದಕ್ಕೆ ಏನೇನು ಸೌಲಭ್ಯಗಳನ್ನು ಕಲ್ಪಿಸಿ ಉತ್ಪಾದಿಸಬೇಕೋ, ಆ ಕೆಲಸವನ್ನೇ ಅಗತ್ಯವಾಗಿ ಮಾಡಬೇಕಾಗಿದೆ. ಅಂತಹ ಸ್ಥಳಗಳಲ್ಲಿ ಇರತಕ್ಕಂಥ ಮಾರುಕಟ್ಟೆಗಳಿಗೆ ಹೆಚ್ಚು ಹೆಚ್ಚು ಹಣ ಕೊಡಬೇಕು, ನೀರಾವರಿ ಬಾವಿಗಳನ್ನು ತೋಡುವುದಕ್ಕೆ ಹೆಚ್ಚು ಸಹಾಯ ಮಾಡಬೇಕು, ಹುಳ ಸಾಕತಕ್ಕಂಥ ರೈತರಿಗೆ ಕೂಡ ಮನೆಗಳನ್ನು ಕಟ್ಟಿಸಿಕೊಡುವಂಥ ಪರಿಸ್ಥಿತಿ ಬಂದಿದೆ. ಆದುದರಿಂದ ಈ ಕಡ ಹೆಚ್ಚು ಗಮನ ಕೊಡಬೇಕು. ಅದಕ್ಕೆ ಏನು ಹೇಳುತ್ತಾರೆ ಎನ್ನುವುದನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.—ಮಾರಾಟ ತೆರಿಗೆ ಬಗ್ಗೆ ನೀವು ಏನಾದರೂ ಯೋಚನೆ ಮಾಡಿ, ಇಲ್ಲ ಅಂದರೆ ಸಮಗ್ರವಾಗಿ ಈ ರೇಷ್ಮೆ ಉದ್ಯಮವೇ ನೆಲ ಕಚ್ಚುತ್ತದೆ. ಇದು ಬಹಳ ಪ್ರಮುಖ್ಯವಾಗಿರತಕ್ಕಂಥಾದ್ದು.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೆ ಈ ಇನ್‌ಶ್ಯೂರೆನ್ಸ್ ಸ್ಕೀಂ ಬಗ್ಗೆ ಮಾನ್ಯ ಸಿದ್ಧ್ಯಾ ಅವರು ಹೇಳಿದರು. ಈ ಹಿಂದೆ ಈ ಇನ್‌ಶ್ಯೂರೆನ್ಸ್ ಸ್ಕೀಂ ಇತ್ತು. ಆದರೆ ಅದು ಸರಿಯಾದ ರೀತಿಯಲ್ಲಿ ಇಲ್ಲದೆ ಇದ್ದುದರಿಂದ ರೈತರು ಅದನ್ನು ಉಪಯೋಗಿಸಿಕೊಳ್ಳಲಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದು ಮಿಸ್‌ಗೈಡ್.

ಶ್ರೀ ಸಿ. ಬೈರೇಗೌಡ.—ಬೈವೋಲ್ಟಿನ್‌ಗೆ ಇದೆ, ಬೇರೆಯದಕ್ಕೆ ಇಲ್ಲ.

ಶ್ರೀ ಎಂ. ಎಸ್. ಆತ್ಮಾನಂದ.—ಯಾವರೀತಿ ಈ ಒಂದು ಇನ್‌ಶ್ಯೂರೆನ್ಸ್ ಸ್ಕೀಮನ್ನು ಆಚರಣೆಗೆ ತರಬೇಕು ಎಂದು ಪರಿಶೀಲನೆಮಾಡಿ......

ಶ್ರೀ ವಾಟಾಳ್ ನಾಗರಾಜ್.—ಸಲಹಾ ಸಮಿತಿ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ನಾವು ಸಲಹೆ ಕೊಡೋಣ.

ಉಪಾಧ್ಯಕ್ಷರು.—ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ಪ್ರಸ್ತಾವ ವಿನೆಂದರೆ, ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೬, ೮, ೯, ೫೪, ೮, ಮತ್ತು ೧೦ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದು ಮಾಡಿದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಬೇಡಿಕೆಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಕೈಗಾರಿಕೆ ಇಂಧನ ಮತ್ತು ವಕ್ಫ್

ಅಭಿಯಾಚನೆ ಕ್ರಮಾಂಕ 6—ಉದ್ಯಮಗಳು (ಚಿಕ್ಕ ಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ಸಹಕಾರ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 80,83,22,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲಿ 14,02,00,000ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8—ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 40.16.60.000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4 39,45.00 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9—ಸಹಕಾರ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 1,09,84,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 50,44,000ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 49—ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 3-3-1991 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 67,50,10,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3 11,98 00,000ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 54—ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 92,50,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ರೇಷ್ಮೆ ವ್ಯವಸಾಯದ ರಾಜ್ಯ ಮಂತ್ರಿಗಳು

ಅಭಿಯಾಚನೆ ಕ್ರಮಾಂಕ 10—ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1991ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 63,23 10,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 8 95,87,000ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಉಪಾಧ್ಯಕ್ಷರು :—ಈಗ ಸಭೆಯು ಮೇಲೆದ್ದು ನಾಳಿದ್ದು ಬೆಳಿಗ್ಗೆ 11-00 ಗಂಟೆಗೆ ಪುನಃ ಸೇರುವುದು.

ಸದನವು 8 ಗಂಟೆ 13 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 5ನೇ ಜುಲೈ ಮಾಹೆ 1990ರ ಗುರುವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)

(■ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)